ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 3 ಬುಧವಾರ 2024

ಸಂಪುಟ: 44 | ಸಂಚಿಕೆ: 257 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


ರಾಜ್ಯ ಬಿಜೆಪಿ ಹಲವು ನಾಯಕರಿಗೆ ಕೇಂದ್ರದಲ್ಲಿ ಅಧಿಕಾರ ಅನುಭವಿಸುವ ಆಲೋಚನೆ

ಮೋದಿ ಅಲೆಯಲ್ಲಿ ಗೆದ್ದು ಮಂತ್ರಿಯಾಗುವ ಕನಸು

● ಬಸವರಾಜ ಬೊಮ್ಮಾಯಿ, ಸಿ.ಪಿ.ಯೋಗೇಶ್ವರ್, ಶ್ರೀರಾಮುಲು, ಸಿ.ಟಿ.ರವಿ, ಗೋವಿಂದ ಕಾರಜೋಳ, ಡಾ.ಸುಧಾಕರ್ ಇನ್ನಿತರರು ಟಿಕೆಟ್ ಆಕಾಂಕ್ಷಿಗಳು ● ಸದಾ ಅಧಿಕಾರ ಇರಲೇಬೇಕು ಎಂಬುದು ರಾಜಕಾರಣಿಗಳ ಜಾಯಮಾನ!

ಬೆಂಗಳೂರು, ಜ.2(ಕೆಎಂಶಿ)–ವಿಧಾನ ಸಭಾ ಚುನಾವಣೆಯಲ್ಲಿ ಸೋಲುಂಡ ರಾಜ್ಯ ಬಿಜೆಪಿ ನಾಯಕರು ಕೇಂದ್ರ ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ.

ಇದರ ಜೊತೆಗೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಿ.ಪಿ.ಯೋಗೇಶ್ವರ್ ಸೇರಿದಂತೆ ಹಲವು ಮುಖಂಡರು ದೆಹಲಿ ರಾಜಕಾರಣಕ್ಕೆ ತೆರಳಲು ಆಸಕ್ತಿ ತೋರುತ್ತಿದ್ದಾರೆ. ರಾಜ್ಯ ಬಿಜೆಪಿ ಆಡಳಿತದಲ್ಲಿ ಸತತವಾಗಿ ಅಧಿಕಾರ ಅನುಭವಿಸಿದ ಗೋವಿಂದ ಕಾರಜೋಳ್, ಶ್ರೀರಾಮುಲು ಅಲ್ಲದೆ, ಸಿ.ಟಿ.ರವಿ, ಡಾ.ಕೆ.ಸುಧಾಕರ್ ಸೇರಿದಂತೆ ಕೆಲವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು ಕಂಡಿದ್ದರು. ಇವರೆಲ್ಲರೂ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿದು ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆಯ ಅಲೆಯಲ್ಲಿ ಜಯಗಳಿಸಿ ಸಂಸದರಾಗುವುದಷ್ಟೇ ಅಲ್ಲದೆ, ಸಚಿವ ಸ್ಥಾನವೂ ದಕ್ಕಬಹುದೆಂಬ ಆಶಾಭಾವನೆಯಲ್ಲಿದ್ದಾರೆ.


ಬಸವರಾಜ ಬೊಮ್ಮಾಯಿ


ಸಿ.ಪಿ.ಯೋಗೇಶ್ವರ್


ಶ್ರೀರಾಮುಲು


ಸಿ.ಟಿ.ರವಿ


ಗೋವಿಂದ ಕಾರಜೋಳ್


ಡಾ.ಕೆ.ಸುಧಾಕರ್

ಬಸವರಾಜ ಬೊಮ್ಮಾಯಿ ಹಾವೇರಿ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದು ಕೇಂದ್ರ ರಾಜಕಾರಣಕ್ಕೆ ತೆರಳುವ ಉತ್ಸಾಹದಲ್ಲಿದ್ದಾರೆ. ಸಂಸದರಾದರೆ ತಮ್ಮ ಹಿರಿತನ, ಜಾತಿ ಆಧಾರದ ಮೇಲೆ ತಮಗೆ ಕೇಂದ್ರದಲ್ಲಿ ಅಧಿಕಾರ ದಕ್ಕಬಹುದು ಎಂಬ ಆಲೋಚನೆಯಲ್ಲಿದ್ದಾರೆ. ಇನ್ನು ಗೋವಿಂದ ಕಾರಜೋಳ್ ವಿಜಯಪುರ ಮೀಸಲು ಕ್ಷೇತ್ರದಿಂದ, ಶ್ರೀರಾಮುಲು ಬಳ್ಳಾರಿ ಮೀಸಲು, ಸಿ.ಟಿ. ರವಿ ಬೆಂಗಳೂರು ಉತ್ತರ ಇಲ್ಲವೆ ಉಡುಪಿ–ಚಿಕ್ಕಮಗಳೂರು, ಡಾ.ಕೆ. ಸುಧಾಕರ್ ಚಿಕ್ಕಬಳ್ಳಾಪುರ ಇಲ್ಲವೇ ಬೆಂಗಳೂರು ಉತ್ತರ ಕ್ಷೇತ್ರದಿಂದ ಕಣಕ್ಕಿಳಿಯಲು ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ.

ಮಾಜಿ ಸಚಿವ, ಹಾಲಿ ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಬೆಂಗಳೂರು ಗ್ರಾಮಾಂತರದಿಂದ ಕಣಕ್ಕಿಳಿದು ಸಂಸದರಾಗಿ ಒಕ್ಕಲಿಗ ಕೋಟಾದ ಮೇಲೆ ಸಚಿವರಾಗಬಹುದೆಂಬ ಲೆಕ್ಕಾಚಾರದಲ್ಲಿದ್ದಾರೆ.

ಇದೇ ರೀತಿ ವಿಧಾನಸಭಾ ಚುನಾವಣೆಯಲ್ಲಿ ಸೋಲು ಕಂಡಿರುವ ಪ್ರಭಾವೀ ನಾಯಕರುಗಳು ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿದು ಅಧಿಕಾರ ಪಡೆಯುವ ಹಂಬಲದಲ್ಲಿದ್ದಾರೆ, ಅಷ್ಟೇ ಅಲ್ಲ, ಟಿಕೆಟ್ ಪಡೆಯಲು ತಮ್ಮ ಮುಖಂಡರುಗಳ ಮೂಲಕ ಪ್ರಭಾವ ಬೀರುತ್ತಿದ್ದಾರೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕೆಲವು ದಿನಗಳಲ್ಲೇ ಹಲವು ಕಾರಣಗಳಿಗೆ ತಮ್ಮ ವರ್ಚಸ್ಸನ್ನು ಕುಂದಿಸಿಕೊಂಡಿದೆ. ● 8ನೇ ಪುಟಕ್ಕೆ

ರಾಮಲಲ್ಲಾನ ವಿಗ್ರಹ ಅಡಿಯಿಂದ ಮುಡಿಯವರೆಗೆ 8 ಅಡಿ ಎತ್ತರವಿದೆ


● ಶಿಲ್ಪಿ ಅರುಣ್ ಯೋಗಿರಾಜ್ ನೇತೃತ್ವದ ವಿಗ್ರಹ ಕೆತ್ತನೆಯಲ್ಲಿ ಭಾಗಿಯಾದ ಶಿಲ್ಪಿ ಚಲುವರಾಜ್ ಮಾಹಿತಿ ● ಜ.1ರಂದೇ ಪ್ರತಿಷ್ಠಾಪನೆ ಮೂರ್ತಿ ನಿರ್ಧಾರವಾಗಿದೆ ● ನಮ್ಮದೇ ಆಯ್ಕೆಯಾಗಿರುವ ವಿಶ್ವಾಸವಿದೆ ● ಈವರೆಗೆ ಮೂರು ರಾಮಲಲ್ಲಾ ಮೂರ್ತಿಗಳ ಫೋಟೋ ಬಿಡುಗಡೆ ಆಗಿಲ್ಲ


ಅರುಣ್


ಚಲುವರಾಜ್

ಮೈಸೂರು, ಜ.2(ಪಿಎಂ)– ಅಯೋಧ್ಯೆ ಶ್ರೀರಾಮಮಂದಿರದ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲು ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಸೇರಿದಂತೆ ಮೂವರು ಶಿಲ್ಪಿಗಳು ರಾಮಲಲ್ಲಾನ ವಿಗ್ರಹಗಳನ್ನು ಕೆತ್ತನೆ ಮಾಡಿದ್ದು, ಈ ಪೈಕಿ ಒಬ್ಬರ ವಿಗ್ರಹ ಪ್ರತಿಷ್ಠಾಪನೆಯಾಗಲಿದೆ. ಅರುಣ್ ಅವರೊಂದಿಗೆ ಕೆತ್ತನೆ ಕೆಲಸದಲ್ಲಿ ಅವರ ಮಾವ ಶಿಲ್ಪಿ ಚಲುವರಾಜ್ ಸಹ ಭಾಗಿಯಾಗಿದ್ದರು.

ಕೆತ್ತನೆ ಕಾರ್ಯ ಪೂರ್ಣಗೊಂಡ ಹಿನ್ನೆಲೆಯಲ್ಲಿ ಈಗಾಗಲೇ ಮೈಸೂರಿಗೆ ಮರಳಿರುವ ಚಲುವರಾಜ್, ಮಂಗಳವಾರ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಅಯೋಧ್ಯೆಯಲ್ಲಿ ರಾಮಲಲ್ಲಾನ ವಿಗ್ರಹ ಕೆತ್ತನೆ ಕಾರ್ಯದಲ್ಲಿನ ತಮ್ಮ ಅನುಭವ ಹಂಚಿಕೊಂಡರು. ರಾಮಲಲ್ಲಾನ ● 8ನೇ ಪುಟಕ್ಕೆ


ಅಯೋಧ್ಯೆ ಶ್ರೀರಾಮ ಮಂದಿರದ ಗರ್ಭಗುಡಿ ಚಿತ್ರ ಇದಾಗಿದೆ. ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ಅವರು 2023ರ ಡಿ.9ರಂದು ತಮ್ಮ ಎಕ್ಸ್ ಖಾತೆಯಲ್ಲಿ ಈ ಚಿತ್ರ ಹಂಚಿಕೊಂಡಿದ್ದಾರೆ.

ಅಂಧಕಾಸುರನ ಸಂಹಾರದ ವೇಳೆ ಎಂಜಲು ನೀರು ಎರಚಿದ ಆರೋಪ

ನಾಳೆ ಸ್ವಯಂಘೋಷಿತ ನಂಜನಗೂಡು ಬಂದ್‌ಗೆ ಕರೆ

ಆರೋಪಿಗಳ ಬಂಧಿಸದಿದ್ದರೆ ಮೈಸೂರು ಜಿಲ್ಲಾ ಬಂದ್‌ಗೆ ಸಿದ್ಧತೆ



ನಂಜನಗೂಡು, ಜ.2– ಅಂಧಕಾಸುರನ ಸಂಹಾರದ ವೇಳೆ ಧಾರ್ಮಿಕ ಕಾರ್ಯಕ್ರಮಗಳಿಗೆ ಅಡ್ಡಿಪಡಿಸಿ, ದೇವರ ಉತ್ಸವ ಮೂರ್ತಿಗೆ ಎಂಜಲು ನೀರನ್ನು ಎರಚಿ ಅಪವಿತ್ರಗೊಳಿಸಿರುವ ಕಿಡಿಗೇಡಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಶ್ರೀಕಂಠೇಶ್ವರ ಭಕ್ತರು ಜ.4ರ ಗುರುವಾರದಂದು ಸ್ವಯಂಘೋಷಿತ ನಂಜನಗೂಡು ಬಂದ್‌ಗೆ ಕರೆ ನೀಡಿದ್ದಾರೆ.

ಯುವ ಬ್ರಿಗೇಡ್ ಮುಖಂಡ ಗಿರೀಶ್ ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ರಾಕ್ಷಸನೆಂದರೆ ಕೋರೆಹಲ್ಲು, ದೊಡ್ಡಮೀಸೆ, ಕೈಯಲ್ಲಿ ಹಿಡಿದ ಖಡ್ಗ, ವಿಷಜಂತು ಕೈಯ್ಯಲ್ಲಿ ಹಿಡಿದಿರುವುದು ಸಾಮಾನ್ಯ. ಇನ್ನು ಬೌದ್ಧಬಿಕ್ಕು ಎಂದು ಹೇಳುವ ಇವರು ಯಾವುದೇ ಬೌದ್ಧ ಬಿಕ್ಕು ಹಣೆಯಲ್ಲಿ ತಿಲಕ ಇಡುವುದಿಲ್ಲ. ಆದ್ದರಿಂದ ದೇವಾಲಯದ ಸಂಪ್ರದಾಯದಂತೆ ಹಾಗೂ ಧಾರ್ಮಿಕ ದತ್ತಿ ಇಲಾಖೆಯು ತನ್ನ ಕೈಪಿಡಿಯಲ್ಲಿರುವಂತೆ ಅನೂಚಾನವಾಗಿ ● 2ನೇ ಪುಟಕ್ಕೆ

ತಪೋವನ ಅಪಾರ್ಟ್‌ಮೆಂಟ್‌ನ ತೆರಿಗೆ ಬಾಕಿ ಪಾವತಿಗೆ ಅಂತಿಮ ಗಡುವು: ಅಪಾರ್ಟ್‌ಮೆಂಟ್‌ನ ಕಾಂಪೌಂಡ್‌ಗೆ ಬ್ಯಾನರ್ ಅಳವಡಿಸಿದ ನಗರಪಾಲಿಕೆ

ಇಲ್ಲಿ ನೆಲೆಸಿರುವ ಹಿರಿಯ ನಾಗರಿಕರು ಕಂಗಾಲು

● ತೆರಿಗೆ ವಸೂಲಿಗೆ ಇನ್ನೂ ಸೂಕ್ತ ಕಾನೂನು ಮಾರ್ಗ ಅರಿಯದ, ಅನುಸರಿಸದ ನಮ್ಮ ಮೈಸೂರು ಪಾಲಿಕೆ
● ಜೀವಮಾನದ ಗಳಿಕೆಯಲ್ಲಿ ನೆಮ್ಮದಿ ಅರಸುತ್ತಿರುವ ಹಿರಿಯ ಜೀವಗಳ ಘಾಸಿಗೊಳಿಸುವುದು ಸರಿಯೇ





ಮೈಸೂರು, ಜ.2– ಮೈಸೂರಿನ ಶಾರದಾದೇವಿನಗರದ ತಪೋವನ ಸೋಲೇಸ್ ಅಪಾರ್ಟ್‌ಮೆಂಟ್‌ನ ತೆರಿಗೆ ಬಾಕಿ ಪಾವತಿಗೆ ಅಂತಿಮ ಗಡುವು ನೀಡಿರುವ ಮೈಸೂರು ಮಹಾನಗರ ಪಾಲಿಕೆ, ತಪ್ಪಿದ್ದಲ್ಲಿ ಜಪ್ತಿ ಮಾಡಿ ತೆರಿಗೆ ವಸೂಲಿ ಮಾಡುವುದಾಗಿ ಎಚ್ಚರಿಕೆ ನೀಡಿದೆ. ಇದರಿಂದ ಇಲ್ಲಿ ನೆಲೆಸಿರುವ ಹಿರಿಯ ನಾಗರಿಕರು ಕಂಗಾಲಾಗಿದ್ದಾರೆ. ಮಾತ್ರವಲ್ಲ ಮುಂದೆ ಏನಾಗುವುದೋ ಎಂದು ಚಡಪಡಿಸುವಂತಾಗಿದೆ.

'ತಪೋವನ ಸೋಲೇಸ್ ಅಪಾರ್ಟ್‌ಮೆಂಟ್ ನಂ. 167/1, 167/1ಬಿ, ಬೋಗಾದಿ, ಮೈಸೂರು. ಈ ಸ್ವತ್ತಿನ ಆಸ್ತಿ ತೆರಿಗೆ 2018–19ನೇ ಸಾಲಿನಿಂದ 2023–24ನೇ ಸಾಲಿನವರೆಗೆ 1,18,95,132 ತೆರಿಗೆ ಹಾಗೂ ಮಾಸಿಕ ಶೇ.2ರಂತೆ ದಂಡ ಬಾಕಿ ಇದ್ದು, ಈಗಾಗಲೇ ಅಂತಿಮ ನೋಟಿಸ್ ನೀಡಲಾಗಿದ್ದರೂ ಮಾಲೀಕರು ಆಸ್ತಿ ತೆರಿಗೆ ಪಾವತಿಸಿರುವುದಿಲ್ಲ. ಜ.9ರ ಒಳಗೆ ಬಾಕಿ ಇರುವ ಪೂರ್ಣ ಆಸ್ತಿ ತೆರಿಗೆಯನ್ನು ಪಾವತಿಸದಿದ್ದಲ್ಲಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ನಿಯಮಗಳ ಅನುಸಾರ ಜಪ್ತಿ ಮಾಡುವ ಮೂಲಕ ಆಸ್ತಿ ತೆರಿಗೆಯನ್ನು ವಸೂಲಿ ಮಾಡಲು ಕ್ರಮ ವಹಿಸಲಾಗುವುದು' ಎಂಬ ನೋಟೀಸ್ ಅನ್ನು ಬ್ಯಾನರ್ ರೂಪದಲ್ಲಿ ನಗರಪಾಲಿಕೆ ವಲಯ ಕಚೇರಿ 3ರ ಅಧಿಕಾರಿಗಳು ಮಂಗಳವಾರ ಅಪಾರ್ಟ್‌ಮೆಂಟ್ ಕಾಂಪೌಂಡ್‌ಗೆ ಅಳವಡಿಸಿದ್ದಾರೆ. ಈ ಬ್ಯಾನರ್ ನೋಡಿದಂತಹ ಇಲ್ಲಿ ನೆಲೆಸಿರುವ ಹಿರಿಯ ಜೀವಗಳು ಘಾಸಿಗೊಂಡಿವೆ.

ವರ್ಷಾರಂಭದಲ್ಲೇ ಆಘಾತ: ತಪೋವನ ಸೋಲೇಸ್ ಅಪಾರ್ಟ್‌ಮೆಂಟ್‌ನ ಹೆಸರು ಕೇಳಲು ಹಿತವಾಗಿದೆ. ಉದ್ಯಮಿ ಶ್ರೀರಾಮ್ ಎಂಬುವವರು ಈ ಅಪಾರ್ಟ್‌ಮೆಂಟ್‌ನ ಮಾಲೀಕರೆಂದು ಪಾಲಿಕೆ ಮೂಲಗಳು ತಿಳಿಸಿವೆ. ಹಿರಿಯ ಜೀವಗಳಿಗೆ ● 8ನೇ ಪುಟಕ್ಕೆ

ಕಾನೂನು ಅವಕಾಶಗಳ ಉಪಯೋಗಿಸಿಕೊಳ್ಳುವಲ್ಲಿ ಪಾಲಿಕೆ ಅಧಿಕಾರಿಗಳೂ ವಿಫಲ

ತನ್ನ ಪಾಲಿನ ತೆರಿಗೆ ಸಂಗ್ರಹಿಸುವುದು ನಗರ ಪಾಲಿಕೆಯ ಜವಾಬ್ದಾರಿ. ಆದರೆ ಈ ಪ್ರಕ್ರಿಯೆಯ ಮಾರ್ಗ ಸಮರ್ಪಕವಾಗಿರಬೇಕು. ಅಪಾರ್ಟ್‌ಮೆಂಟ್ ನಿರ್ಮಿಸಿ, ಗ್ರಾಹಕರಿಗೆ ಹಂಚಿಕೆ ಮಾಡಿದ ಮಾಲೀಕ ಅಲ್ಲಿ ವಾಸವಿಲ್ಲ. ಹೀಗಿರುವಾಗ ಅಪಾರ್ಟ್‌ಮೆಂಟ್ ಬಳಿ ಸೂಚನಾ ಫಲಕ ಅಳವಡಿಸುವುದಕ್ಕಿಂತ ಆ ನೋಟೀಸ್ ಅನ್ನು ಮಾಲೀಕನಿಗೆ ತಲುಪಿಸುವ ನಿಟ್ಟಿನಲ್ಲಿ ಮುಂದಾಗಬೇಕು. ಆದರೆ ಯಾವುದೇ ಪೂರ್ವಾಲೋಚನೆ ಇಲ್ಲದೆ, ಪರಿಸ್ಥಿತಿ, ಸನ್ನಿವೇಶದ ಅರಿವಿಲ್ಲದೆ ಅಪಾರ್ಟ್‌ಮೆಂಟ್ ಬಳಿ ನೋಟೀಸ್‌ನ ಬ್ಯಾನರ್ ಹಾಕಿದ್ದಾರೆ. **ತೆರಿಗೆ ವಸೂಲಿಗೆ ಕಾನೂನಿನಲ್ಲಿ ಸಾಕಷ್ಟು ಅವಕಾಶಗಳಿವೆ. ಅಧಿಕಾರಿಗಳು ಇಂತಹ ಕಾನೂನಿನ ಅವಕಾಶ ಬಳಸಿಕೊಂಡು, ಮಾಲೀಕನ ವಿರುದ್ಧ ಕ್ರಮ ಕೈಗೊಂಡು ತೆರಿಗೆ ಬಾಕಿ ವಸೂಲಿಗೆ ಮುಂದಾಗಬೇಕಿತ್ತು. ಆದರೆ ಪಾಲಿಕೆ ಅಧಿಕಾರಿಗಳ ಪ್ರಮಾದದಿಂದ ಫ್ಲಾಟ್‌ಗಳಲ್ಲಿರುವ ಹಿರಿಯ ಜೀವಗಳು ಕಂಗಾಲಾಗಿವೆ. ಆಘಾತದಿಂದ ಅವರ ಆರೋಗ್ಯದಲ್ಲಿ ಏರುಪೇರಾದರೆ ಯಾರು ಜವಾಬ್ದಾರಿ. ಈ ವಿಚಾರದಲ್ಲಿ ಅಧಿಕಾರಿಗಳು ಸೂಕ್ಷ್ಮತೆಯಿಂದ ಕಾರ್ಯ ನಿರ್ವಹಿಸ ಬೇಕು. ಆದರೆ ಈಗ ನಮ್ಮ ಪಾಲಿಕೆಯದ್ದು ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತಹ ಕಾರ್ಯವೈಖರಿ.**

ಇಂದಿನಿಂದ ಕೋವಿಡ್ ವ್ಯಾಕ್ಸಿನೇಷನ್ ಆರಂಭ




ಬೆಂಗಳೂರು: ಕೋವಿಶೀಲ್ಡ್ ಅಥವಾ ಕೋವ್ಯಾಕ್ಸಿನ್ 2ನೇ ಲಸಿಕೆ ಪಡೆದವರಿಗೆ ನೀಡಲು ಕೇಂದ್ರ ಸರ್ಕಾರವು ರಾಜ್ಯಕ್ಕೆ 30,000 ಡೋಸ್ ಕಾರ್ಬೆವ್ಯಾಕ್ಸ್ ಲಸಿಕೆಯನ್ನು ಸರಬರಾಜು ಮಾಡಿದೆ. ಈ ಲಸಿಕೆಯನ್ನು ವಿಜಾತಿ (ಹೆಟೆರೊಲಾಗಸ್) ಮುನ್ನೆಚ್ಚರಿಕೆಯಾಗಿ ನೀಡಬಹುದು. ತಾಂತ್ರಿಕ ಸಲಹಾ ಸಮಿತಿಯ ಶಿಫಾರಸಿನಂತೆ ಕೋವಿಶೀಲ್ಡ್ ಅಥವಾ ಕೋವ್ಯಾಕ್ಸಿನ್ ಲಸಿಕೆಯ 2ನೇ ಡೋಸ್ ಪಡೆದು ಆರು ತಿಂಗಳು ಅಥವಾ 26 ತಿಂಗಳು ಪೂರೈಸಿದ ಬಳಿಕವೂ ಮುನ್ನೆಚ್ಚರಿಕೆ ಡೋಸ್ ಪಡೆಯದವರಿಗೆ ಈ ಲಸಿಕೆ ನೀಡಬಹುದು. 60 ವರ್ಷ ದಾಟಿದವರು, ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು ಈ ಲಸಿಕೆಯನ್ನು ಪಡೆಯಬಹುದು. ಕೋವಿಡ್–19 ಲಸಿಕಾಕರಣದ ಮಾರ್ಗಸೂಚಿಯಂತೆಯೇ ಈ ಲಸಿಕೆಯನ್ನು ನೀಡಲಾಗುವುದು. ಜಿಲ್ಲಾ ಆಸ್ಪತ್ರೆಗಳು ಮತ್ತು ಜಿಲ್ಲಾ ಮಟ್ಟದಲ್ಲಿ ನಿರ್ಣಯಿಸಲಾದ ತಾಲೂಕು ಆಸ್ಪತ್ರೆಗಳಿಗೆ ಮಾತ್ರ ಹಂಚಿಕೆ ಮಾಡಿ ಲಸಿಕಾಕರಣ ಹಮ್ಮಿಕೊಳ್ಳಲಾಗಿದೆ.


ಯಾವ ಜಿಲ್ಲೆಗೆ ಎಷ್ಟು ಕಾರ್ಬೆವ್ಯಾಕ್ಸ್ ಡೋಸ್ ಹಂಚಿಕೆ: ಬೆಂಗಳೂರು ನಗರ–840, ಬೆಂಗಳೂರು ● 2ನೇ ಪುಟಕ್ಕೆ

ಹುಣಸೂರಲ್ಲಿ ಭೀಕರ ಅಪಘಾತ: ನಾಲ್ವರು ಕೂಲಿ ಕಾರ್ಮಿಕರ ದುರ್ಮರಣ

● ಐವರಿಗೆ ಗಾಯ ● ಜೀಪ್‌ಗೆ ರಾಜ್ಯ ಸಾರಿಗೆ ಸಂಸ್ಥೆ ಎಲೆಕ್ಟ್ರಿಕ್ ಬಸ್ ಡಿಕ್ಕಿ ಹೊಡೆದು ಈ ದುರ್ಘಟನೆ


ಮನು


ಲೋಕೇಶ


ರಾಜೇಶ್


ಸೋಮೇಶ್





ಹುಣಸೂರು, ಜ.2(ಆರ್‌ಕೆ, ಕೆಕೆ)– ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್‌ಆರ್‌ಟಿಸಿ) ಎಲೆಕ್ಟ್ರಿಕ್ ಬಸ್, ಮಹೀಂದ್ರ ಜೀಪ್‌ಗೆ ಡಿಕ್ಕಿ ಹೊಡೆದು, ಜೀಪ್‌ನಲ್ಲಿದ್ದ ನಾಲ್ವರು ಸಾವನ್ನಪ್ಪಿದ್ದು, ಇತರ ಐವರು ಗಾಯಗೊಂಡಿದ್ದಾರೆ. ಈ ಘಟನೆ ಇಂದು ಬೆಳಿಗ್ಗೆ ಹುಣಸೂರು ನಗರದ ಆರ್‌ಟಿಓ ಸರ್ಕಲ್‌ನಲ್ಲಿ ಸಂಭವಿಸಿದೆ.

ಹೆಚ್.ಡಿ.ಕೋಟೆ ತಾಲೂಕು ದಮ್ಮನಕಟ್ಟೆ ಗ್ರಾಮದ, ಜೀಪ್ ಚಾಲಕ ಮನು (28), ಜಿಯಾರ್ ಗ್ರಾಮದವರಾದ ಮುದ್ದಯ್ಯರ ಮಗ ಲೋಕೇಶ್(35), ದೇವರಾಜ್‌ರ ಮಗ ರಾಜೇಶ್(38) ಹಾಗೂ ರಾಮಯ್ಯರ ಮಗ ಸೋಮೇಶ್ (40) ದುರಂತ ಸಾವಿಗೀಡಾದವರು. ಮಹೀಂದ್ರ ಜೀಪ್ ಮಾಲೀಕರಾದ ಮನು ತಂದೆ ಗೋಪಾಲ್ ಅವರು ಲೇಬರ್ ಕಂಟ್ರಾಕ್ಟರ್ ಆಗಿದ್ದು, ಅವರೂ ಜೀಪ್‌ನಲ್ಲಿದ್ದು ಘಟನೆಯಲ್ಲಿ ಆಶ್ಚರ್ಯಕರವಾಗಿ ಪಾರಾಗಿದ್ದಾರೆ. ಗಾಯಗೊಂಡವರನ್ನು ರವಿಕುಮಾರ್ ಮಗ ರವಿ(29), ದೊಡ್ಡಯ್ಯರ ಮಗ ಸಣ್ಣಸ್ವಾಮಿ(45), ಹೊಸಮಾಲ ಗ್ರಾಮದ ತಿಮ್ಮಯ್ಯರ ಮಗ ನಿಂಗರಾಜು (30), ನೂರಲಕುಪ್ಪೆ ಗ್ರಾಮದ ಪುಟ್ಟಯ್ಯರ ಮಗ ಕರಿಯಪ್ಪ(30) ಹಾಗೂ ಕುಮಾರಸ್ವಾಮಿ ಎಂದು ಗುರುತಿಸಲಾಗಿದೆ.

ಕುಮಾರಸ್ವಾಮಿ ಮತ್ತು ನಿಂಗರಾಜು ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸ್ಥಳಾಂತರಿಸಲಾಗಿದ್ದು, ಉಳಿದವರನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ವಿರಾಜಪೇಟೆಯಿಂದ ಮೈಸೂರು ಮೂಲಕ ಬೆಂಗಳೂರಿಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಎಲೆಕ್ಟ್ರಿಕ್ ಬಸ್ (ಕೆಎ 51 ಎಜೆ 0279) ಎದುರಿಗೆ ಬಂದ ಮಹೀಂದ್ರ ಜೀಪ್ (ಕೆಎ 12 ಪಿ 1968)ಗೆ ಬೆಳಗ್ಗೆ ಸುಮಾರು 8.35 ಗಂಟೆ ವೇಳೆಯಲ್ಲಿ ಹುಣಸೂರಿನ ಆರ್‌ಟಿಓ ಸರ್ಕಲ್‌ನಲ್ಲಿ ಡಿಕ್ಕಿ ಹೊಡೆದಿದೆ. ಬಸ್ ಡಿಕ್ಕಿ ಹೊಡೆದ ರಭಸಕ್ಕೆ ಜೀಪ್ ಸಂಪೂರ್ಣವಾಗಿ ಜಖಂಗೊಂಡಿದ್ದು, ಅದರಲ್ಲಿದ್ದ ಮೂವರು ಸ್ಥಳದಲ್ಲೇ ಸಾವನ್ನಪ್ಪಿದರೆ, ಓರ್ವ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಅಸು ನೀಗಿದರು. ಜೀಪ್‌ನಲ್ಲಿ ಒಬ್ಬರ ಮೃತದೇಹ ಸಿಲುಕಿದ್ದರೆ, ಇಬ್ಬರ ದೇಹಗಳು ರಸ್ತೆಯಲ್ಲಿ ಬಿದ್ದಿದ್ದವು.

ವಿಷಯ ತಿಳಿಯುತ್ತಿದ್ದಂತೆಯೇ, ಸ್ಥಳಕ್ಕೆ ಧಾವಿಸಿದ ಹುಣಸೂರು ಟೌನ್ ಠಾಣೆ ಇನ್ಸ್‌ಪೆಕ್ಟರ್ ಧರ್ಮೇಂದ್ರ ಮತ್ತು ಸಿಬ್ಬಂದಿ ಸ್ಥಳ ಮಹಜರು ನಡೆಸಿ ಗಾಯಗೊಂಡವರನ್ನು ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿ, ಮೃತದೇಹಗಳನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಿದರು. ಎಸ್ಪಿ ಸೀಮಾ ಲಾಟ್ಕರ್, ಎಎಸ್ಪಿ ಡಾ. ಬಿ.ಎನ್.ನಂದಿನಿ ಅವರೂ ಘಟನಾ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದರು. ಕೆಎಸ್‌ಆರ್‌ಟಿಸಿ ಅಧಿಕಾರಿಗಳೂ ಸ್ಥಳಕ್ಕೆ ಬಂದು ಮೃತರ ಅಂತ್ಯಕ್ರಿಯೆಗಾಗಿ ಸಂತ್ರಸ್ತ ಕುಟುಂಬದವರಿಗೆ ತಲಾ 25,000 ರೂ. ನೆರವಿನ ಚೆಕ್ ವಿತರಿಸಿದರು. ನಿಯಮಾನುಸಾರ ಸಂಸ್ಥೆಯಿಂದ ನಂತರ ಪರಿಹಾರ ನೀಡಲಾಗುವುದು ಎಂದು ಅವರು ತಿಳಿಸಿದ್ದಾರೆ. ● 8ನೇ ಪುಟಕ್ಕೆ

ಮಂತ್ರಾಕ್ಷತೆ ಮನೆ ಮನೆಗೆ ತಲುಪಿಸುವ ಅಭಿಯಾನ



ಮೈಸೂರು,ಜ.2–ಅಯೋಧ್ಯೆಯಲ್ಲಿ ಶ್ರೀರಾಮಮೂರ್ತಿ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಅಯೋಧ್ಯೆಯಿಂದ ಬಂದಂತಹ ಅಕ್ಷತೆ ಹಾಗೂ ಆಮಂತ್ರಣ ಪತ್ರಿಕೆಯನ್ನು ಮನೆ ಮನೆಗೆ ತಲುಪಿಸುವ ಅಭಿಯಾನ ಮಂಗಳವಾರ ನಗರದಲ್ಲಿ ಆರಂಭಗೊಂಡಿತು.

ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಆರ್‌ಎಸ್‌ಎಸ್, ಬಜರಂಗದಳ, ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಮನೆ ಮನೆಗೆ ತಲುಪಿಸುವ ಮುನ್ನ ಅಕ್ಷತೆ ಹಾಗೂ ಆಮಂತ್ರಣ ಪತ್ರಿಕೆಗೆ ಪೂಜೆ ಸಲ್ಲಿಸಲಾಯಿತು. ಬಳಿಕ ಮಾತನಾಡಿದ ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಶ್ರೀರಾಮಮಂದಿರದ ಬಗ್ಗೆ ಮತ್ತೆ ಹೋರಾಟದ ಬಗ್ಗೆ ಪ್ರಸ್ತುತ ಸನ್ನಿವೇಶಗಳ ಬಗ್ಗೆ ಹೇಳಿ ಮಂತ್ರಾಕ್ಷತೆ ಭಾವಚಿತ್ರ ಹಾಗೂ ಆಮಂತ್ರಣ ಪತ್ರಿಕೆಯನ್ನು ನೀಡಿ ಜನವರಿ 22ರಂದು ತಮ್ಮ ತಮ್ಮ ಮನೆಯಲ್ಲಿ ಶ್ರೀರಾಮನ ಪೂಜೆ ಮಾಡಿ ಅಂದು ಸಾಯಂಕಾಲ ಮನೆಯ ಮುಂದೆ ದೀಪಗಳಿಂದ ಅಲಂಕರಿಸಲು ಮನವಿ ಮಾಡಿದರು.

ಚಾಮರಾಜ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಪಂಕಜ್ ಪರೀಕ್, ಆರ್‌ಎಸ್‌ಎಸ್ ಮುಖಂಡ ರತನ್ ನರೇಶ್, ದಿ ಮೈಸೂರು ಬ್ಯಾಂಕ್ ಉಪಾಧ್ಯಕ್ಷ ಹರೀಶ್‌ಕುಮಾರ್, ಬಿಜೆಪಿ ಚಾಮರಾಜ ಯುವ ಮೋರ್ಚಾ ಉಪಾಧ್ಯಕ್ಷ ಪಂಕಜ್ ಪಾರಿಕ್, ಮಂಗಲ್, ನರೇಶ್ ರಾಜು, ಮಂಗಳ್ ರಾಜು, ಮಂಗಳಗಾಂ ರಾಜು, ಡೆಬಲಾ ಅಜಯ್ ರಾಮಚಂದ್ರ, ಸುಭಾಷ್, ಮಹಾ ಶಕ್ತಿ ಕೇಂದ್ರ ಅಧ್ಯಕ್ಷ ಶಾಂತಿದೊಡ್ಡ ವಕ್ಕಲಗೇರಿ ರಾಮಭಕ್ತರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಂತೇಪೇಟೆಯ ಏಳು ಅಂಗಡಿ ಮೇಲೆ ನಗರಪಾಲಿಕೆ ಅಧಿಕಾರಿಗಳ ದಾಳಿ

ಸುಮಾರು 9 ಟನ್ ನಿಷೇಧಿತ ಪ್ಲಾಸ್ಟಿಕ್ ವಶ

ಮೈಸೂರು,ಜ.2(ಆರ್‌ಕೆ)–ಮೈಸೂರಿನ ಸಂತೇಪೇಟೆ ಸುತ್ತಮುತ್ತಲಿನ 7 ಅಂಗಡಿಗಳ ಮೇಲೆ ದಾಳಿ ನಡೆಸಿದ ಪಾಲಿಕೆ ಅಧಿಕಾರಿಗಳು ಸುಮಾರು 9 ಟನ್ ನಿಷೇಧಿತ ಪ್ಲಾಸ್ಟಿಕ್ ಅನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರು ಮಹಾನಗರಪಾಲಿಕೆ ಕಮೀಷನರ್ ಆಸಾದ್ ಉರ್ ರೆಹಮಾನ್ ಷರೀಫ್ ನೇತೃತ್ವದಲ್ಲಿ ಮಂಗಳವಾರ ಬೆಳಗ್ಗೆ 8.15 ಗಂಟೆಯಿಂದ ಆರಂಭವಾದ ಕಾರ್ಯಾಚರಣೆಯು ಮಧ್ಯಾಹ್ನ 3.15 ಗಂಟೆಯವರೆಗೂ ನಡೆಯಿತು. ಸಂತೇಪೇಟೆಯ ಬಿಡಾರಂ ಕೃಷ್ಣಪ್ಪ ರಸ್ತೆಯಲ್ಲಿರುವ ನಂದಿ ಬ್ಯಾಗ್ ಭಂಡಾರ, ಮಹೇಶ್ ಪಾಲಿಮರ್ಸ್, ಧನಲಕ್ಷ್ಮಿ ಟ್ರೇಡರ್ಸ್, ದಯಾನಂದ ಎಂಟರ್‌ಪ್ರೈಸಸ್, ಮಧು ಪ್ಲಾಸ್ಟಿಕ್ಸ್, ರಾಮ್‌ದೇವ ಬ್ಯಾಂಗ್ಸ್ ಮತ್ತು ವಾಸವಿ ಮಾರ್ಕೆಟಿಂಗ್ ಅಂಗಡಿಯಲ್ಲಿ ಅನಧಿಕೃತವಾಗಿ ಪ್ಲಾಸ್ಟಿಕ್ ಪದಾರ್ಥಗಳನ್ನು ದಾಸ್ತಾನಿಟ್ಟು ಮಾರಾಟ ಮಾಡುತ್ತಿದ್ದುದು ಪರಿಶೀಲನೆ ವೇಳೆ ಪತ್ತೆಯಾಯಿತು ಎಂದು ನಗರಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.



ಈ ಮೊದಲೇ ನಿಷೇಧಿತ ಪ್ಲಾಸ್ಟಿಕ್ ಪದಾರ್ಥಗಳನ್ನು ಶೇಖರಿಸಿರುವುದಾಗಲೀ, ಮಾರಾಟ ಮಾಡುವುದಾಗಲೀ, ಸಾಗಣೆ ಮಾಡುವುದು ಕಾನೂನುಬಾಹಿರವಾಗಿದ್ದು, ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುವುದರಿಂದ ನಿಯಮ ಪಾಲಿಸುವಂತೆ ತಿಳುವಳಿಕೆ ಮೂಡಿಸಲಾಗಿತ್ತಾದರೂ ಲೆಕ್ಕಿಸದೇ ಅಂಗಡಿ ಮಾಲೀಕರು ಪ್ಲಾಸ್ಟಿಕ್ ಮಾರುತ್ತಿದ್ದುದು ಕಂಡು ಬಂದ ಹಿನ್ನೆಲೆಯಲ್ಲಿ ದಾಳಿ ನಡೆಸಿ ಶೋಧಿಸಲಾಯಿತು ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಕೆಲವರು ಮನೆಯಲ್ಲೇ ಗೋಡೌನ್ ಮಾಡಿಕೊಂಡಿದ್ದು, ನಗರಪಾಲಿಕೆ ಕಣ್ತಪ್ಪಿಸಿ ಅಪಾರ ಪ್ರಮಾಣದ ಪ್ಲಾಸ್ಟಿಕ್ ಅನ್ನು ಶೇಖರಿಸಿಟ್ಟಿದ್ದರು. ಪ್ಲಾಸ್ಟಿಕ್ ಪದಾರ್ಥ ಖರೀದಿಸಿರುವುದಕ್ಕೆ ಸಾಗಣೆ ಮಾಡಿರುವುದಕ್ಕೆ ಯಾವುದೇ ದಾಖಲೆ ಪತ್ರ ಇರದಿರುವುದೂ ದಾಳಿ ವೇಳೆ ಕಂಡು ಬಂದಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಿನವಿಡೀ ನಡೆದ ಶೋಧ ಕಾರ್ಯಾಚರಣೆಯಲ್ಲಿ ಲಕ್ಷಾಂತರ ರೂ. ಮೌಲ್ಯದ ಸುಮಾರು 9 ಟನ್ ತೂಕದ ಪ್ಲಾಸ್ಟಿಕ್ ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಅಂಗಡಿ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಹಾಗೂ ಮತ್ತೆ ಪ್ಲಾಸ್ಟಿಕ್ ಮಾರಾಟ ಮುಂದುವರಿಸಿದರೆ ಅಂತಹ ಅಂಗಡಿಗಳ ಪರವಾನಗಿ ರದ್ದುಪಡಿಸಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಪಾಲಿಕೆ ಹಿರಿಯ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ವಲಯ ಕಚೇರಿ–6ರ ವಲಯಾಧಿಕಾರಿ ಪ್ರತಿಭಾ, ಪರಿಸರ ಇಂಜಿನಿಯರ್‌ಗಳು, ಆರೋಗ್ಯ ನಿರೀಕ್ಷಕರು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು, ಅಭಯ ತಂಡದ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಶ್ರೀ ಮಾತಾಶ್ರೀ ಶಾರದಾದೇವಿ 171ನೇ ಜಯಂತಿ ಇಂದು



ಮೈಸೂರು,ಜ.2–ಪ್ರಜ್ಞಾವಂತ ನಾಗರಿಕ ವೇದಿಕೆ ಹಾಗೂ ಶಾರದಾದೇವಿ ನಾಗರಿಕರ ಹಿತ ರಕ್ಷಣಾ ವೇದಿಕೆ ವತಿಯಿಂದ ಶ್ರೀ ಮಾತಾಶ್ರೀ ಶಾರದಾದೇವಿ 171ನೇ ಜಯಂತಿ ಅಂಗವಾಗಿ ಆಧ್ಯಾತ್ಮಿಕ ಲೋಕ ಕಾರ್ಯಕ್ರಮವನ್ನು ಶಾರದಾದೇವಿ ನಗರದ ವೃತ್ತದಲ್ಲಿ ಜ.3ರಂದು ಬೆಳಿಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್ ತಿಳಿಸಿದ್ದಾರೆ

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ರಾಜ್ಯ ಹಿಂದುಳಿದ ವರ್ಗದ ಮೋರ್ಚಾ ಅಧ್ಯಕ್ಷ ಆರ್.ರಘು ಕೌಟಿಲ್ಯ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಚಾಮುಂಡೇಶ್ವರಿ ನಗರ ಬಿಜೆಪಿ ಅಧ್ಯಕ್ಷ ಬಿ.ಎಂ.ರಘು, ಹಿರಿಯ ಸಮಾಜ ಸೇವಕರಾದ ಕೆ.ರಘುರಾಂ ವಾಜಪೇಯಿ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ ಹಾಗೂ ಇನ್ನಿತರರು ಆಗಮಿಸಲಿದ್ದಾರೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಭೀಕರ ಅಪಘಾತ

ಎಂಬಿಬಿಎಸ್, ಬಿಇ ವಿದ್ಯಾರ್ಥಿಗಳ ದುರ್ಮರಣ

ಬೆಂಗಳೂರಲ್ಲಿ ವರ್ಷಾಚರಣೆ ಮಾಡಿ, ಮೈಸೂರಿಗೆ ಬರುತ್ತಿದ್ದಾಗ ಸೋಮವಾರ ಮುಂಜಾನೆ ದುರ್ಘಟನೆ; 9 ಮಂದಿಗೆ ಗಾಯ

ಮೈಸೂರು, ಜ. 2(ಆರ್‌ಕೆ)– ಎರಡು ಕಾರುಗಳ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಎಂಬಿಬಿಎಸ್ ಮತ್ತು ಬಿಇ ವಿದ್ಯಾರ್ಥಿಗಳಿಬ್ಬರು ಸಾವನ್ನಪ್ಪಿ, ಇತರ 9 ಮಂದಿ ಗಾಯಗೊಂಡಿರುವ ಘಟನೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಹೊಸ ವರ್ಷದ ಮೊದಲ ದಿನ (ಸೋಮವಾರ) ಮುಂಜಾನೆ ಸಂಭವಿಸಿದೆ. ಬಿಹಾರದ ಪಾಟ್ನಾ ನಿವಾಸಿಗಳಾದ ಮಾಯಿನ್ ಸಿಂಗ್ (19) ಹಾಗೂ ಹರ್ನಾವ್ (19) ದುರಂತ ಸಾವಿಗೀಡಾದವರು. ಬೆಂಗಳೂರಿನ ಸಪ್ತಪದಿ ಮೆಡಿಕಲ್ ಕಾಲೇಜಿನಲ್ಲಿ ಮಾಯಿನ್ ಸಿಂಗ್ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದರೆ, ಮಣಿಪಾಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಹರ್ನಾವ್ ಬಿಇ ಓದುತ್ತಿದ್ದ.



2023ರ ಡಿಸೆಂಬರ್ 31ರ ಭಾನುವಾರ ರಾತ್ರಿ ಬೆಂಗಳೂರಲ್ಲಿ ಹೊಸ ವರ್ಷಾಚರಣೆ ಮುಗಿಸಿ ಕಿಯಾ ಕಾರಿನಲ್ಲಿ ಈ ಇಬ್ಬರು ಸೇರಿದಂತೆ 6 ಮಂದಿ ಮೈಸೂರಿಗೆ ಬರುತ್ತಿದ್ದರು. ಅದೇ ವೇಳೆ ಬೆಂಗಳೂರಿನಿಂದ ಸರ್ವೀಸ್ ರಸ್ತೆಯಲ್ಲಿ ಮೈಸೂರು ಕಡೆಗೆ ಬರುತ್ತಿದ್ದ ಫೋರ್ಡ್ ಫಿಯೆಟ್ ಕಾರು ಶ್ರೀರಂಗಪಟ್ಟಣದ ಗೌರಿಪುರ ಬಳಿ ಮೇನ್ ಕ್ಯಾರಿಯೇಜ್‌ಗೆ ಎಂಟ್ರಿ ತೆಗೆದುಕೊಂಡ ಕಾರಣ ಮೇನ್ ಕ್ಯಾರಿಯೇಜ್‌ನಲ್ಲಿ ವೇಗವಾಗಿ ಬರುತ್ತಿದ್ದ ಕಿಯಾ ಕಾರು ಡಿಕ್ಕಿ ಹೊಡೆದು ಹೆದ್ದಾರಿ ಡಿವೈಡರ್‌ಗೆ ಅಪ್ಪಳಿಸಿದೆ.

ಪರಿಣಾಮ ಕಿಯಾ ಕಾರಿನಲ್ಲಿದ್ದ ಮಾಯಿನ್ ಸಿಂಗ್ ಮತ್ತು ಹರ್ನಾವ್ ತಲೆಗೆ ತೀವ್ರ ಗಾಯಗಳಾಗಿ ಸಾವನ್ನಪ್ಪಿದರೆ, ದುರಂತದಲ್ಲಿ ಕಾರಿನಲ್ಲಿದ್ದ ಉಳಿದ ನಾಲ್ವರು ಹಾಗೂ ಫಿಯೆಟ್ ಕಾರಿನ ಐವರೂ ಗಾಯಗೊಂಡರು. ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಧಾವಿಸಿದ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್ ಹಾಗೂ ಸಿಬ್ಬಂದಿ ಮಹಜರು ನಡೆಸಿ ಗಾಯಗೊಂಡಿದ್ದ ಯುವಕರನ್ನು ಆಸ್ಪತ್ರೆಗೆ ಕರೆದೊಯ್ದರೆ, ಇಬ್ಬರ ಮೃತದೇಹಗಳನ್ನು ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಶವಾಗಾರಕ್ಕೆ ಸ್ಥಳಾಂತರಿಸಿದರು.

ಗಾಯಗೊಂಡ 9 ಮಂದಿ ಪೈಕಿ 6 ಮಂದಿ ಮೈಸೂರಿನ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಡಿಸ್‌ಚಾರ್ಜ್ ಆಗಿದ್ದಾರೆ. ಉಳಿದವರು ಗಂಭೀರ ಗಾಯಗಳಾಗಿರುವುದರಿಂದ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರು, ಸೋಮವಾರ ಸಂಜೆ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹಗಳನ್ನು ಬಿಹಾರ್‌ನಿಂದ ಬಂದಿದ್ದ ವಾರಸುದಾರರಿಗೆ ಹಸ್ತಾಂತರಿಸಿದರು.

ರಾಮಮಂದಿರದ ವಿಚಾರ ಮುಂದಿಟ್ಟು ಮತ್ತೆ ಅಧಿಕಾರಕ್ಕೆ ಬರಲು ಬಿಜೆಪಿ ಯತ್ನ

ಮಾಜಿ ಸಚಿವ ಸೋಮಶೇಖರ್ ಆರೋಪ

ಮೈಸೂರು, ಜ.2(ಬಿಎಲ್‌ಯು)– ರಾಮಮಂದಿರದ ಬಗ್ಗೆ ಜನರಲ್ಲಿರುವ ಭಕ್ತಿ–ಭಾವದ ಭಾವನಾತ್ಮಕ ವಿಚಾರ ಮುಂದಿಟ್ಟುಕೊಂಡು ಬಿಜೆಪಿ ನಾಯಕರು ದೇಶದ ಜನರಿಗೆ ಮಕ್ಮಲ್ ಟೋಪಿ ಹಾಕಿ ಮತ್ತೆ ಅಧಿಕಾರಕ್ಕೆ ಬರಲು ರಾಜಕೀಯ ತಂತ್ರಗಾರಿಕೆ ರೂಪಿಸಿದ್ದಾರೆ ಎಂದು ಮಾಜಿ ಸಚಿವ ಬಿ.ಸೋಮಶೇಖರ್ ಆರೋಪಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುತ್ವದ ಹೆಸರಿನಲ್ಲಿ ಬಿಜೆಪಿಯವರು ರಾಜಕೀಯ ಮಾಡುತ್ತಾ ಜನರಿಗೆ ಮೋಸ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ಮತ್ತೊಮ್ಮೆ ಇವಿಎಂ ದುರುಪಯೋಗ ಮಾಡಿಕೊಳ್ಳಲು ಮುಂದಾಗಿದ್ದಾರೆ. ಈ ಬಗ್ಗೆ ಸ್ಯಾಮ್ ಪಿತ್ರೋಡಾ ಕೂಡ ಸಂಶಯ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ವಿದೇಶದಲ್ಲಿರುವ ಭಾರತೀಯರ ಕಪ್ಪು ಹಣ ತಂದು ದೇಶದ ಪ್ರತಿಯೊಬ್ಬ ಪ್ರಜೆಗೂ 15 ಲಕ್ಷ ರೂಪಾಯಿ ನೀಡುತ್ತೇವೆ, 2 ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ, ಸ್ವಾಮಿನಾಥನ್ ವರದಿಯಂತೆ ರೈತರ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ನೀಡುತ್ತೇವೆ, ಡಾಲರ್ ಬೆಲೆ 40 ರೂಪಾಯಿಗೆ ಇಳಿಸುತ್ತೇವೆ ಎಂಬುವುದು ಸೇರಿದಂತೆ ಭರಪೂರ ಭರವಸೆಗಳನ್ನು ನೀಡಿದರು.

ಆದರೆ ಈ ತನಕ ಯಾವುದೇ ಆಶ್ವಾಸನೆ ಈಡೇರಿಸಿಲ್ಲ. ಈ ಮೋಸ ಮರೆಮಾಚಲು ಕಳೆದ ಚುನಾವಣೆ ಸಂದರ್ಭದಲ್ಲಿ ಪುಲ್ವಾಮಾ ದಾಳಿ ವಿಚಾರ ಮುಂದಿಟ್ಟುಕೊಂಡು ಮತ್ತೆ ಅಧಿಕಾರಕ್ಕೆ ಬಂದರು ಎಂದು ಸೋಮಶೇಖರ್ ದೂರಿದರು. ಅಧಿಕಾರಕ್ಕೆ ಬಂದ ದಿನದಿಂದ ಇಲ್ಲಿ ತನಕ ಮೀಸಲಾತಿಗೆ



ಪೆಟ್ಟು ಕೊಟ್ಟಿದ್ದಾರೆ. ಐಐಟಿ ಸೇರಿದಂತೆ ಇತರೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿರುವ ಜಾತಿ ವ್ಯವಸ್ಥೆಯಿಂದ ಬೇಸತ್ತು 13,600 ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮೊಟಕುಗೊಳಿಸಿ ಹೊರ ಬಂದಿದ್ದಾರೆ ಎಂದು ಆರೋಪಿಸಿದರು.

ರಾಮಮಂದಿರ ವಿವಾದದ ತೀರ್ಪು ಬರುವ ವಿಚಾರದಲ್ಲಿ ಕೂಡ ನ್ಯಾಯಾಂಗ ವ್ಯವಸ್ಥೆ ಮೇಲೆಯೇ ಪ್ರಭಾವ ಬೀರಿದರು. ಈಗ ರಾಮಮಂದಿರದ ಭಕ್ತಿ ಭಾವದ ಭಾವನಾತ್ಮಕ ವಿಚಾರ ಇಟ್ಟುಕೊಂಡು ಜನರಿಗೆ ಮಕ್ಮಲ್ ಟೋಪಿ ಹಾಕಿ ಮತ್ತೆ ಚುನಾವಣೆಯಲ್ಲಿ ಗೆಲುವು ಸಾಧಿಸಲು ರಾಜಕೀಯ ತಂತ್ರಗಾರಿಕೆ ರೂಪಿಸಿದ್ದಾರೆ ಎಂದು ಸೋಮಶೇಖರ್ ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬರಲು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಘಟನೆಯ ಶ್ರಮ ಕಾರಣವಾಗಿದ್ದರಿಂದ ಅವರನ್ನೆ ಟಾರ್ಗೆಟ್ ಮಾಡಿದ್ದಾರೆ. ವಿಪಕ್ಷ ನಾಯಕರನ್ನು ಹತ್ತಿಕ್ಕಲು ಸಿಬಿಐ, ಇಡಿಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಸೋಮಶೇಖರ್ ಆಪಾದಿಸಿದರು. ಕಾಂಗ್ರೆಸ್ ಮುಖಂಡ ದೇವನೂರು ಶಿವಮಲ್ಲು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸುತ್ತೂರು ಜೆಎಸ್‌ಎಸ್ ಶಾಲಾ ಭೌತವಿಜ್ಞಾನ ಶಿಕ್ಷಕ ವಿ.ವಿನೋದ್‌ಕುಮಾರ್ ರಾಷ್ಟ್ರಮಟ್ಟಕ್ಕೆ ಆಯ್ಕೆ



ಸುತ್ತೂರು,ಜ.2–ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉರ್ದು ಮತ್ತು ಇತರ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ರಾಜ್ಯ ಶಿಕ್ಷಣ ಮತ್ತು ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಸಹಯೋಗದಲ್ಲಿ ರಾಜ್ಯ ಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆಯನ್ನು ದೊಡ್ಡಬಳ್ಳಾಪುರದಲ್ಲಿ ಆಯೋಜಿಸಲಾಗಿತ್ತು. ಇದರಲ್ಲಿ ಭಾಗವಹಿಸಿದ್ದ ಉತ್ತಮ ಹತ್ತು ಮಾದರಿಗಳಲ್ಲಿ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲಾ ವಿಜ್ಞಾನ ಶಿಕ್ಷಕರಾದ ವಿ.ವಿನೋದ್‌ಕುಮಾರ್ ಅವರ 'ಚತುರ ಕನ್ನಡಕ' ಮಾದರಿಯು ಪ್ರಥಮ ಸ್ಥಾನ ಪಡೆದು ವಿಭಾಗೀಯ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದೆ.



ಮೈಸೂರು ತಾಲೂಕು ಕಡಕೊಳ ಗ್ರಾಮದಲ್ಲಿ ಯುಕೋ ಬ್ಯಾಂಕ್ ಪ್ರಾಯೋಜಕತ್ವದಲ್ಲಿ ಆಯೋಜಿಸಿದ್ದ ವಿಕಸಿತ ಭಾರತ ಸಂಕಲ್ಪ ಯಾತ್ರೆ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಕಡಕೊಳ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ದೀಪಾ, ಯುಕೋ ಬ್ಯಾಂಕ್ ಶಾಖಾ ವ್ಯವಸ್ಥಾಪಕಿ ಶ್ರೀಮತಿ ಉಮಾನಾಯಕಿ, ದಿ ಯೂನಿಯನ್ ರೈತ ಸೇವಾ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕಡಕೊಳ ಕುಮಾರಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಶಿವಕುಮಾರ್, ಇಂಡೇನ್ ಗ್ಯಾಸ್‌ನ ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

'ಕಾಕನಕೋಟೆ' ನಾಟಕ ಪ್ರದರ್ಶನ

ಮೈಸೂರು,ಜ.2–ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಎಸ್.ರಾಮನಾಥ ಅವರ ನಿರ್ದೇಶನದಲ್ಲಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ವಿರಚಿತ 'ಕಾಕನಕೋಟೆ' ನಾಟಕ ಪ್ರದರ್ಶನವನ್ನು 2024ರ ಜನವರಿ 7, 14, 20, 27, 28ರಂದು ಸಂಜೆ 6.30ಕ್ಕೆ ರಂಗಾಯಣದ ವನರಂಗ ಬಯಲು ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ರಂಗಾಯಣದ ಉಪನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ವಿವಿ ಖೋ ಖೋ ಮಹಿಳೆಯರ ತಂಡಕ್ಕೆ ಪ್ರಥಮ ಬಹುಮಾನ

ಮೈಸೂರು, ಜ. 2– 2023–24ನೇ ಸಾಲಿನ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಖೋ–ಖೋ ಪಂದ್ಯಾವಳಿಯು ತಮಿಳುನಾಡಿನ ತಿರುವರೂರು ಸೆಂಟ್ರಲ್ ಯುನಿವರ್ಸಿಟಿ ಆಫ್ ತಮಿಳುನಾಡಿನಲ್ಲಿ ನಡೆಯಿತು. ಈ ಪಂದ್ಯಾವಳಿಯಲ್ಲಿ ಸುಮಾರು 80 ವಿಶ್ವವಿದ್ಯಾನಿಲಯಗಳು ಭಾಗವಹಿಸಿದ್ದು, ಅದರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಖೋ–ಖೋ ಮಹಿಳೆಯರ ತಂಡವು ಪ್ರಥಮ ಸ್ಥಾನ ಗಳಿಸಿ, ಫೆ.15ರಿಂದ 18ರವರೆಗೆ ಪುಣೆಯ ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಖೋ–ಖೋ ಪಂದ್ಯಾವಳಿಯಲ್ಲಿ ಭಾಗವಹಿಸಲು ಅರ್ಹತೆ ಪಡೆಯಿತು. ಪಂದ್ಯಾವಳಿಗೆ ಆಯ್ಕೆಯಾಗಿರುವವರಾದ: ಐಶ್ವರ್ಯ, ಮೇಘನಾ, ನಾಗವೇಣಿ, ನಿಸರ್ಗ, ಅರ್ಪಿತಾ, ಪ್ರಿಯಾ,



ಸಹನಾ, ವಿನೂತ, ಮಾದಲಾಂಬಿಕಾ, ವಿದ್ಯಾ, ಐಶ್ವರ್ಯ, ಮೋನಿಕಾ, ಕೀರ್ತನ, ಶಿವಲೀಲಾ, ತೇಜಸ್ವಿನಿ (ನಾಯಕಿ) ಅವರನ್ನು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ಶ್ರೀಮತಿ ವಿ.ಆರ್.ಶೈಲಜ, ತರಬೇತುದಾರ ಕಾಂತರಾಜು, ಪರೀಕ್ಷಾಂಗ ಕುಲಸಚಿವ ಡಾ.ಕೆಎಂ.ಮಹದೇವನ್, ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್.ರೇಖಾ, ನಿರ್ದೇಶಕ ಡಾ.ಸಿ.ವೆಂಕಟೇಶ್, ವ್ಯವಸ್ಥಾಪಕ ಡಾ.ಭಾಸ್ಕರ್ ಅಭಿನಂದಿಸಿ, ಶುಭ ಕೋರಿದರು.

ಒಂದನೇ ಪುಟದಿಂದ

ಕೋವಿಡ್ ವ್ಯಾಕ್ಸಿನೇಷನ್ ಆರಂಭ

ಗ್ರಾಮಾಂತರ–480, ಬಿಬಿಎಂಪಿ–5,680, ಚಿಕ್ಕಬಳ್ಳಾಪುರ–520, ಕೋಲಾರ–680, ರಾಮನಗರ–440, ತುಮಕೂರು–1,300, ಬೆಳಗಾವಿ–2,280, ಧಾರವಾಡ–920, ಹಾವೇರಿ–780, ಉತ್ತರ ಕನ್ನಡ–660, ಬಳ್ಳಾರಿ–640, ಚಿತ್ರದುರ್ಗ–720, ದಾವಣಗೆರೆ–740, ಶಿವಮೊಗ್ಗ–820,ವಿಜಯನಗರ–560, ಬಾಗಲಕೋಟೆ–900, ವಿಜಯಪುರ–1,000, ಗದಗ–500, ಕೊಪ್ಪಳ–520, ಚಾಮರಾಜನಗರ–440, ಹಾಸನ–720, ಕೊಡಗು–220, ಮಂಡ್ಯ–720, ಮೈಸೂರು–1,360, ಚಿಕ್ಕಮಗಳೂರು–480, ದಕ್ಷಿಣ ಕನ್ನಡ–1,140, ಉಡುಪಿ–520, ಬೀದರ್–840, ಕಲಬುರಗಿ–1,280, ರಾಯಚೂರು–820, ಯಾದಗಿರಿ–480 ಡೋಸ್ ಹಂಚಲಾಗಿದೆ. ಒಟ್ಟು 30,000 ಡೋಸ್ ಲಸಿಕೆಯನ್ನು ಸರಬರಾಜು ಮಾಡಲಾಗಿದೆ.

ನಂಜನಗೂಡು ಬಂದ್‌ಗೆ ಕರೆ

ಅಂಧಕಾಸುರನ ಚಿತ್ರ ಬರೆದು ಸರ್ಕಾರದ ವತಿಯಿಂದ ಸಂಹಾರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ಎಂದು ಅವರು ವಿವರಿಸಿದರು. ಕೆಲವು ಕಿಡಿಗೇಡಿಗಳು ಧಾರ್ಮಿಕ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿ ದೇವರ ಮೇಲೆ ಎಂಜಲು ನೀರನ್ನು ಎರಚಿ ಕೋಟ್ಯಾಂತರ ಭಕ್ತರ ನಂಬಿಕೆಗೆ ಧಕ್ಕೆ ತಂದಿದ್ದಾರೆ. ಈ ಘಟನೆ ತಡೆಯಬೇಕಾದ ಪೊಲೀಸರೇ ರಾಜಕೀಯ ಒತ್ತಡಕ್ಕೆ ಮಣಿದು, ಕಿಡಿಗೇಡಿಗಳೊಂದಿಗೆ ಶಾಮೀಲಾಗಿ ಶ್ರೀಕಂಠೇಶ್ವರನ ಭಕ್ತರ ಮೇಲೆಯೇ ದೂರು ದಾಖಲು ಮಾಡಿದ್ದಾರೆ. ಹೀಗಾದರೆ ಯಾವ ಭಕ್ತರು ದೇವರ ಉತ್ಸವಾದಿಗಳಲ್ಲಿ ಭಾಗವಹಿಸುತ್ತಾರೆ? ಭಕ್ತರನ್ನು ತಡೆಹಿಡಿಯುವ ಉದ್ದೇಶದಿಂದ ಈ ಘಟನೆ ನಡೆಸಿದ್ದಾರೆ. ಈ ಘಟನೆಗೆ ಪೊಲೀಸರ ವೈಫಲ್ಯವೇ ಕಾರಣ ಎಂದು ಅವರು ಆಪಾದಿಸಿದರು. ದುರ್ಘಟನೆಗೆ ಕಾರಣರಾದ ಕಿಡಿಗೇಡಿಗಳನ್ನು ಬಂಧಿಸುವಂತೆ ಒತ್ತಾಯಿಸಿ ದೇವಾಲಯದ ಮುಂಭಾಗ ಪ್ರತಿಭಟನೆ ನಡೆಸಲಾಗಿತ್ತು. ಘಟನೆ ನಡೆದು 5 ದಿನಗಳು ಕಳೆದರೂ ಸಹ ಕಿಡಿಗೇಡಿಗಳನ್ನು ಬಂಧಿಸುವಲ್ಲಿ ಪೊಲೀಸರು ವಿಫಲರಾಗಿದ್ದಾರೆ. ಆದ್ದರಿಂದ ನಂಜನಗೂಡಿನ ವರ್ತಕರು, ಆಟೋಚಾಲಕರು, ಹೋಟೆಲ್ ಮಾಲೀಕರು, ಎಲ್ಲಾ ಸೇರಿ ಒಮ್ಮತದಿಂದ ಜ.4ರ ಗುರುವಾರ ಬೆಳಿಗ್ಗೆ 6ರಿಂದ ಸಂಜೆ 5ರವರೆಗೆ ಬಂದ್ ಆಚರಣೆ ನಡೆಸಲು ತೀರ್ಮಾನಿಸಿದ್ದಾರೆ ಎಂದರು.

ಎಲ್ಲರೂ ಸಹ ಸ್ವಯಂಘೋಷಿತವಾಗಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಬಂದ್ ಆಚರಣೆ ನಡೆಸಲಿದ್ದಾರೆ. ಒಂದು ವೇಳೆ ಇನ್ನೂ ಕಿಡಿಗೇಡಿಗಳನ್ನು ಬಂಧಿಸಲು ಮೀನಾಮೇಷ ಎಣಿಸಿದಲ್ಲಿ ಜಿಲ್ಲಾದ್ಯಂತ ಬಂದ್‌ಗೆ ಕರೆ ನೀಡಲಾಗುವುದು ಎಂದು ಎಚ್ಚರಿಸಿದರು. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ ಮಾತನಾಡಿ ಕೆಲವು ಕಿಡಿಗೇಡಿಗಳು ದೇವಾಲಯದ ಇಓ ಅವರ ಬಳಿ ಕಾರ್ಯಕ್ರಮ ನಡೆಸದಂತೆ ಹಿಂದಿನ ದಿನವೇ ಒತ್ತಡ ಹೇರಿದ್ದರೆಂಬ ಮಾಹಿತಿ ತಿಳಿದು ಬಂದಿದೆ. ಇನ್ನು ಕಾರ್ಯಕ್ರಮದ ದಿನದಂದು ಬೆಳಿಗ್ಗೆಯಿಂದಲೇ ಚಿತ್ರ ಬರೆಯಲಾಗಿದೆ. ಮಹಿಷಾಸುರನ ಚಿತ್ರಕ್ಕೆ ನೀರು ಎರಚಲು ತಂದಿದ್ದು ಎಂದು ವಾದ ಮಾಡುವ ಕಿಡಿಗೇಡಿಗಳು ಬೆಳಿಗ್ಗೆಯೇ ಚಿತ್ರಕ್ಕೆ ನೀರು ಹಾಕಿ ಅಳಸಿ ಹಾಕಬಹುದಿತ್ತು ಎಂದು ಅವರು ಪ್ರಶ್ನಿಸಿದರು. ದುರುದ್ದೇಶದಿಂದಲೇ ದೇವರು ಬರುವವರೆಗೂ ಕಾದು ದೇವರ ಮೇಲೆ ಎಂಜಲು ನೀರು ಎರಚಿದ್ದಾರೆ. ಈ ಘಟನೆಯು ನಡೆದ ಬಗ್ಗೆ ಇಓ ಅವರು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳವರೆಗೂ ಸಹ ಕ್ರಮಕ್ಕೆ ಪತ್ರ ಬರೆದು ಆಗ್ರಹಿಸಬಹುದಿತ್ತು. ಆದರೆ ದೇವಾಲಯದ ಇಓ ಸಹ ವರದಿ ನೀಡದೆ ತಪ್ಪಿಸಿಕೊಂಡಿದ್ದಾರೆ. ಆದ್ದರಿಂದ ದೇವಾಲಯದ ಇಓ ಮೇಲೂ ಕ್ರಮಕೈಗೊಳ್ಳಬೇಕು ಮತ್ತು ಘಟನೆಗೆ ಕಾರಣರಾದ ಕಿಡಿಗೇಡಿಗಳನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಬೇಕೆಂದು ಬಂದ್‌ಗೆ ಕರೆ ನೀಡಲಾಗಿದೆ. ಇದಕ್ಕೂ ಬಗ್ಗದೆ ಹೋದಲ್ಲಿ ಜಿಲ್ಲಾ ಬಂದ್‌ಗೆ ಕರೆ ನೀಡುವ ಜೊತೆಗೆ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದರು. ಪತ್ರಿಕಾಗೋಷ್ಠಿಯಲ್ಲಿ ನಗರಸಭಾ ಸದಸ್ಯ ಕಪಿಲೇಶ್, ಶಂಕರಪ್ಪ, ಕುಮಾರ್, ನಿತಿನ್, ಸಿದ್ದರಾಜು, ಮಧುರಾಜು, ಕುಮಾರ್, ರಾಮ್‌ಮೋಹನ, ಕಿಟ್ಟಿ, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.1.2024 ಬುಧವಾರ, ಮಳೆ ನಕ್ಷತ್ರ: ಪೂಷಾ 29.12.2023ರಿಂದ 10.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಶ್ರೀ ರಾಮಕೃಷ್ಣ ಆಶ್ರಮ:** ಶ್ರೀಮಾತೆ ಶಾರದಾದೇವಿ ಜಯಂತಿ, ಬೆಳಗ್ಗೆ ವೇದಮಂತ್ರ ಪಠಣ, ಮಂಗಳಾರತಿ, ಭಜನೆ, ವಿಶೇಷ ಪೂಜೆ, ಲಲಿತಾಸಹಸ್ರನಾಮ ಪಾರಾಯಣ, ಭಜನೆ, ಗ್ರಂಥವಾಚನ, ಆರತಿ, ಹೋಮ, ಪ್ರಸಾದ ವಿತರಣೆ, ಶ್ರೀ ಶಾರದಾ ಸಂವಿತ್ ಭಜನಾ ಮಂಡಳಿಯಿಂದ ಭಜನೆ, ಸಂಜೆ 6ರಿಂದ ಕನ್ನಡದಲ್ಲಿ ಪ್ರವಚನ: ಶಾರದಾದೇವಿ, ರಾ. 7ರಿಂದ ಆರತಿ ಮತ್ತು ವಿಶೇಷ ಭಜನೆ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ.

■ **ಮೈಸೂರು ಮಕ್ಕಳ ಕೂಟ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಬಾಲಕಿಯರ ಪದವಿಪೂರ್ವ ಕಾಲೇಜು:** ಕಾಲೇಜು ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಸೀಮಾ ಲಾಟ್ಕರ್, ವಿಶೇಷ ಅತಿಥಿಗಳು: ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಮರಿಸ್ವಾಮಿ, ಗೌರವ ಅತಿಥಿಗಳು: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲರಾದ ಶ್ರೀಮತಿ ನಯನಕುಮಾರಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಭಾರತದ ಮೊದಲ ಶಿಕ್ಷಕಿ ಅಕ್ಷರದವ್ವ ಮಾತೆ ಸಾವಿತ್ರಿಬಾಯಿ ಫುಲೆ ಅವರ 193ನೇ ಜನ್ಮ ದಿನಾಚರಣೆ, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕಿ ಪ್ರೊ.ಲೋಲಾಕ್ಷಿ, ಕರಾಮುವಿವಿ ಕುಲಸಚಿವ ಪ್ರೊ.ಮೂರ್ತಿ, ಸ್ಥಳ: ವ್ಯವಸ್ಥಾಪನಾ ಮಂಡಳಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಸಹ ಪ್ರಾಧ್ಯಾಪಕ ಡಾ.ಆರ್.ಜಿ.ಚಿದಾನಂದ ಅವರಿಂದ ಭಾರತದ ಸಂವಿಧಾನ ಮತ್ತು ಸಾಂವಿಧಾನಿಕ ಪರಿಹಾರದ ಹಕ್ಕುಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಮಹಾರಾಜ ಕಾಲೇಜು ಪ್ರಾಂಶುಪಾಲರಾದ ಪ್ರೊ. ಹೆಚ್. ಸೋಮಶೇಖರಪ್ಪ, ಸ್ಥಳ: ಮಹಾರಾಜ ಕಾಲೇಜು, ಬೆಳಗ್ಗೆ 11ಕ್ಕೆ.

■ **ಪ್ರಜ್ಞಾವಂತ ನಾಗರಿಕ ವೇದಿಕೆ, ಶಾರದಾದೇವಿ ನಾಗರಿಕ ಹಿತರಕ್ಷಣಾ ವೇದಿಕೆ:** ಶ್ರೀಮಾತಾ ಶ್ರೀ ಶಾರದಾದೇವಿ 171ನೇ ಜಯಂತಿ ಆಚರಣೆ ಅಂಗವಾಗಿ ಆಧ್ಯಾತ್ಮಿಕ ಲೋಕ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ರಾಜ್ಯ ಹಿಂದುಳಿದ ವರ್ಗ ಮೋರ್ಚಾ ಅಧ್ಯಕ್ಷ ಆರ್.ರಘು ಕೌಟಿಲ್ಯ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಚಾಮುಂಡೇಶ್ವರಿ ನಗರ ಬಿಜೆಪಿ ಅಧ್ಯಕ್ಷ ಬಿ.ಎಂ.ರಘು, ಹಿರಿಯ ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸುಚೇಂದ್ರ ತೀರ್ಥ, ಸ್ಥಳ: ಶಾರದಾದೇವಿ ನಗರ ವೃತ್ತ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಕಲ್ಲಾಪುರ ಪವಮಾನಾಚಾರ್ಯರಿಂದ ಭಗವದ್ಗೀತೆ 14ನೇ ಅಧ್ಯಾಯ ಕುರಿತು ಪ್ರವಚನ, ಸ್ಥಳ: ಶ್ರೀರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ. ಶೆಲ್ವ ನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಸಂಜೆ 6.45ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ–ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ–ಮೂಕನಹಳ್ಳಿ ರಂಗಸ್ವಾಮಿ, 6.40 ಪದಸಂಸ್ಕೃತಿ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಂದನ–ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ ಪ್ರಾಯೋಜಿತ ಕಾರ್ಯಕ್ರಮ, ವಿಷಯ–ಕನಸುಗಳು ಸಾಕಾರ–ಸಂತಾನಹೀನತೆಯನ್ನು ಗೆದ್ದ ಆಶಾಕಿರಣದ ಕಥೆಗಳು. ತಜ್ಞರು–ಡಾ.ಮಾಧುರಿ ಎನ್., 10.00 ಆಲಿ ಅಹಮದ್ ಹುಸೇನ್–ಷಹನಾಯ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 3.00 ಆರ್.ಎ.ರಮಾಮಣಿ–ಹಾಡುಗಾರಿಕೆ, 4.00 ಮಹಿಳಾ ರಂಗ–ಸ್ತ್ರೀ ಚೇತನ–ರೋಲರ್ ಸ್ಕೇಟರ್ ಸೌಹಾರ್ದಿನಿ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಸಾವಯವ ಕೃಷಿ ಉತ್ಪನ್ನಗಳ ಪ್ರಮಾಣೀಕರಣ ಕುರಿತ ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುವವರು ಡಾ.ಸುಧೀರ್ ಕುಮಾರ್ ಹಾಗೂ ಪಿ.ರಮೇಶ್, 9.30 ನಾಟಕ–ಭೀಷ್ಮ ಪ್ರತಿಜ್ಞೆ, ರಚನೆ–ಜಿ.ವಿ.ಕುಷ್ಣಮೂರ್ತಿ, ನಿರ್ದೇಶನ–ವೈ.ಎಂ.ಪುಟ್ಟಣ್ಣಯ್ಯ, 10.00 ಜನಪದ ಸಂಗೀತ

ಚಾಮುಂಡಿಬೆಟ್ಟ ಪಾದದ ಹೂಳುವ ಸ್ಮಶಾನದ ದುಸ್ಥಿತಿ; ಶವ ಸಂಸ್ಕಾರಕ್ಕೆ ಹೋದವರಿಗೆ ನರಕಸದೃಶ್ಯ

● ಅಂತ್ಯಸಂಸ್ಕಾರದ ಪೂಜಾ ಕಾರ್ಯಕ್ಕೂ ಒಂದಿಷ್ಟು ನೀರಿಲ್ಲ ● ಮೂಲಸೌಕರ್ಯದ ಕೊರತೆಯಿಂದ ಜನರ ಪರದಾಟ



ಸ್ಮಶಾನದ ಬಳಕೆಯಿಲ್ಲದ ಹಳೇ ಶೌಚಾಲಯದಲ್ಲಿ ಆಶ್ರಯ ಪಡೆದಿರುವ ಇದೇ ಸ್ಮಶಾನದಲ್ಲಿ ಮೃತ ದೇಹ ಹೂಳಲು ಗುಂಡಿ ತೆಗೆಯುವ ಅವಿನಾಶ್.



ಎಂದೋ ನಿರ್ಮಿಸಿರುವ ಕೊಳಾಯಿಗಳನ್ನು ಒಳಗೊಂಡ ನೀರಿನ ತೊಟ್ಟಿ ಅವ್ಯವಸ್ಥೆಯಿಂದ ನಿಷ್ಪ್ರಯೋಜಕಗೊಂಡಿರುವುದು.



ಬಳಕೆಗೆ ಮುಕ್ತಗೊಳಿಸದೇ ಇರುವ ನೂತನ ಶೌಚಾಲಯ.

● ಎಂ.ಬಿ.ಪವನ್‌ಮೂರ್ತಿ

ಮೈಸೂರು,ಜ.2– ಶವ ಸಂಸ್ಕಾರದ ವಿಧಿವಿಧಾನ ಕೈಗೊಳ್ಳಲು ನೀರಿಲ್ಲ... ನಿಷ್ಕ್ರಿಯಗೊಂಡ ಎರಡು ಬೋರ್‌ವೆಲ್... ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಪ್ಲಾಸ್ಟಿಕ್ ಸೇರಿದಂತೆ ತರಾವರಿ ತ್ಯಾಜ್ಯ... ಜೊತೆಗೆ ಮದ್ಯದ ಪೊಟ್ಟಣಗಳು... ನೂತನವಾಗಿ ಶೌಚಾಲಯ ನಿರ್ಮಿಸಿದ್ದರೂ ಬಳಕೆಗೆ ಮುಕ್ತಗೊಳಿಸದೇ ನಿರ್ಲಕ್ಷ್ಯ.... ಹಳೇ ಶೌಚಾಲಯದಲ್ಲೇ ಬದುಕು ದೂಡುತ್ತಿರುವ ವ್ಯಕ್ತಿ...

ಇವು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹೂಳುವ ಸ್ಮಶಾನದಲ್ಲಿನ ಮೂಲ ಸೌಕರ್ಯದ ಕೊರತೆ ಹಾಗೂ ಸಮಸ್ಯೆಗಳ ಸರಮಾಲೆಯ ಹೈಲೈಟ್ಸ್. ಹುಡುಕುತ್ತಾ ಹೊರಟರೆ ಈ ಸ್ಮಶಾನವು ಸಮಸ್ಯೆಗಳ ತಾಣವೇ ಎನ್ನಿಸುವಂತಾಗುತ್ತದೆ. ಮೈಸೂರು ಮಹಾನಗರ ಪಾಲಿಕೆ ಇದರ ನಿರ್ವಹಣೆ ಮರೆತಂತಿದ್ದು, ಹೀಗಾಗಿ ಅನೈರ್ಮಲ್ಯದ ತಾಣವಾಗಿ ಈ ಸ್ಮಶಾನ ಮಾರ್ಪಟ್ಟಿದೆ. ನಗರಪಾಲಿಕೆ ವಾರ್ಡ್ ನಂ.54ರ ಹಾಗೂ ಪಾಲಿಕೆ ವಲಯ ಕಚೇರಿ 1ರ ವ್ಯಾಪ್ತಿಗೆ ಒಳಪಡುವ ಈ ಸ್ಮಶಾನದಲ್ಲಿ ನಿತ್ಯ ಸಮಸ್ಯೆಗಳು ಉಲ್ಬಣಗೊಳ್ಳುತ್ತಿದ್ದರೂ ಅದೇಕೋ ಪಾಲಿಕೆ ಮಾತ್ರ ಇತ್ತ ಗಮನಹರಿಸುತ್ತಿಲ್ಲ.

ಇಲ್ಲಿ ಎರಡು ಬೋರ್‌ವೆಲ್‌ಗಳಿದ್ದು, ಈ ಎರಡೂ ಕೆಟ್ಟು ನಿಂತಿವೆ. ಇವುಗಳ ಆಸುಪಾಸು ನೋಡಿದರೆ ಸಾಕು ಅವುಗಳಿಂದ ನೀರು ಬಂದು ಎಷ್ಟೋ ದಿನಗಳಾಗಿವೆ ಎಂದು ಯಾರಾದರೂ ಊಹಿಸುವುದು ಕಷ್ಟವಾಗದು. ನೀರಿನ ಸೌಕರ್ಯ ಇಲ್ಲದ ಕಾರಣ ಸ್ಮಶಾನದ ಸಮೀಪದಲ್ಲಿ ಹುಡುಕಾಡಿ ನೀರು ತಂದು ಅಂತಿಮ ವಿಧಿವಿಧಾನ ಪೂರ್ಣಗೊಳಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಶವ ಸಂಸ್ಕಾರಕ್ಕಾಗಿ ಬರುವ ಸಾರ್ವಜನಿಕರು ವಿರಮಿಸಲು ಈ ಸ್ಮಶಾನದಲ್ಲಿ ಮೂರು ತಂಗುದಾಣಗಳು ಇದ್ದರೂ ಪ್ರಯೋಜನಕ್ಕೆ ಬಾರದಾಗಿವೆ. ಶುಚಿತ್ವ ಇಲ್ಲದ ಕಾರಣ ಯಾರೂ ಇಲ್ಲಿ ಕುಳಿತು ವಿಶ್ರಾಂತಿ ಪಡೆಯುವ ಗೋಜಿಗೆ ಹೋಗುತ್ತಿಲ್ಲ. ಸ್ವಚ್ಛತೆ ಇಲ್ಲದೇ ಸೊಳ್ಳೆ, ನೊಣಗಳ ತಾಣವಾಗಿರುವ ಈ ತಂಗುದಾಣಗಳಲ್ಲಿ ಯಾರು ತಾನೆ ವಿರಮಿಸುತ್ತಾರೆ ಎನ್ನುವಂತಾಗಿದೆ. ಎಲ್ಲಿ ನೋಡಿದರೂ ಪಾರ್ಥೇನಿಯಂ ಗಿಡಗಳು ಸೊಂಪಾಗಿ ಬೆಳೆದಿದ್ದು, ಅವುಗಳ ನಡುವೆ ಪ್ಲಾಸ್ಟಿಕ್ ಸೇರಿದಂತೆ ತರಾವರಿ ತ್ಯಾಜ್ಯಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಇಲ್ಲಿ ಸಾಕಷ್ಟು ಮರಗಳು ಬೆಳೆದಿದ್ದು, ಸ್ವಚ್ಛತೆ ಕಾಪಾಡಿದರೆ ಉತ್ತಮ ಪರಿಸರ ಇರಲಿದೆ. ಮರಗಳಿಂದ ಉದುರುವ ತರಗೆಲೆಗಳು ಗೊಬ್ಬರವಾಗುವ ಬದಲು ಇಲ್ಲಿ ರಾಶಿಹಿಡಿಯುತ್ತಿರುವ ಪ್ಲಾಸ್ಟಿಕ್ ಸೇರಿದಂತೆ ವಿಷಕಾರಿ ತ್ಯಾಜ್ಯಗಳೊಂದಿಗೆ ಬೆರೆತು ಮಾಲಿನ್ಯ ಇಮ್ಮಡಿಕೊಳ್ಳುವಂತಾಗಿದೆ.

ಈ ಸ್ಮಶಾನದ ಮುಖ್ಯ ದ್ವಾರದಲ್ಲೇ ಇರುವ ಒಳಚರಂಡಿ ಸೂಕ್ತ ನಿರ್ವಹಣೆ ಇಲ್ಲದೆ, ಗಬ್ಬು ನಾರುತ್ತಿದ್ದು, ಮಳೆ ಬಂದರೆ ಉಕ್ಕಿ ಹರಿಯುವಂತಾಗಿದೆ. ಹಾಗಾಗಿ ಮುಖ್ಯ ದ್ವಾರದತ್ತ ಬರುತ್ತಿದ್ದಂತೆ ದುರ್ವಾಸನೆ ಮೂಗಿಗೆ ತಟ್ಟಲಿದೆ. ಜೊತೆಗೆ ಮುಖ್ಯ ದ್ವಾರದ ಸಮೀಪದಲ್ಲೇ ಇರುವ ಕಲ್ಯಾಣಿ ಸೂಕ್ತ ನಿರ್ವಹಣೆ ಇಲ್ಲದೆ, ಸೊರಗುವಂತಾಗಿದ್ದು, ಗಿಡಗಂಟಿ ಬೆಳೆದು ಕಲ್ಯಾಣಿ ತನ್ನ ಸ್ವರೂಪವನ್ನೇ ಕಳೆದುಕೊಂಡಂತಾಗಿದೆ. ಇದನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿದ್ದರೆ ಇಲ್ಲಿನ ನೀರನ್ನಾದರೂ ಬಳಸಿಕೊಳ್ಳಬಹುದಿತ್ತು.

ಕೈಕಾಲು ತೊಳೆಯುವ ಸಲುವಾಗಿ ಎಂದೋ ನಿರ್ಮಿಸಿರುವ ನೀರಿನ ತೊಟ್ಟಿ ನಿಷ್ಕ್ರಿಯವಾಗಿದ್ದು, ಇಲ್ಲಿದ್ದ 7 ಕೊಳಾಯಿಗಳು ಮಾಯವಾಗಿವೆ. ಇಡೀ ಸ್ಮಶಾನದ ಬಹುತೇಕ ಜಾಗದಲ್ಲಿ ಗೋರಿಗಳು ಎಗ್ಗಿಲ್ಲದೆ ನಿರ್ಮಾಣಗೊಂಡಿವೆ. ಇದರಿಂದ ಶವ ಹೂಳಲು ಜಾಗ ಹುಡುಕಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮೃತಪಟ್ಟವರು ಬಳಸುತ್ತಿದ್ದ ಹಾಸಿಗೆ–ದಿಂಬುಗಳನ್ನು ಬೇಕೆಂದಲ್ಲಿ ಬೀಸಾಡಿದ್ದು, ಇದು ಸಹ ಅನೈರ್ಮಲ್ಯಕ್ಕೆ ಕಾರಣವಾಗಿದೆ.

ಇಲ್ಲಿನ ಮುಖ್ಯದ್ವಾರದ ಬಳಿ ಮೈಸೂರು ಮಹಾನಗರ ಪಾಲಿಕೆ ಅಳವಡಿಸಿರುವ ಫಲಕದಲ್ಲಿ ಕಾವಲುಗಾರರ ಹೆಸರು ಮತ್ತು ದೂರವಾಣಿ ಸಂಖ್ಯೆ ನಮೂದಿಸಲಾಗಿದೆ. ಆದರೆ ಪತ್ರಿಕೆ ಗಮನಿಸಿದಂತೆ ದ್ವಾರದಲ್ಲಿ ಕಾವಲುಗಾರನ ಸುಳಿವೇ ಇಲ್ಲ. ಸೂಕ್ತ ಭದ್ರತೆಯ ವ್ಯವಸ್ಥೆ ಇಲ್ಲದೇ ಪುಂಡರು ಇಲ್ಲಿ ಮದ್ಯ ಮತ್ತು ಗಾಂಜಾ ಸೇವನೆ ಅಡ್ಡೆಗಳನ್ನು ಮಾಡಿಕೊಂಡಿದ್ದಾರೆ. ಪಾಲಿಕೆ ಇನ್ನಾದರೂ ಇದರ ಸೂಕ್ತ ನಿರ್ವಹಣೆಯತ್ತ ಗಂಭೀರವಾಗಿ ಗಮನಹರಿಸುವುದೇ ಕಾದು ನೋಡಬೇಕಿದೆ.

ಶೀಘ್ರ ಮೂಲಸೌಕರ್ಯ ಕಲ್ಪಿಸಿ, ಅನೈರ್ಮಲ್ಯ ನಿವಾರಿಸಿ...



ಶವ ಸಂಸ್ಕಾರದ ಅಂತಿಮ ವಿಧಿ ವಿಧಾನಗಳಿಗೆ ನೀರಿನ ವ್ಯವಸ್ಥೆ ಇಲ್ಲವಾಗಿದ್ದು, ಇದು ಅತ್ಯಂತ ಬೇಸರದ ಸಂಗತಿ. ಇಡೀ ಸ್ಮಶಾನದಲ್ಲಿ ಅನೈರ್ಮಲ್ಯ ತಾಂಡವವಾಡುತ್ತಿದ್ದು, ಸ್ವಚ್ಛತೆ ಮತ್ತು ಸೂಕ್ತ ನಿರ್ವಹಣೆಗೆ ಕ್ರಮ ವಹಿಸದೇ ಪಾಲಿಕೆ ಅಧಿಕಾರಿಗಳು ಏಕಿಷ್ಟು ನಿರ್ಲಕ್ಷ್ಯ ವಹಿಸಿದ್ದಾರೋ ಗೊತ್ತಾಗುತ್ತಿಲ್ಲ. ಸೋಮವಾರ ನನ್ನ ಸೋದರ ಮಾವ ಅವರ ಶವ ಸಂಸ್ಕಾರದ ಪೂಜಾ ಕಾರ್ಯಗಳಿಗೆ ನೀರಿಲ್ಲದೆ ಪರದಾಡಬೇಕಾಯಿತು. ಇದೇ ವೇಳೆ ಇನ್ನು ನಾಲ್ಕಾರು ಶವ ಸಂಸ್ಕಾರಕ್ಕೆ ಬಂದಿದ್ದವರೂ ಇದೇ ರೀತಿ ದುಸ್ಥಿತಿ ಎದುರಿಸಬೇಕಾಯಿತು. ಗಾಂಜಾ ಮತ್ತು ಮದ್ಯ ಸೇವನೆಗಾಗಿ ಸ್ಮಶಾನವನ್ನು ಪುಂಡರು ತಮ್ಮ ಅಡ್ಡೆ ಮಾಡಿಕೊಂಡಿದ್ದಾರೆ. ಈ ಸ್ಮಶಾನದ ಸಮಸ್ಯೆಗಳನ್ನು ನಿವಾರಿಸಲು ಹಾಗೂ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಪಾಲಿಕೆ ಅಧಿಕಾರಿಗಳು ಶೀಘ್ರ ಮುಂದಾಗಬೇಕು.

–ಡಿ.ಬಸವರಾಜು ಬಸಪ್ಪ, ಉಪಾಧ್ಯಕ್ಷರು, ಕೆಆರ್ ಬ್ಯಾಂಕ್.

ಶೌಚಾಲಯದಲ್ಲೇ ಬದುಕು ದೂಡುತ್ತಿರುವ ವ್ಯಕ್ತಿ...

ಈ ಸ್ಮಶಾನದಲ್ಲಿ ಮೃತದೇಹ ಹೂಳಲು ಗುಂಡಿ ತೆಗೆಯುವ ಕೆಲಸ ಮಾಡುತ್ತಿರುವ ಅವಿನಾಶ್ ಎಂಬಾತ ಇದೇ ಸ್ಮಶಾನದಲ್ಲಿ ಬಳಕೆ ಇಲ್ಲದ ಹಳೇ ಶೌಚಾಲಯದಲ್ಲೇ ವಾಸ ಮಾಡುತ್ತಿದ್ದಾನೆ. ಶೌಚಾಲಯ ಬಳಕೆಯಲ್ಲಿಲ್ಲವೆಂದ ಮಾತ್ರಕ್ಕೆ ಇಲ್ಲಿ ಶುಚಿತ್ವ ಇದೆ ಎಂದುಕೊಂಡರೆ ಅದು ಸುಳ್ಳು. ಈ ವ್ಯಕ್ತಿ ಇಲ್ಲಿ ಅನೈರ್ಮಲ್ಯದ ವ್ಯವಸ್ಥೆಯಲ್ಲೇ ಬದುಕು ದೂಡುತ್ತಿದ್ದಾರೆ. '2006ರಲ್ಲಿ ಇಲ್ಲಿಗೆ ಬಂದು ಮೂರ್‍ನಾಲ್ಕು ವರ್ಷಗಳು ಇದ್ದೆ. ಬಳಿಕ ಹೊರಟು ಹೋಗಿ ಮತ್ತೆ ಬಂದು ಇಲ್ಲಿದ್ದೇನೆ. ನನ್ನ ಸ್ವಂತ ಊರು ಮೆಲ್ಲಹಳ್ಳಿ. ನಾನು ಅವಿವಾಹಿತ' ಎಂದು ತನ್ನ ಪರಿಚಯ ಮಾಡಿಕೊಂಡ ಇವರು, 'ಶೌಚಾಲಯದಲ್ಲಿ ಏಕಿದ್ದೀರಾ' ಎಂದರೆ, 'ಇದೇ ಕೊಟ್ಟಿರುವುದು' ಎನ್ನುತ್ತಾರೆ. ಅಲ್ಲದೆ, 'ಈ ಶೌಚಾಲಯ ಕಟ್ಟಿ 15ರಿಂದ 20 ವರ್ಷಗಳಾಗಿದ್ದು, ಇದನ್ನು ಉಪಯೋಗಿಸಿಯೇ ಇಲ್ಲ' ಎನ್ನುತ್ತಾರೆ. 'ಹೊಸದಾಗಿ ಶೌಚಾಲಯ ನಿರ್ಮಿಸಿ, ಆ ಕಟ್ಟಡಕ್ಕೆ ಬೀಗ ಹಾಕಿ ಬಂದ್ ಮಾಡಿದ್ದಾರೆ' ಎಂದು ಎದುರಿದ್ದ ಕಟ್ಟಡವನ್ನು ಅವರೇ ತೋರುತ್ತಾರೆ.



ಸ್ಮಶಾನದ ಕಲ್ಯಾಣಿಯಲ್ಲಿ ಗಿಡಗಂಟಿ ಬೆಳೆದಿರುವುದನ್ನು ಚಿತ್ರದಲ್ಲಿ ಕಾಣಬಹುದು.





ಕೆಟ್ಟು ನಿಂತಿರುವ ಸ್ಮಶಾನದಲ್ಲಿನ ಎರಡು ಬೋರ್‌ವೆಲ್‌ಗಳು.

ಉಚಿತ ಗ್ಯಾರಂಟಿ ಪ್ರಶ್ನಿಸಿದ ಅರ್ಜಿ ವಿಚಾರಣೆ 12 ವಾರ ಮುಂದಕ್ಕೆ



ಬೆಂಗಳೂರು: ರಾಜಕೀಯ ಪಕ್ಷಗಳು ಚುನಾವಣೆ ಸಮಯದಲ್ಲಿ ಮತದಾರರಿಗೆ ನೀಡುತ್ತಿರುವ ಉಚಿತ ಗ್ಯಾರಂಟಿ ಆಮಿಷಗಳಿಗೆ ನಿರ್ಬಂಧ ವಿಧಿಸಬೇಕು ಎಂದು ಕೋರಲಾದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ 12 ವಾರಗಳ ಕಾಲ ಮುಂದೂಡಿದೆ.

ಈ ಸಂಬಂಧ ಬ್ರಿಗೇಡಿಯರ್ ರವಿ ಮುನಿಸ್ವಾಮಿ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಪೀಠವು, ಈ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮದೇ ಆದ ಅಭಿಪ್ರಾಯ ಮತ್ತು ಮಿತಿ ಇರಬಹುದು. ಆದರೆ, ಸದ್ಯ ಇಂತಹುದೇ ಪ್ರಕರಣವು ಸುಪ್ರೀಂಕೋರ್ಟ್ ಮುಂದಿದೆ. ನಾವು ಈಗ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಲು ಆದೇಶಿಸುವುದಿಲ್ಲ. ಸುಪ್ರೀಂಕೋರ್ಟ್‌ನಲ್ಲಿ ಏನಾಗುತ್ತದೋ ನೋಡೋಣ. ಅಲ್ಲಿಯವರೆಗೆ ಕಾಯಿರಿ ಎಂದು ಮೌಖಿಕವಾಗಿ ತಿಳಿಸಿ ವಿಚಾರಣೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ರಾಜಕೀಯ ಪಕ್ಷಗಳು ಹೇಗಾದರೂ ಮಾಡಿ ಅಧಿಕಾರ ಹಿಡಿಯಲೇಬೇಕೆಂಬ ಉಮೇದಿನಲ್ಲಿ ಮತದಾರರಿಗೆ ಆಮಿಷ ಒಡ್ಡುತ್ತಿವೆ. ಪ್ರಲೋಭನೆವೊಡ್ಡಿ ಮತ ಯಾಚಿಸುವುದು ಸಂವಿಧಾನ ಬಾಹಿರ ಹಾಗೂ ಜನಪ್ರತಿನಿಧಿಗಳ ಕಾಯ್ದೆಯ ಸ್ಪಷ್ಟ ಉಲ್ಲಂಘನೆ. ಈ ನಿಟ್ಟಿನಲ್ಲಿ ಸೂಕ್ತ ಮಾರ್ಗಸೂಚಿ ರೂಪಿಸಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಬೋಧನೆಗೆ ಮರಳಲು ಅತಿಥಿ ಉಪನ್ಯಾಸಕರಿಗೆ ಜ.6ರವರೆಗೆ ಗಡುವು



ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರ ಬದ್ಧವಾಗಿದೆ. ಮುಷ್ಕರ ಕೈಬಿಟ್ಟು ಬೋಧನಾ ಕಾರ್ಯಕ್ಕೆ ಮರಳಲು ಜ.6ರವರೆಗೂ ಗಡುವು ನೀಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಅತಿಥಿ ಉಪನ್ಯಾಸಕರನ್ನು ಕಾಯಂ ಮಾಡಲು ಕಾನೂನು ಹಾಗೂ ನ್ಯಾಯಾಲಯಗಳ ತೀರ್ಪಿನ ಪ್ರಕಾರ ಸಾಧ್ಯವಿಲ್ಲ. ಚುನಾವಣಾ ಪ್ರಣಾಳಿಕೆಯಲ್ಲಿ ಪಕ್ಷ ಕೊಟ್ಟ ಭರವಸೆ ಉಳಿಸಿಕೊಳ್ಳಲು ಸರ್ಕಾರ ಬದ್ಧವಾಗಿದೆ. ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೌರವಧನ ಹೆಚ್ಚಳ ಸೇರಿದಂತೆ ಕೆಲ ಅನುಕೂಲ ಮಾಡಿಕೊಟ್ಟಿದ್ದಾರೆ. ಹಂತಹಂತವಾಗಿ ಇನ್ನಷ್ಟು ಅನುಕೂಲ ಮಾಡಿಕೊಡಲಾಗುವುದು ಎಂದರು. ಸರ್ಕಾರದ ಸ್ಪಂದನೆ ಜತೆಗೆ ಜ.1ರಂದು ಬೋಧನೆಗೆ ಹಾಜರಾಗುವಂತೆ ಮಾಡಿದ ಮನವಿಗೆ ಓಗೊಟ್ಟು ಈಗಾಗಲೇ 3,200 ಅತಿಥಿ ಉಪನ್ಯಾಸಕರು ಕೆಲಸಕ್ಕೆ ಮರಳಿದ್ದಾರೆ. ಕೆಲವರು ಸೇವಾಭದ್ರತೆಗೆ ಆಗ್ರಹಿಸಿ ಪಾದಯಾತ್ರೆ ಮಾಡುತ್ತಿದ್ದಾರೆ. ಜ.6ರವರೆಗೂ ಕಾಯುತ್ತೇವೆ. ಈಗಾಗಲೇ ಅಧಿಕಾರಿಗಳು, ಪ್ರಾಂಶುಪಾಲರ ಜತೆ ಸಭೆ ನಡೆಸಿದ್ದು, ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಮುಂದಿನ ವಾರದಿಂದಲೇ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುತ್ತೇವೆ ಎಂದರು.

ನಾರಾಯಣಗೌಡ ಜಾಮೀನು ಅರ್ಜಿ ತೀರ್ಪು ಕಾಯ್ದಿರಿಸಿದ ಕೋರ್ಟ್; ಇನ್ನೂ 4 ದಿನ ಜೈಲು

ಬೆಂಗಳೂರು: ಕನ್ನಡ ನಾಮಫಲಕಕ್ಕೆ ಆಗ್ರಹಿಸಿ ನಡೆದ ಪ್ರತಿಭಟನೆ ವೇಳೆ ಬಂಧನಕ್ಕೊಳಗಾಗಿರುವ ಕರ್ನಾಟಕ ರಕ್ಷಣಾ ವೇದಿಕೆ(ಕರವೇ) ಅಧ್ಯಕ್ಷ ನಾರಾಯಣಗೌಡ ಅವರ ಜಾಮೀನು ಅರ್ಜಿಯ ತೀರ್ಪನ್ನು ಕೋರ್ಟ್ ಮಂಗಳವಾರ ಕಾಯ್ದಿರಿಸಿದ್ದು, ಅವರಿಗೆ ಇನ್ನೂ ನಾಲ್ಕು ದಿನ ಜೈಲು ಫಿಕ್ಸ್ ಆಗಿದೆ. ಜಾಮೀನು ಕೋರಿ ನಾರಾಯಣಗೌಡ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ದೇವನಹಳ್ಳಿಯ 5ನೇ ಹೆಚ್ಚುವರಿ ಸೆಷನ್ಸ್ ಕೋರ್ಟ್, ತೀರ್ಪು ಕಾಯ್ದಿರಿಸಿದ್ದು, ಜನವರಿ 6ರಂದು ಜಾಮೀನು ಬಗ್ಗೆ ಆದೇಶ ಪ್ರಕಟಿಸಲಿದೆ. ಪ್ರಸ್ತುತ ಕರವೇ ಅಧ್ಯಕ್ಷ ನಾರಾಯಣಗೌಡ ಸೇರಿ ಕರವೇಯ 32 ಕಾರ್ಯಕರ್ತರು ಪರಪ್ಪನಅಗ್ರಹಾರ ಜೈಲಿನಲ್ಲಿದ್ದಾರೆ.

ಅಯೋಧ್ಯೆಯ ರಾಮಮಂದಿರಕ್ಕೆ ರಾಮಲಲ್ಲಾ ವಿಗ್ರಹ ಇನ್ನೂ ಅಂತಿಮವಾಗಿಲ್ಲ: ಟ್ರಸ್ಟ್ ಸ್ಪಷ್ಟನೆ



ಅಯೋಧ್ಯೆ: ಉತ್ತರಪ್ರದೇಶದ ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪನೆ ಮಾಡಲು ಕಳೆದ ಕೆಲವು ತಿಂಗಳುಗಳಿಂದ ಕೆತ್ತಲಾಗುತ್ತಿರುವ 3 ರಾಮಲಲ್ಲಾ ವಿಗ್ರಹಗಳಲ್ಲಿ ಇನ್ನೂ ಯಾವುದನ್ನು ಆಯ್ಕೆ ಮಾಡಿಲ್ಲ ಎಂದು ರಾಮಮಂದಿರ ಟ್ರಸ್ಟ್‌ಗೆ ಸಂಬಂಧಿಸಿದವರು ಮಂಗಳವಾರ ಸ್ಪಷ್ಟಪಡಿಸಿದ್ದಾರೆ.

ನಿನ್ನೆಯಷ್ಟೇ ಭಾರತೀಯ ಜನತಾ ಪಕ್ಷದ ಹಿರಿಯ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ಬಿಎಸ್.ಯಡಿಯೂರಪ್ಪ, ಪ್ರತಿಪಕ್ಷ ನಾಯಕ ಆರ್.ಅಶೋಕ್ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಸೇರಿದಂತೆ ಹಲವು ಬಿಜೆಪಿ ನಾಯಕರು ರಾಜ್ಯದ ಶಿಲ್ಪಿ ಅರುಣ್ ಯೋಗಿರಾಜ್ ಅವರು ಕೆತ್ತಿದ ವಿಗ್ರಹವನ್ನು ಅಯೋಧ್ಯೆಯ ಹೊಸ ದೇವಾಲಯದಲ್ಲಿ ಪ್ರತಿಷ್ಠಾಪಿಸಲು ಆಯ್ಕೆ ಮಾಡಲಾಗಿದೆ ಎಂದು ಹೇಳಿದ್ದರು ಮತ್ತು ಶಿಲ್ಪಿ ಅರುಣ್ ಅವರನ್ನು ಅಭಿನಂದಿಸಿದ್ದರು.

ಆದರೆ ಮಂದಿರ ನಿರ್ಮಾಣ ಮಾಡುತ್ತಿರುವ ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್, ರಾಮಲಲ್ಲಾ ವಿಗ್ರಹ ಆಯ್ಕೆ ಸಂಬಂಧ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಹೇಳಿದೆ.

ಈ ಸಂಬಂಧ ಶಂಕರಾಚಾರ್ಯ ವಿಜಯೇಂದ್ರ ಸರಸ್ವತಿ ಮತ್ತು ಇತರ ದರ್ಮದರ್ಶಿಗಳೊಂದಿಗೆ ಸಮಾಲೋಚಿಸಿ ಟ್ರಸ್ಟ್ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಟ್ರಸ್ಟ್ ಪದಾಧಿಕಾರಿಗಳು ತಿಳಿಸಿದ್ದಾರೆ. ಟ್ರಸ್ಟ್ ಯಾವುದೇ ನಿರ್ಧಾರ ತೆಗೆದುಕೊಂಡರೂ ಅದನ್ನು ಸೂಕ್ತ ಸಮಯದಲ್ಲಿ ಸಾರ್ವಜನಿಕವಾಗಿ ಪ್ರಕಟಿಸಲಾಗುವುದು ಎಂದು ಟ್ರಸ್ಟ್‌ನ ಕಚೇರಿ ಉಸ್ತುವಾರಿ ಪ್ರಕಾಶ್ ಗುಪ್ತಾ ಅವರು ಹೇಳಿದ್ದಾರೆ.

ಅಯೋಧ್ಯೆಯ ರಾಮಮಂದಿರದಲ್ಲಿ ಭಗವಾನ್ ಶ್ರೀರಾಮನ ಐದು ವರ್ಷ ಮಗುವಿನ ರೂಪದ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಲಾಗುತ್ತಿದೆ. ರಾಮನ ಈ ವಿಶೇಷ ಮೂರ್ತಿಯನ್ನು ಈಗಾಗಲೇ ಮೂರು ಜನ ಪರಿಣತವುಳ್ಳ ಶಿಲ್ಪಿಗಳು ತಯಾರಿಸಲಾಗಿದ್ದು, ರಾಮಮಂದಿರ ಟ್ರಸ್ಟ್ ಈ ಮೂರು ವಿಗ್ರಹಗಳಲ್ಲಿ ಒಂದನ್ನು ಆಯ್ಕೆ ಮಾಡುತ್ತದೆ.

ರಾಮಮಂದಿರ ಉದ್ಘಾಟನೆಗೆ ಕೇಂದ್ರ ಸರ್ಕಾರ ರಜೆ ಘೋಷಿಸಲಿ



ಕೊಪ್ಪಳ: ರಾಮಮಂದಿರ ಉದ್ಘಾಟನೆಗೆ ರಾಜ್ಯ ಸರ್ಕಾರ ರಜೆ ಘೋಷಣೆಗೆ ಬಿಜೆಪಿ ಒತ್ತಾಯದ ಕುರಿತು ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದು, ಇದು ಕೇಂದ್ರ ಸರ್ಕಾರದ ಕಾರ್ಯಕ್ರಮ. ಹೀಗಾಗಿ ಕೇಂದ್ರ ಸರ್ಕಾರ ರಜೆ ಘೋಷಣೆ ಮಾಡಲಿ. ನಾವು ಯಾಕೆ ರಜೆ ನೀಡಬೇಕು ಎಂದು ಹೇಳಿಕೆ ನೀಡಿದ್ದಾರೆ.

ಕೊಪ್ಪಳ ತಾಲೂಕಿನ ಬಸಾಪುರ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಮಮಂದಿರ ಉದ್ಘಾಟನೆಗೆ ಯಾರಿಗೆಲ್ಲ ಆಹ್ವಾನ ಬಂದಿದೆ ಗೊತ್ತಿಲ್ಲ. ಆಹ್ವಾನ ಬಂದವರು ಹೋಗಲಿ ಎಂದರು.

2 ಸಾವಿರ ಪರಿಹಾರ: ಇದೇ ವೇಳೇ ಬರ ಪರಿಹಾರದ ಕುರಿತು ಪ್ರತಿಕ್ರಿಯಿಸಿದ ಅವರು, ಬರದ ಹಿನ್ನೆಲೆ ತಾತ್ಕಾಲಿಕವಾಗಿ 2 ಸಾವಿರ ಪರಿಹಾರ ಘೋಷಣೆ ಮಾಡಲಾಗಿದೆ. ತಾಂತ್ರಿಕ ಸಮಸ್ಯೆಯಿಂದ ಇನ್ನೂ ಬರ ಪರಿಹಾರ ತಲುಪಿಲ್ಲ. ಕೂಡಲೇ 2 ಸಾವಿರ ರೂ. ಪರಿಹಾರ ನೀಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ರಾಮ ಜನ್ಮಭೂಮಿ ಕರಸೇವೆಗೂ ಮೊದಲು ಹುಬ್ಬಳ್ಳಿಯಲ್ಲಿ ನಡೆದ ಗಲಾಟೆ ಪ್ರಕರಣದಲ್ಲಿ ಪೊಲೀಸರು ಆರೋಪಿಗಳನ್ನು ಬಂಧಿಸಿದ ವಿಚಾರದ ಕುರಿತು ಮಾತನಾಡಿದ ಅವರು, ಹಳೇ ಪ್ರಕರಣಗಳನ್ನೆಲ್ಲಾ ವಿಲೇವಾರಿ ಮಾಡುವಂತೆ ಸೂಚಿಸಿದ್ದೇವೆ. 1992ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಪ್ರಕರಣದ ಆರೋಪಿಗಳ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳುತ್ತಿದ್ದಾರೆ. ತಪ್ಪಿತಸ್ಥರ ವಿರುದ್ಧ ಕ್ರಮ ಆಗುತ್ತಿದೆ. ಅದು ಎಷ್ಟೇ ವರ್ಷ ಆಗಲಿ, ತಪ್ಪಿತಸ್ಥರನ್ನು ಸುಮ್ಮನೆ ಬಿಡಬೇಕಾ? ನಾವು ದ್ವೇಷದ ರಾಜಕಾರಣ ಮಾಡುತ್ತಿಲ್ಲ. ಹೈಕೋರ್ಟ್ ನಿರ್ದೇಶನದಂತೆ ನಾವು ಕ್ರಮ ಕೈಗೊಳ್ಳುತ್ತಿದ್ದೇವೆ ಎಂದು ಸಮಜಾಯಿಷಿ ನೀಡಿದರು. ಅತಿಥಿ ಉಪನ್ಯಾಸಕರ ಜೊತೆಗೆ ಈಗಾಗಲೇ ಮಾತನಾಡಿದ್ದೇವೆ. ಪ್ರತಿಭಟನೆ ವಾಪಸ್ ಪಡೆಯಲು ಮನವಿ ಮಾಡಿದ್ದೇವೆ. ಆದರೂ ಅವರು ಪಾದಯಾತ್ರೆ ಮಾಡುತ್ತಿದ್ದಾರೆ. ಸೇವಾ ಕಾಯಂ ಮಾಡುವಂತೆ ಅವರ ಬೇಡಿಕೆ ಇದೆ. ಕಾನೂನು ತೊಡಕಿನಿಂದ ಸೇವೆ ಖಾಯಂ ಮಾಡುವುದು ಕಷ್ಟ ಸಾಧ್ಯ ಎಂದರು.

ರಾಮನ ಹೆಸರು ಇಟ್ಟುಕೊಂಡಿರೋ ಸಿದ್ದರಾಮಯ್ಯಗೆ ಒಳ್ಳೆಯದಾಗಲಿ

ರಾಯಚೂರು: ರಾಮನ ಹೋಲಿಕೆಯನ್ನು ಇನ್ನೊಬ್ಬರಿಗೆ ಹೋಲಿಸುವಂತದ್ದಲ್ಲಾ, ರಾಮನ ಹೆಸರನ್ನು ಸಿದ್ದರಾಮಯ್ಯ ಇಟ್ಟುಕೊಂಡಿದ್ದಾರೆ. ಆದ್ದರಿಂದ ರಾಮನ ಆದರ್ಶ ಹಾಗೂ ರಾಮನ ಜನಾನುರಾಗ ಸಿದ್ದರಾಮಯ್ಯರು ಸಹ ಪಡೆಯಲಿ. ಅವರಿಗೂ ನಾವು ಅಭಿನಂದಿಸೋಣ ಎಂದು ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥಸ್ವಾಮಿ ಹೇಳಿದ್ದಾರೆ.

ರಾಯಚೂರಿನಲ್ಲಿ ಮಾತನಾಡಿದ ಮಂತ್ರಾಲಯ ಶ್ರೀಗಳು, ಸಿಎಂ ಸಿದ್ದರಾಮಯ್ಯರನ್ನು ರಾಮನಿಗೆ ಹೋಲಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ ಯಾರು ಯಾವ ಹೇಳಿಕೆ ಕೊಟ್ಟಿದ್ದಾರೆ ನಾನು ಗಮನಿಸಿಲ್ಲ. ರಾಮ ಎಲ್ಲ ರೀತಿಯಿಂದಲೂ ಅನುಕರಣೀಯ ಹಾಗೂ ಆದರ್ಶ ವ್ಯಕ್ತಿ. ನೀನು ಹೇಗಿರಬೇಕು ಅಂತ ಹೇಳುವಾಗ ರಾಮನಂತೆ ನೀನು ಇರು ಅಂತ ದೃಷ್ಟಾಂತ ಎಲ್ಲರೂ ಕೊಡುತ್ತಾರೆ. ಯಾರೊಂದಿಗೂ ಹೋಲಿಕೆ ಸರಿಯಲ್ಲ ಸಿದ್ದರಾಮಯ್ಯನವರಿಗೂ ಒಳ್ಳೆಯದಾಗಲಿ ಎಂದರು.

ಮಂತ್ರಾಲಯ ಶ್ರೀಗಳ ಆಶೀರ್ವಾದ



ಭಾರತೀಯರ, ದೇಶದ ಹಿಂದೂಗಳ ಬಹುದಿನಗಳ ಕನಸು ಈಗ ನನಸಾಗುತ್ತಿದೆ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದ ಬೇಡಿಕೆ ಈಡೇರಿದೆ. ರಾಮಮಂದಿರ ಲೋಕಾರ್ಪಣೆ ದಿನ ಬಹುತೇಕ ನಾವು ಪಾಲ್ಗೊಳ್ಳುತ್ತೇವೆ. ವಿದ್ಯುತ್ ಪ್ಯಾನಲ್ ಚಾರ್ಜ್‌ನ್ನ ಸಾಂಕೇತಿಕವಾಗಿ ಲೋಕಾರ್ಪಣೆ ಮಾಡಿ ಬಂದಿದ್ದೇವೆ ಅಂತ ಮಂತ್ರಾಲಯ ಶ್ರೀ ಹೇಳಿದರು.

ರಾಮ ವಿಗ್ರಹದ ಶಿಲೆ ಹಾಗೂ ಶಿಲ್ಪಿ ಕನ್ನಡಿಗರು ಅನ್ನೋದು ನಮ್ಮ ಹೆಮ್ಮೆ. ಹೀಗಾಗಿ ನಾವೆಲ್ಲ ಕನ್ನಡಿಗರು ಅಭಿನಂದಿಸಬೇಕು. ರಾಮ ಉತ್ತರದಿಂದ ದಕ್ಷಿಣಕ್ಕೆ ಬಂದು ಮತ್ತೆ ಉತ್ತರಕ್ಕೆ ಹೋದ. ದಕ್ಷಿಣದಿಂದ ಉತ್ತರಕ್ಕೆ ಬಾಲರಾಮನ ವಿಗ್ರಹ ಹೋಗುತ್ತಿರುವುದು ದಕ್ಷಿಣ ಉತ್ತರಗಳ ಅನುಸಂಧಾನ ಸನ್ನಿವೇಶ ಅಂತ ಮಂತ್ರಾಲಯ ರಾಯರ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮಿ ಹೇಳಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಆಕೆ : "ಡಾಕ್ಟ್ರೆ ನಮ್ಮೆಜಮಾನ್ರು ರಾತ್ರಿಯಿಡೀ ಮಲಗಿದ್ದಾಗಲೂ ಮಾತಾಡ್ತಾನೇ ಇರ್ತಾರೆ"

ಡಾಕ್ಟರ್ : "ಬೆಳಿಗ್ಗೆಯ ಹೊತ್ತು ನೀವು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದಿದ್ದರೆ ಹೀಗಾಗುತ್ತಲೇ ಇರಲಿಲ್ಲ"

ಮೈಸೂರು ಮಿತ್ರ

ಬುಧವಾರ, 3 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಪ್ರತೀಕಾರ ಒಂದು ರೀತಿಯ ಅನಾಗರಿಕ ನ್ಯಾಯ ವ್ಯವಹಾರ –ಬೇಕನ್

ವೇದ ಸುಳ್ಳಾದರೂ { ಗಂಟು ಬಲವಾಯ್ತು,
ಗಾದೆ ಸುಳ್ಳಾಗದು { ನೆಂಟರು ಹೆಚ್ಚಾದರು

ನಿಮ್ಮ ಪತ್ರಗಳು

ಉಜ್ವಲಿಸಲಿದೆ ಅಯೋಧ್ಯೆಯ ಆರ್ಥಿಕತೆ

ಮಾನ್ಯರೆ,

ದೇವತಾಪುರುಷ ಪ್ರಭು ಶ್ರೀರಾಮ ಮಂದಿರ ದೇಗುಲ ನಿರ್ಮಾಣವಾಗಿ ಉದ್ಘಾಟನೆಗೆ ಸನ್ನಿಹಿತವಾಗಿದೆ. ದೇಶದಾದ್ಯಂತ ಶ್ರೀ ರಾಮನ ಆರಾಧಕರು, ಭಕ್ತರು, ಪ್ರವಾಸಿಗರು ದರ್ಶನ ಪಡೆಯಲು ಕಾತರರಾಗಿದ್ದಾರೆ. ಅಯೋಧ್ಯೆಯೂ ಭಾರತದ ಪ್ರಮುಖ ತೀರ್ಥಕ್ಷೇತ್ರವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಈ ಮುಖಾಂತರ ಆ ಸ್ಥಳದ ಪ್ರವಾಸೋದ್ಯಮ ಬೆಳವಣಿಗೆಯಾಗಲಿದೆ. 2019ರಲ್ಲಿ ಪ್ರತಿ ಚದರ ಅಡಿ 300ರಿಂದ 400 ರೂಪಾಯಿ ಇದ್ದ ಜಾಗದ ಬೆಲೆ ಇಂದು 6 ರಿಂದ 7 ಸಾವಿರಗಳಿಗೆ ಏರಿಕೆಯಾಗಿದೆ. ಮುಂದಿನ ಹತ್ತು ವರ್ಷಗಳಲ್ಲಿ 85 ಸಾವಿರ ಕೋಟಿ ರೂಪಾಯಿ ಹೂಡಿಕೆ ಆಗಬಹುದು ಎಂದು ಅಂದಾಜಿಸಲಾಗಿದೆ. ಅಯೋಧ್ಯೆಯ ಸುತ್ತಮುತ್ತ ಟೌನ್‌ಶಿಪ್‌ಗಳು, ಹೋಟೆಲ್‌ಗಳು, ರೆಸ್ಟೋರೆಂಟ್, ಲಾಡ್ಜ್‌ಗಳು, ಅತಿಥಿ ಗೃಹಗಳು ಭಾರಿ ಮಟ್ಟದಲ್ಲಿ ತಲೆ ಎತ್ತಲಿವೆ. ಸರ್ಕಾರದಿಂದ 2,200 ಕೋಟಿ ರೂ. ವೆಚ್ಚದಲ್ಲಿ ಟೌನ್‌ಶಿಪ್‌ಗಳ ನಿರ್ಮಾಣಕ್ಕೆ ಹೂಡಿಕೆಯಾಗಲಿದೆ. ಈಗಾಗಲೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ರೈಲು ನಿಲ್ದಾಣಗಳು ಚಾಲನೆಗೊಂಡಿವೆ. ಸಾರ್ವಜನಿಕ ಮತ್ತು ಖಾಸಗಿ ಸಾರಿಗೆ ಹೆಚ್ಚಿನ ಲಾಭದ ನಿರೀಕ್ಷೆಯಲ್ಲಿದೆ. ಒಂದು ಅಂದಾಜಿನ ಪ್ರಕಾರ ಪ್ರತಿದಿನ 50 ರಿಂದ 60 ಸಾವಿರ ಭಕ್ತಾದಿಗಳು– ಪ್ರವಾಸಿಗರು ಭೇಟಿ ನೀಡಲಿದ್ದಾರೆ ಎನ್ನಲಾಗಿದೆ. ಈ ದೇಗುಲ ನಿರ್ಮಾಣದ ದೆಸೆಯಿಂದ ಸುತ್ತಮುತ್ತಲಿನ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಸಹಾಯವಾಗಿದೆ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ 50ಸಾವಿರ ಜನರಿಗೆ ಉದ್ಯೋಗ ಸೃಷ್ಟಿ ಆಗಲಿದೆ. ಸುಪ್ರೀಂ ಕೋರ್ಟ್‌ನ ಒಂದು ಘನ ಐತಿಹಾಸಿಕ ತೀರ್ಪು ಹಲವು ಉದ್ಯಮಗಳ ಉದಯಕ್ಕೆ ಸಾಕ್ಷಿಯಾಗಿ ಆರ್ಥಿಕತೆ ಬೆಳೆಯಲು ಸಹಾಯವಾಗಿದೆ.

–ಕೊಟ್ರೇಶ್ ಹೀರೆಮಠ್, ಜೆಎಸ್‌ಎಸ್ ಲೇಔಟ್, ಮೈಸೂರು.

ಚಾಮುಂಡಿಬೆಟ್ಟಕ್ಕೆ ರೋಪ್ ವೇ ಅಗತ್ಯವೇ?

ಮಾನ್ಯರೆ,

ವಿಶ್ವ ವಿಖ್ಯಾತ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ 'ರೋಪ್ ವೇ' ಪ್ರಸ್ತಾಪ ಮತ್ತೆ ಮುನ್ನೆಲೆಗೆ ಬಂದಿದೆ. ಕಳೆದ ಸುಮಾರು 40 ವರ್ಷಗಳಿಂದಲೂ (ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಸಮಯದಿಂದಲೂ) ಈ ವಿಚಾರ ಆಗಾಗ್ಗೆ ಚರ್ಚೆಗೆ ಬರುತ್ತಲೇ ಇದೆ. ಕಡೆಗೆ ಸರ್ಕಾರ ಸದ್ಯಕ್ಕೆ ಇದನ್ನು ಕೈ ಬಿಡಲಾಗಿದೆ ಎಂದು ಹೇಳಿಕೊಂಡು ಬರುತ್ತಲೇ ಇದೆ. ಈಗಲೂ ಇದು ಹೀಗೆ ಆಗುತ್ತದೆ.

ಈ ರೋಪ್ ವೇ ಪ್ರಸ್ತಾಪ ಬಂದಾಗಲೆಲ್ಲಾ ಪರಿಸರ ವಿಜ್ಞಾನಿಗಳು, ಖ್ಯಾತ ಪರಿಸರವಾದಿಗಳು, ಮೈಸೂರಿನ ಪ್ರಖ್ಯಾತ ಸಾಹಿತಿಗಳು, ಅರಣ್ಯಾಧಿಕಾರಿಗಳು, ಮೈಸೂರಿನ ಗಣ್ಯರು ಈ ರೋಪ್ ವೇಯನ್ನು ವಿರೋಧಿಸುತ್ತಾ ಬಂದಿದ್ದಾರೆ. ಯಾರದೋ ಜೇಬು ತುಂಬಿಸಲು ಇದನ್ನು ಆಗಾಗ್ಗೆ ಪ್ರಸ್ತಾಪಿಸುವುದು ಎಷ್ಟರ ಮಟ್ಟಿಗೆ ಸರಿ? ಕಳೆದ ವರ್ಷ ಬಿದ್ದ ಭಾರಿ ಮಳೆಯಿಂದಾಗಿ ಬೆಟ್ಟದ ಒಂದು ಭಾಗ ಕುಸಿದಿದೆ. ಇನ್ನು ರೋಪ್ ವೇ ನಿರ್ಮಿಸಿದರೆ ಗತಿ ಏನು. ಇವೆಲ್ಲವೂ ಗೊತ್ತಿದ್ದರೂ ಕೆಲವರು ಜಾಣ ಪೆದ್ದರಂತೆ ವರ್ತಿಸುವುದೇಕೆ ತಿಳಿಯುತ್ತಿಲ್ಲ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ದ್ವಾರಕೆಯ ದರ್ಶನದ ಪ್ರವಾಸ

ಮಾನ್ಯರೆ,

ಮಹಾಭಾರತದಲ್ಲಿ ಶ್ರೀಕೃಷ್ಣ ತನ್ನ ಮಾವ ಕಂಸನನ್ನು ವಧಿಸಿದ ನಂತರ ಕಂಸನ ಮಾವ ಅಂದಿನ ಅಜೇಯ 72 ವರ್ಷದ ಸಾಮ್ರಾಟ ಜರಾಸಂಧ, ಕೃಷ್ಣನ ನಗರ ಮಥುರಾದ ಮೇಲೆ ನಿರಂತರವಾಗಿ ದಾಳಿ ಮಾಡುತ್ತಾನೆ. ಇದರಿಂದ ಮಥುರೆಯ ಜನರಿಗೆ ಅಭದ್ರತೆ ಉಂಟಾದ ಪರಿಣಾಮ ಶ್ರೀ ಕೃಷ್ಣನು ಇಂದಿನ ಗುಜರಾತ್‌ನ ಬಳಿ ಸಮುದ್ರದ ಮಧ್ಯದ ಅಂದರೆ ಸುತ್ತಲೂ ನೀರಿನಿಂದ ಆವೃತವಾದ ದ್ವಾರಕಾ ನಗರವನ್ನು ನಿರ್ಮಾಣ ಮಾಡಲು ಸಮುದ್ರ ದೇವನ ಅನುಮತಿ ಪಡೆದು ದ್ವಾರಕೆಯನ್ನು ನಿರ್ಮಾಣ ಮಾಡುತ್ತಾನೆ.

ದ್ವಾರಕಾ ಎನ್ನುವ ಹೆಸರು ಸಂಸ್ಕೃತದ ದ್ವಾರ್ ಎನ್ನುವುದರಿಂದ ಬಂದಿದೆ ಎನ್ನಲಾಗಿದೆ. ದ್ವಾರ್ ಎಂದರೆ ಬಾಗಿಲು, ಈ ಪದದ ಮಹತ್ವವೆಂದರೆ ಇದು ಬ್ರಹ್ಮನ ಬಾಗಿಲು ಎಂಬುದಾಗಿದೆ. ದೇವತೆಗಳ ಶಿಲ್ಪಿ ವಿಶ್ವಕರ್ಮ 12 ಯೋಜನೆಯಷ್ಟು ದೊಡ್ಡದಾದ ಸ್ವರ್ಣ ದ್ವಾರಕಾ ನಗರವನ್ನು ಕೇವಲ ಎರಡು ದಿನಗಳಲ್ಲಿ ನಿರ್ಮಾಣ ಮಾಡಿದ ಎಂಬ ಪ್ರತೀತಿ ಇದೆ. ದೊಡ್ಡದೊಡ್ಡ ಗೋಡೆಗಳನ್ನು ನಗರದ ಸುತ್ತಲು ಹೊಂದಿದ್ದು ನೀರಿನಿಂದ ಆವೃತವಾದ ದ್ವಾರಕಾ ಆ ಸಮಯದ ಅಬೇಧ್ಯ ಕೋಟೆಯಾಗಿತ್ತು.

ಮಹಾಭಾರತದ 18 ದಿನಗಳ ಯುದ್ಧ ಮುಗಿದು ಗಾಂಧಾರಿ ಕೃಷ್ಣನಿಗೆ ಶಾಪ ನೀಡಿದ ಪರಿಣಾಮ ಪ್ರಭಾಸ ತೀರ್ಥದಲ್ಲಿ ಸಂಪೂರ್ಣ ಯಾದವರ ಕುಲ ನಾಶವಾಗಿ, ಬೇಡನ ಬಾಣದಿಂದ ಶ್ರೀ ಕೃಷ್ಣ ಮರಣ ಹೊಂದಿದ ಅಲ್ಪ ಸಮಯದಲ್ಲಿ ಸಮುದ್ರ ಸಂಪೂರ್ಣ ದ್ವಾರಕಾ ನಗರವನ್ನು ಅಪೋಶನ ತೆಗೆದುಕೊಳ್ಳುತ್ತದೆ.

ಮಹಾಭಾರತ, ದ್ವಾರಕಾ, ಶ್ರೀಕೃಷ್ಣ ಕೇವಲ ಕಾಲ್ಪನಿಕ ಕಥೆಯೆಂದು ನಂಬಲಾಗಿತ್ತು. ಆದರೆ 1970ರ ದಶಕದಲ್ಲಿ ಸಾಗರದ ಆಳದಲ್ಲಿ ನಡೆದ ಸಂಶೋಧನೆಯ ಫಲವಾಗಿ ಕಾಲಗರ್ಭದಲ್ಲಿ ಹುದುಗಿಹೋಗಿದ್ದ 5000 ವರ್ಷಗಳ ಹಿಂದೆ ಸಮುದ್ರದಲ್ಲಿ ಮುಳುಗಿದ್ದ ದ್ವಾರಕ ಜಗತ್ತಿಗೆ ಬೆಳಕಿಗೆ ಬಂದಿತ್ತು.

ಪ್ರಸ್ತುತ ಗುಜರಾತ್ ಸರ್ಕಾರ ದ್ವಾರಕೆಯ ದರ್ಶನದ ಮೊದಲ ಜಲಾಂತರ್ಗಾಮಿ ಯೋಜನೆಯನ್ನು ಹಮ್ಮಿಕೊಂಡಿದ್ದು, ಪ್ರವಾಸೋದ್ಯಮ ಇಲಾಖೆಯು ದ್ವಾರಕಾ ನಗರವನ್ನು ಪವಿತ್ರ ತೀರ್ಥ ಸ್ಥಳವನ್ನಾಗಿ ಮಾಡುವುದರ ಜೊತೆಗೆ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಿದಂತಾಗುತ್ತದೆ.

ದ್ವಾರಕಾ ಅತ್ಯಂತ ಪವಿತ್ರ ಸ್ಥಳವಾಗಿದ್ದು, ಪ್ರತಿಯೊಬ್ಬರು ಇದರ ದರ್ಶನಕ್ಕೆ ಕಾತುರದಿಂದ ಕಾಯುವಂತಾಗಿದೆ. ಗುಜರಾತ್ ಸಮುದ್ರದಲ್ಲಿ 100 ಮೀಟರ್ ಆಳದಲ್ಲಿರುವ ದ್ವಾರಕೆಗೆ 35 ಟನ್ ತೂಕದ ಜಲಾಂತರ್ಗಾಮಿ ನೌಕೆಯನ್ನು ಬಳಸಿ 34 ಪ್ರವಾಸಿಗರು ಒಂದು ಸಮಯದಲ್ಲಿ ದ್ವಾರಕೆಯ ದರ್ಶನ ಪಡೆಯಬಹುದಾಗಿದ್ದು, ಇದರಲ್ಲಿ 24 ಪ್ರಯಾಣಿಕರು ಕಿಟಕಿಯ ಬಳಿ ಕುಳಿತು ಸಮುದ್ರದ ಸೌಂದರ್ಯವನ್ನು ಸವಿಯಬಹುದಾಗಿದೆ.

ಗುಜರಾತ್ ಸರ್ಕಾರದ ಈ ದ್ವಾರಕಾ ಪ್ರವಾಸೋದ್ಯಮ ಉತ್ತಮ ಯೋಜನೆಯಾಗಿದ್ದು, ಇದರ ಮೂಲಕ ಕೋಟ್ಯಾಂತರ ಭಕ್ತರು ದ್ವಾರಕೆಯ ದರ್ಶನ ಮಾಡುವ ಪುಣ್ಯ ಪಡೆಯಬಹುದಾಗಿದೆ. ಈ ಮೂಲಕ ದ್ವಾರಕಾ, ಶ್ರೀಕೃಷ್ಣ ಕೇವಲ ಕಟ್ಟು ಕಥೆಯಲ್ಲ ಎಂಬುದು ಜಗತ್ತಿಗೆ ತಿಳಿದಂತಾಗುತ್ತದೆ.

ಗುಜರಾತ್ ಸರ್ಕಾರ ಸಮುದ್ರದಲ್ಲಿ ಮುಳುಗಿರುವ ದ್ವಾರಕಾ ನಗರವನ್ನು ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸೇರುವಂತೆ ಮಾಡಲು ಭಾರತ ಸರ್ಕಾರಕ್ಕೆ ಮನವಿ ಸಲ್ಲಿಸಬೇಕು ಮತ್ತು ದ್ವಾರಕೆಯ ಅಳಿದು ಉಳಿದಿರುವ ಸಮುದ್ರದಾಳದ ಅವಶೇಷಗಳನ್ನು ರಕ್ಷಣೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು.

– ರಾಸುಮ ಭಟ್, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ನಾನು ಕಂಡ ಸ್ಥಿತಪ್ರಜ್ಞ ಸಿದ್ಧೇಶ್ವರ ಸ್ವಾಮಿಗಳು



ನಮ್ಮ ಕಾಲದ ನಿಜ ಸಂತ ಶ್ರೀ ಸಿದ್ಧೇಶ್ವರ ಸ್ವಾಮಿಗಳನ್ನು ನಾವು ಕಳೆದುಕೊಂಡು ಒಂದು ವರ್ಷವಾಯಿತು. ಭಾರತ ದೇಶದಲ್ಲಿ ಸಾವಿರಾರು ಸಂನ್ಯಾಸಿಗಳಿದ್ದಾರೆ, ಮಠಾಧಿಪತಿಗಳಿದ್ದಾರೆ. ಆದರೆ ಶ್ರೀ ಸಿದ್ಧೇಶ್ವರರಂತಹ ನಿಸ್ಪೃಹರು ವಿರಳ. ಇತರರು ಕಾಷಾಯ ವಸ್ತ್ರಗಳನ್ನು ಧರಿಸಿದ್ದರೂ **ಖ್ಯಾತಿ–ಲಾಭ–ಪೂಜೆ**ಗಳನ್ನು ಅಪೇಕ್ಷಿಸುತ್ತಾರೆ. ನಾವು ಪ್ರಸಿದ್ಧರಾಗಬೇಕು, ಎಲ್ಲೆಲ್ಲೂ ನಮ್ಮ ಹೆಸರನ್ನು ಜನರು ಹೇಳುತ್ತಿರಬೇಕು, ನಮ್ಮ ಫೋಟೋ ಎಲ್ಲ ಪತ್ರಿಕೆಗಳ ಮುಖಪುಟಗಳಲ್ಲಿ ರಾರಾಜಿಸಬೇಕು ಎಂದು ಅಪೇಕ್ಷಿಸುವುದನ್ನು ಖ್ಯಾತಿ ಎಂದಿದ್ದಾರೆ. ಇದನ್ನೇ ಡಿವಿಜಿ **ಮನ್ನಣೆಯ ದಾಹ** ಎಂದು ಕರೆದರು.

ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ
ಚಿನ್ನದಾತುರಕಿಂತ ಹೆಣ್ಣು ಗಂಡೊಲವು
ಮನ್ನಣೆಯ ದಾಹವದು ಎಲ್ಲಕ್ಕಿಂತ ತೀಕ್ಷ್ಣತಮ
ತಿನ್ನುವುದದಾತ್ಮವನೆ ಮಂಕುತಿಮ್ಮ॥

ಎಂಬುದನ್ನಿಲ್ಲಿ ಗಮನಿಸಬೇಕು. ಶ್ರೀ ಸಿದ್ಧೇಶ್ವರ ಸ್ವಾಮಿಗಳು ಎಂದೂ ಎಲ್ಲಿಯೂ ಮನ್ನಣೆಯನ್ನು ಅಪೇಕ್ಷಿಸಿದವರಲ್ಲ. ಒಮ್ಮೆ ಚಿಲುಕವಾಡಿಯ ನಿಜಗುಣ ಮಂಟಪದಲ್ಲಿ ಸಭೆಯೊಂದರಲ್ಲಿ ನಾನು ಭಾಗವಹಿಸಿದ್ದೆ. ಹೋದ ಕೂಡಲೇ ವೇದಿಕೆಯ ಮೇಲೆ ನಾನು ಕುರ್ಚಿಯೊಂದರಲ್ಲಿ ಜಂಬದಿಂದ ಆಸೀನನಾಗಿದ್ದೆ. ಇತರ ಮುಖ್ಯರೂ ಬಂದು ಆಸನಗಳನ್ನು ಅಲಂಕರಿಸಿದರು. ಪ್ರಧಾನ ಭಾಷಣವನ್ನು ಮಾಡಬೇಕಾಗಿದ್ದ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಎಲ್ಲಿ ಎಂದು ನಾವೆಲ್ಲರೂ ಸುತ್ತಲೂ ನೋಡುತ್ತಿದ್ದೆವು. ಶ್ರೀ ಸಿದ್ಧೇಶ್ವರ ಸ್ವಾಮಿಗಳು ವೇದಿಕೆಗೆ ದಯಮಾಡಿಸಬೇಕು ಎಂದು ಪೂಜ್ಯ ಕುಮಾರ ನಿಜಗುಣ ಸ್ವಾಮಿಗಳು ಘೋಷಿಸಿದಾಗ ನೆಲದ ಮೇಲೆ ಸಾಮಾನ್ಯ ಜನರ ಮಧ್ಯದಲ್ಲಿ ಅತೀ ಸಾಮಾನ್ಯರಂತೆ ಕುಳಿತಿದ್ದ ಅವರು ವೇದಿಕೆಗೆ ಬಂದರು. ಖ್ಯಾತಿಯಿಂದ ದೂರವಿರಬೇಕು ಎಂಬುದು ಅವರಿಗೆ ತುಟಿಯ ಮೇಲಿನ ಮಾತು ಆಗಿರಲಿಲ್ಲ, ಹೃದಯಾಂತರಾಳದ ನಿಷ್ಠೆಯಾಗಿತ್ತು.

ಇನ್ನು ಎರಡನೆಯದು ಲಾಭ. ಉಳಿದ ಎಲ್ಲ ಆಕರ್ಷಣೆಗಳನ್ನೂ ಗೆಲ್ಲಬಹುದು. ಹಣದ ಆಕರ್ಷಣೆ ಗೆಲ್ಲುವುದು ಕಷ್ಟ.

'ಸಂನ್ಯಾಸಿನೋಽಪಿ ದಧತೇ ಸತತಂ ಧನಾಯಾಮ್'

ಎಂಬ ಮಾತು ಸಂಸ್ಕೃತದಲ್ಲಿದೆ. ಹಣವಿದ್ದರೆ ಮಠವನ್ನು ದೊಡ್ಡದಾಗಿ ಕಟ್ಟಬಹುದು, ಬೆಳ್ಳಿಯ ಅಥವಾ ಚಿನ್ನದ ಸಿಂಹಾಸನವನ್ನು ಮಾಡಿಸಿ ಅದರ ಮೇಲೆ ಕುಳಿತು ವಿಜೃಂಭಿಸಬಹುದು ಎಂಬ ಆಶೆ ಯಾವ ಮಠಾಧಿಪತಿಗಳಿಗಿಲ್ಲ? ಲಾಭ ಲೋಭದಿಂದ ಅನರ್ಹರನ್ನೂ ಓಲೈಸದವರಾರು? ಅದಕ್ಕೆಲ್ಲ ಅತೀತರಾಗಿ ಬದುಕಿದವರು ಶ್ರೀ ಸಿದ್ಧೇಶ್ವರರು. ಜೇಬಿದ್ದರೆ ತುಂಬಿಸುವ ಆಕಾಂಕ್ಷೆ ಹುಟ್ಟುತ್ತದೆ ಎಂದು ಅವರು ತಮ್ಮ ಉಡುಗೆಯಲ್ಲಿ ಜೇಬನ್ನೇ ಇಟ್ಟಿರುತ್ತಿರಲಿಲ್ಲ. ಇಂತಹ ಇನ್ನೊಬ್ಬರನ್ನು ನಾನು ನೋಡಿಲ್ಲ. ರಾಮಕೃಷ್ಣ ಪರಮಹಂಸರು ಹಾಗಿದ್ದರೆಂದು ಕೇಳಿದ್ದೇನೆ.

ಮೂರನೆಯದು **ಪೂಜೆ**. ಜನರು ಬಂದು ನಮ್ಮ ಕಾಲಿಗೆ ಬೀಳಬೇಕು. ಅಧಿಕಾರಿಗಳು, ಮಂತ್ರಿಗಳು, ವಿದ್ವಾಂಸರು, ಶ್ರೀಮಂತರು ನಮ್ಮ ಪಾದ ಧೂಳಿಯನ್ನು ತಲೆಯಲ್ಲಿ ಧರಿಸಬೇಕು ಎಂದು ಮನಸ್ಸಿನಲ್ಲೇ ಆಶಿಸುವವರು ಅಹಂಕಾರಕ್ಕೆ ಅನುವು ಮಾಡಿಕೊಟ್ಟಂತೆ ಅಲ್ಲವೆ? **ಎನಗಿಂತ ಕಿರಿಯರಿಲ್ಲ** ಎಂಬ ಮಾತನ್ನು ಬಸವಣ್ಣನವರು ಹೇಳಿದುದು, ತಾನು ಜಗತ್ತಿಗಿಂತ ಮೇಲು, ಎಲ್ಲರೂ ನನಗಿಂತ ಕೆಳಗೆ ಎಂಬ ಭಾವನೆ ಮೊಳೆಯದಿರಲಿ ಎಂದಲ್ಲವೆ? ಹತ್ತು ಜನ ಬಂದು ನನ್ನನ್ನು ನಮಸ್ಕರಿಸಿ ಗೌರವವನ್ನು ತೋರಿಸುತ್ತಿರಲಿ ಎಂದೂ ಅಪೇಕ್ಷಿಸದವರು ಶ್ರೀ ಸಿದ್ಧೇಶ್ವರ ಸ್ವಾಮಿಗಳು.

ಪ್ರಜಾಹಾತಿ ಯದಾ ಕಾಮಾನ್ ಸರ್ವಾನ್
ಪಾರ್ಥ ಮನೋಗತಾನ್।
ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥

ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದನು. ಖ್ಯಾತಿ–ಲಾಭ–ಪೂಜೆ ಎಂಬ ಮೂರರಲ್ಲೂ ಆಶೆಯನ್ನು ತ್ಯಜಿಸಿರಬೇಕು. ಬಾಹ್ಯದಲ್ಲಿ ಮಾತ್ರವಲ್ಲ, ಮನಸ್ಸಿನಲ್ಲೂ ಅಂತಹ ಆಶೆಗಳಿಗೆ ಎಡೆಕೊಡಬಾರದು. ಆತ್ಮಚಿಂತನೆಯಿಂದಲೇ ಆತ್ಮತುಷ್ಟಿಯನ್ನು ಹೊಂದಬೇಕು. ಹೊರಗಿನ ಯಾವ ವಸ್ತುವನ್ನೂ ಅಪೇಕ್ಷಿಸದೆ ಪ್ರಜ್ಞೆಯನ್ನು ಸ್ಥಿರವಾಗಿ ಇಟ್ಟುಕೊಂಡಿರಬೇಕು. ಅಂತಹ ವ್ಯಕ್ತಿಯೇ ಸ್ಥಿತಪ್ರಜ್ಞ . ಸಾಕ್ಷಾತ್ ಶ್ರೀಕೃಷ್ಣನಿಂದ ಉಪದೇಶವನ್ನು ಪಡೆದರೂ ಅರ್ಜುನನು ಸ್ಥಿತಪ್ರಜ್ಞನಾಗಿ ಬಾಳಲಿಲ್ಲ. ಆ ಸ್ಥಿತಪ್ರಜ್ಞತೆಯನ್ನು ಅಳವಡಿಸಿಕೊಂಡಿದ್ದವರು ನಾನು ಕಂಡಂತೆ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಮಾತ್ರ.

ಅವರ ಉಪನ್ಯಾಸಗಳಲ್ಲಿ ಪಾಂಡಿತ್ಯದ ಥಳುಕು ಇರುತ್ತಿರಲಿಲ್ಲ. ವೇದದ ಮಂತ್ರಗಳನ್ನೋ, ಆಂಗ್ಲ ಕವಿಗಳ ವಾಕ್ಯಗಳನ್ನೋ ಉದಾಹರಿಸಿ ಜನರು ಆಹಾ ಎಂದು ಚಪ್ಪಾಳೆ ತಟ್ಟುವಂತೆ ಮಾಡಬೇಕೆಂದು ಶ್ರೀ ಸಿದ್ಧೇಶ್ವರ ಸ್ವಾಮಿಗಳು ಎಂದೂ ಪ್ರಯತ್ನಿಸುತ್ತಿರಲಿಲ್ಲ. ಅವರದು ಸದಾ ಅನುಭವಾರೂಢವಾದ ಸರಳ ಮಾತು. ವಾಗ್ಮಿತೆಯಿಂದ ಜನರನ್ನು ಮರುಳುಗೊಳಿಸುವ ವಕ್ತಾರರನ್ನೂ ನಾನು ಕಂಡಿದ್ದೇನೆ. ಆದರೆ ಅದು ರಾಜಕಾರಣಿಗಳಿಗೆ ಶೋಭಿಸುತ್ತದೆ, ಅಧ್ಯಾತ್ಮ ಜಿಜ್ಞಾಸುಗಳಿಗಲ್ಲ. ಇಲ್ಲಿ ವಾಗ್‌ವೈಖರಿ, ಶಬ್ದ ಝರಿ, ಶಾಸ್ತ್ರ ವ್ಯಾಖ್ಯಾನ ಕೌಶಲ ಬೇಕಿಲ್ಲ. ಸತ್ಯದ ಅನ್ವೇಷಣೆಗಾಗಿ ಹೊರಟವರು ಮಗುವಿನಂತೆ ಮುಗ್ಧರಾಗಿರಬೇಕು ಎನ್ನುತ್ತದೆ ಉಪನಿಷತ್ತು (ಬಾಲವದೇವ ತಿಷ್ಠಾಸೇತ್). ಹಾಗಿದ್ದವರು ಶ್ರೀ ಸಿದ್ಧೇಶ್ವರ ಸ್ವಾಮಿಗಳು.

ಅವರು ಪಾತಂಜಲ ಯೋಗಸೂತ್ರಗಳಿಗೂ ನಾರದ ಭಕ್ತಿ ಸೂತ್ರಗಳಿಗೂ ಇಂಗ್ಲೀಷಿನಲ್ಲಿ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಅವುಗಳ ರಚನೆಯ ಕಾಲದಲ್ಲಿ ಅವರು ಸುತ್ತೂರಿನಲ್ಲಿದ್ದರು. ಆ ಸಂದರ್ಭದಲ್ಲಿ ಕರಡನ್ನು ತಿದ್ದುವ ಕಾರ್ಯದಲ್ಲಿ ನಾನೂ ಭಾಗವಹಿಸಿದ್ದೆ. ಅವರ ಇಂಗ್ಲಿಷ್ ಭಾಷೆಯ ಪ್ರಭುತ್ವ, ಶಬ್ದ ಸಂಪತ್ತು, ನಿರೂಪಣೆಯ ನೈಪುಣ್ಯ – ಇವುಗಳನ್ನೆಲ್ಲ ಕಾಣುವ ಪುಣ್ಯ ನನ್ನದಾಗಿತ್ತು. ಸೂತ್ರಗಳ ವಿವರಣೆಯಲ್ಲಿ ಎಲ್ಲೂ ಅವರು ಚಮತ್ಕಾರವನ್ನೂ ತೋರಿಸಲು ಯತ್ನಿಸುತ್ತಿರಲಿಲ್ಲ. ವ್ಯಾಸ ಭಾಷ್ಯ, ತತ್ತ್ವ ವೈಶಾರದೀ ಮುಂತಾದ ಗ್ರಂಥಗಳನ್ನೂ ಯೋಗದ ವಿಷಯದಲ್ಲಿ ಈಗಾಗಲೇ ಬಂದಿರುವ ಆಂಗ್ಲ ಪುಸ್ತಕಗಳನ್ನೂ ಆಮೂಲಾಗ್ರವಾಗಿ ನೋಡಿ, ಆ ವಿಚಾರಗಳನ್ನು ತಮ್ಮ ಅನುಭವದ ಮೂಸೆಯಲ್ಲಿ ಕರಗಿಸಿ ಒಂದೊಂದು ವಾಕ್ಯವನ್ನೂ ಬರೆಯುತ್ತಿದ್ದರು.

ಬಿಜಾಪುರದ ಜ್ಞಾನಯೋಗಾಶ್ರಮಕ್ಕೆ ಸುಮಾರು ಮೂವತ್ತು ವರ್ಷಗಳ ಹಿಂದೆ ನಾನು ಪೂಜ್ಯ ಕುಮಾರ ನಿಜಗುಣ ಸ್ವಾಮಿಗಳೊಡನೆ ಹೋಗಿದ್ದೆ. ಡಾ. ಆರ್.ಗಣೇಶ್ ಅವರ ಅಷ್ಟಾವಧಾನ ಕಾರ್ಯಕ್ರಮವೂ ಆಗ ಅಲ್ಲಿ ಏರ್ಪಾಟಾಗಿತ್ತು. ಮರುದಿನ ಬೆಳಗ್ಗೆ ಆರು ಘಂಟೆಗೆ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಉಪನ್ಯಾಸವಿತ್ತು. ಹೇಳಿ–ಕೇಳಿ ಅಧ್ಯಾತ್ಮ ವಿಷಯದ ಬಗೆಗೆ ಉಪನ್ಯಾಸ; ಪ್ರಾತಃಕಾಲ ನಸುಕಿನ ವೇಳೆ. ಅಷ್ಟು ಬೇಗ ಎದ್ದು ಯಾವ ಶ್ರೋತೃಗಳು ಬರುತ್ತಾರೆ ಎಂದುಕೊಂಡ ನಾನಂತೂ, ಬೆಳಗಿನ ಜಾವದಲ್ಲೇ ಎದ್ದು ಸ್ನಾನಾದಿಗಳನ್ನು ಮುಗಿಸಿ ಅಲ್ಲಿಗೆ ಮೊದಲೇ ಹೋದೆ. ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಅಷ್ಟು ಹೊತ್ತಿಗೇ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಪುರುಷರೂ, ಸ್ತ್ರೀಯರೂ ನೊಸಲಿನಲ್ಲಿ ವಿಭೂತಿಯನ್ನು ಧರಿಸಿ ಶುಶ್ರೂಷುಗಳಾಗಿ ಶಿಸ್ತಿನಿಂದ ಕುಳಿತಿದ್ದರು. ನಿಜವಾದ ಜ್ಞಾನಿಗಳು ಮಾತನಾಡುತ್ತಾರೆ ಎಂದರೆ ಕೇಳುಗರು ತಾವಾಗಿ ಬರುತ್ತಾರೆ. ಮಕರಂದವುಳ್ಳ ಪುಷ್ಪಗಳಿದ್ದರೆ ಭ್ರಮರಗಳಿಗೆ ಆಹ್ವಾನವನ್ನು ಕಳುಹಿಸಬೇಕಾಗಿಲ್ಲ. ಅವು ತಾವೇ ಬರುತ್ತವೆ. ಬಣ್ಣ ಬಣ್ಣದ ಕಾಗದದ ಹೂವುಗಳನ್ನಿಟ್ಟರೆ ಯಾವ ಭ್ರಮರವೂ ಬರುವುದಿಲ್ಲ. ಏನೂ ತಿಳಿಯದ, ತಾವೇ ಸರ್ವಜ್ಞರೆಂದು ಸ್ವಯಂ ಭಾವಿಸಿಕೊಂಡಿರುವ ಭಾಷಣಕಾರರನ್ನು ನಿಲ್ಲಿಸಿ ಶ್ರೋತೃಗಳೇ ಬರಲಿಲ್ಲವೆಂದರೆ ತಪ್ಪು ಯಾರದು. ಯಾವ ಊರಾದರೂ ಸರಿ. ಶ್ರೋತೃಗಳು ದಡ್ಡರಲ್ಲ. ಮೈಸೂರಿನಲ್ಲೂ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಪ್ರವಚನ ನಡೆಯುವುದೆಂದು ಪ್ರಕಟವಾದಾಗ ಜನರು ಹುಲುಸಾಗಿ ಸೇರುತ್ತಿದ್ದರು. ಒಮ್ಮೆ ಅವರು ಮೈಸೂರಿನ ಬಳಿ ಇರುವ ನಕ್ಷತ್ರ ಫಾರಂನಲ್ಲಿ ತಂಗಿದ್ದರು. ಅವರು ಬೆಳಗ್ಗೆ ಎದ್ದು ನಡಿಗೆ ಮಾಡುವಾಗ ಯಾದೃಚ್ಛಿಕವಾಗಿ ಆಡುವ ಮಾತುಗಳನ್ನು ಕೇಳಿ ತಮ್ಮ ಜ್ಞಾನದ ಖಜಾನೆಯನ್ನು ತುಂಬಿಸಿಕೊಳ್ಳಲು ಎಷ್ಟೊಂದು ಜಿಜ್ಞಾಸುಗಳು ಬರುತ್ತಿದ್ದರು!

ಪ್ರಶಸ್ತಿಗಳಿಗಾಗಿ ಹಾತೊರೆಯುವುದು, ಅವುಗಳಿಗಾಗಿ ಯಾರು ಯಾರದೋ ಕಾಲು ಕಟ್ಟುವುದು, ಪ್ರಭಾವಿಗಳಿಂದ ಹೇಳಿಸಿ ಪ್ರಶಸ್ತಿ ಗಿಟ್ಟಿಸಿಕೊಳ್ಳುವುದು, ತಮ್ಮ ಲೆಟರ್‌ಹೆಡ್‌ಗಳ ಅರ್ಧಭಾಗವನ್ನು ಪ್ರಶಸ್ತಿಗಳ ಮುದ್ರಣದಿಂದಲೇ ತುಂಬಿಸುವುದು ಇಂದಿನ ಗೀಳಾಗಿದೆ. ಕೆಲವರಂತೂ ತಮಗೆ ಬಂದಿರುವ ಪ್ರಶಸ್ತಿಗಳ ದೀರ್ಘ ಮಾಲೆಯನ್ನು ವರ್ಣಿಸುವುದಕ್ಕಾಗಿ ಪುಸ್ತಕಗಳನ್ನೇ ಸ್ವಂತ ಖರ್ಚಿನಲ್ಲಿ ಮುದ್ರಿಸಿ ಸಿಕ್ಕಿದವರಿಗೆಲ್ಲ ಹಂಚುತ್ತಾರೆ. ಈ ಸಂಸ್ಥೆಯ ಸದಸ್ಯರಿಗೆ ಬುದ್ಧಿಯಿಲ್ಲ, ಸರ್ಕಾರದವರಿಗೆ ವಿವೇಕವಿಲ್ಲ, ನನಗೆ ಸಲ್ಲಲೇಬೇಕಾದ ಪ್ರಶಸ್ತಿಯನ್ನು ಇನ್ನೂ ಕೊಟ್ಟಿಲ್ಲ ಎಂದು ಗಲಾಟೆ ಮಾಡುವ ಭೂಪರೂ ಇದ್ದಾರೆ. ಹೀಗಿರುವಾಗ ತಾನಾಗಿ, ಅಯಾಚಿತವಾಗಿ ಬಂದ ಅತ್ಯುನ್ನತ ಪ್ರಶಸ್ತಿಗಳನ್ನೂ 'ಸಂನ್ಯಾಸಿಯಾದ ನನಗೇಕೆ ಪ್ರಶಸ್ತಿ' ಎಂದು ವಿನಯದಿಂದ ಬೇಡವೆಂದವರು ಶ್ರೀ ಸಿದ್ಧೇಶ್ವರ ಸ್ವಾಮಿಗಳು.

ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು
ಜಲಪ್ರಳಯವಾದಲ್ಲಿ ವಾಯುವಿನಂತಿರಬೇಕು
ಮಹಾಪ್ರಳಯವಾದಲ್ಲಿ ಆಕಾಶದಂತಿರಬೇಕು
ಜಗತ್ ಪ್ರಳಯವಾದಲ್ಲಿ ತನ್ನ ತಾ ಬಿಡಬೇಕು
ಗುಹೇಶ್ವರನೆಂಬ ಲಿಂಗ ತಾನಾಗಿರಬೇಕು

ಎಂಬ ವಚನವನ್ನನುಸರಿಸಿ ಆ ಪೂಜ್ಯರು ಇಲ್ಲಿದ್ದರು. ಸಾಕೆನಿಸಿದಾಗ ಇಲ್ಲಿಂದ ಹೊರಟರು. ಅವರ ಮಾತುಗಳನ್ನು ಕೇಳಿದವರು ಧನ್ಯರು.

ಇನ್ನು 15 ದಿನ ದಸರಾ ವಸ್ತುಪ್ರದರ್ಶನ ವಿಸ್ತರಣೆಗೆ ಸರ್ಕಾರಕ್ಕೆ ಪತ್ರ

- ಜ.12ಕ್ಕೆ ಅಂತ್ಯಗೊಳ್ಳಬೇಕಿದೆ
- ಸಾರ್ವಜನಿಕರಿಂದ ಭಾರಿ ಪ್ರತಿಕ್ರಿಯೆ ಹಿನ್ನೆಲೆ
- ಪ್ರವಾಸೋದ್ಯಮ ದೃಷ್ಟಿಯಿಂದ ವಿಸ್ತರಣೆಗೆ ಮನವಿ

ಮೈಸೂರು, ಜ.2(ಜಿಎ)–ಮೈಸೂರು ದಸರಾ ವಸ್ತುಪ್ರದರ್ಶನಕ್ಕೆ ಕಳೆದ ಬಾರಿಗಿಂತಲೂ ಈ ಬಾರಿ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಈ ಹಿನ್ನೆಲೆಯಲ್ಲಿ 15 ದಿನ ವಸ್ತುಪ್ರದರ್ಶನವನ್ನು ವಿಸ್ತರಿಸಲು ಚಿಂತಿಸಿರುವ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರವು ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆದಿದೆ.

ಮೈಸೂರು ದಸರಾ ಮಹೋತ್ಸವದಲ್ಲಿ ಇಡೀ ಮೈಸೂರು ನಗರ ಮತ್ತು ಅಕ್ಕಪಕ್ಕದ ಪ್ರವಾಸಿ ತಾಣಗಳು ಪ್ರವಾಸಿಗರಿಂದ ತುಂಬಿದ್ದವು. ಇತ್ತ ದಸರಾ ವಸ್ತುಪ್ರದರ್ಶನ ಸುದೀರ್ಘ ಪ್ರವಾಸಿಗರ ಮನರಂಜನೆಯ ನೆಚ್ಚಿನ ತಾಣವಾಗಿರುತ್ತದೆ. ಕಳೆದ ವರ್ಷ 98 ದಿನಗಳಲ್ಲಿ 17 ಲಕ್ಷ ಜನರು ವಸ್ತು ಪ್ರದರ್ಶನಕ್ಕೆ ಭೇಟಿ ನೀಡಿದ್ದರು. ಆದರೆ ಈ ಬಾರಿ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.20ರಷ್ಟು ಹೆಚ್ಚು ಮಂದಿ ಭೇಟಿ ನೀಡಿದ್ದಾರೆ.

ಈ ಬಾರಿ ರಾಜ್ಯ ಸರ್ಕಾರ ತಮ್ಮ ಗ್ಯಾರಂಟಿಗಳಲ್ಲಿ ಪ್ರಮುಖವಾಗಿ ಮಹಿಳೆಯರಿಗೆ 'ಶಕ್ತಿ' ಯೋಜನೆಯಡಿ ಉಚಿತ ಬಸ್ ಪ್ರಯಾಣ ಕಲ್ಪಿಸಿರುವ ಹಿನ್ನೆಲೆಯಲ್ಲಿ 75 ದಿನದಲ್ಲೇ 16 ಲಕ್ಷ ಪ್ರವಾಸಿಗರು ವಸ್ತು ಪ್ರದರ್ಶನಕ್ಕೆ ಭೇಟಿ ನೀಡುವ ಮೂಲಕ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.



3.44 ಕೋಟಿ ರೂ. ಟೆಂಡರ್ ಹೆಚ್ಚಳ

ಕಳೆದ ಬಾರಿ ಬೆಂಗಳೂರಿನ ಫನ್ ವರ್ಲ್ಡ್ ಇಂಡಿಯಾ ರೆಸಾರ್ಟ್ ಪ್ರೈ.ಲಿ. 8.08 ಕೋಟಿ ರೂ.ಗೆ, ಈ ಬಾರಿಯೂ 11.52 ಕೋಟಿ ರೂ.ಗೆ ವಸ್ತುಪ್ರದರ್ಶನದ ಟೆಂಡರ್ ಪಡೆದುಕೊಂಡಿದೆ. ಕಳೆದ ಬಾರಿಗಿಂತಲೂ ಈ ಬಾರಿ 3.44 ಕೋಟಿ ರೂ. ಅಧಿಕ ಟೆಂಡರ್ ಪಡೆದುಕೊಂಡಿದ್ದರು. ಅಪಾರ ಸಂಖ್ಯೆಯ ಪ್ರವಾಸಿಗರ ಭೇಟಿಯಿಂದ ಸಂತಸಗೊಂಡಿರುವ ಟೆಂಡರ್‌ದಾರರು ವಸ್ತುಪ್ರದರ್ಶನ ವಿಸ್ತರಿಸುವಂತೆ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

> ಸರ್ಕಾರದ ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ' ಯೋಜನೆಯಿಂದ ಈ ಬಾರಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ವಸ್ತುಪ್ರದರ್ಶನಕ್ಕೆ ಭೇಟಿ ನೀಡಿದ್ದಾರೆ. ಪ್ರವಾಸೋದ್ಯಮಕ್ಕೆ ಅನುಕೂಲ ಕಲ್ಪಿಸುವ ಜೊತೆಗೆ ಟೆಂಡರ್‌ದಾರರ ಬೇಡಿಕೆ ಹಿನ್ನೆಲೆಯಲ್ಲಿ ಮತ್ತೆ 15 ದಿನ ವಸ್ತುಪ್ರದರ್ಶನವನ್ನು ಮುಂದುವರಿಸಲು ಅವಕಾಶ ನೀಡುವಂತೆ ಪ್ರಾಧಿಕಾರದಿಂದ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಅದಕ್ಕೆ ಅನುಮತಿ ಸಿಕ್ಕರೆ ಜನವರಿ 28ರವರೆಗೂ ವಸ್ತುಪ್ರದರ್ಶನ ವಿಸ್ತರಣೆಯಾಗಲಿದೆ. ಇಲ್ಲದಿದ್ದರೆ ಜನವರಿ 12ಕ್ಕೆ ಕೊನೆಯಾಗಲಿದೆ. ಈಗಾಗಲೇ ಬೇಸಿಗೆ ಮೇಳ ನಡೆಸಲು ಸಿದ್ಧತೆ ಮಾಡಿಕೊಂಡಿದ್ದು, ಮಳಿಗೆದಾರರು ಆಸಕ್ತಿ ತೋರಿದ್ದಾರೆ. **– ರಾಜೇಶ್ ಜಿ.ಗೌಡ, ಸಿಇಒ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ.**

ಸಂಜೆಯಾಗುತ್ತಿದ್ದಂತೆ ವಸ್ತು ಪ್ರದರ್ಶನಕ್ಕೆ ಆಗಮಿಸುವ ಜನರು ತಮ್ಮಾಸೆಯಂತೆ ಶಾಪಿಂಗ್ ಮಾಡಿ, ಅಮ್ಯೂಸ್‌ಮೆಂಟ್ ಪಾರ್ಕ್‌ನಲ್ಲಿ ಆಟವಾಡಿ ಭರಪೂರ ಮನರಂಜನೆ ಪಡೆದಿದ್ದಾರೆ. ಜ.12ರವರೆಗೆ ವಸ್ತು ಪ್ರದರ್ಶನವಿದ್ದು, ಉಳಿದ 11 ದಿನದಲ್ಲಿ 4 ಲಕ್ಷ ಜನ ಭೇಟಿ ನೀಡಲಿದ್ದಾರೆ. ಅಂದಾಜು 20 ಲಕ್ಷ ಪ್ರವಾಸಿಗರನ್ನು ಪ್ರಾಧಿಕಾರ ನಿರೀಕ್ಷೆ ಮಾಡಿದ್ದು, ಮತ್ತೆ 15 ದಿನ ವಿಸ್ತರಣೆಯಾದರೆ ಪ್ರವಾಸಿಗರ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ. ದಸರಾ ಮಹೋತ್ಸವದ 9 ದಿನಗಳಲ್ಲಿ ಪ್ರತಿದಿನ ವಸ್ತುಪ್ರದರ್ಶನಕ್ಕೆ 70 ಸಾವಿರ ಪ್ರವಾಸಿಗರು ಭೇಟಿ ನೀಡಿದ್ದಾರೆ. ದೀಪಾವಳಿ, ಕ್ರಿಸ್‌ಮಸ್, ಹೊಸ ವರ್ಷ ಮತ್ತು ವಾರಾಂತ್ಯದಲ್ಲಿ 50 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ವಸ್ತುಪ್ರದರ್ಶನಕ್ಕೆ ಭೇಟಿ ನೀಡಿದ್ದಾರೆ. ಈ ಬಾರಿ ವಸ್ತುಪ್ರದರ್ಶನದಲ್ಲಿ 145 ವಾಣಿಜ್ಯ ಮಳಿಗೆ, 60 ಫುಡ್ ಕೋರ್ಟ್, 40 ಸರ್ಕಾರದ ಮಳಿಗೆ, 46 ಅಮ್ಯೂಸ್‌ಮೆಂಟ್ ಮನರಂಜನೆಗಳು ಈ ಬಾರಿ ಗಮನ ಸೆಳೆದಿದ್ದು, ಅದರಲ್ಲಿಯೂ ಸರ್ಕಾರದ ವಿವಿಧ ಇಲಾಖೆಗಳ ಮಳಿಗೆಗಳಲ್ಲಿ ಗ್ರಾಮೀಣಾಭಿವೃದ್ಧಿ, ಮಂಡ್ಯದ ಬೆಲ್ಲದ ಮನೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಶಕ್ತಿ ಯೋಜನೆಗೆ ಪೂರಕವಾಗಿ ವಸ್ತು ಪ್ರದರ್ಶನ ಪ್ರಾಧಿಕಾರವು ದೂರ ದೂರಿಂದ ಬರುವ ಮಹಿಳೆಯರಿಗೆ ತಮ್ಮ ಲಗೇಜ್‌ಗಳನ್ನು ಹಿಡಿದುಕೊಂಡು ವಸ್ತುಪ್ರದರ್ಶನ ಮೈದಾನದಲ್ಲಿ ಓಡಾಡುವುದು ಕಷ್ಟಕರವೆಂದು ತಿಳಿದು ಈ ಬಾರಿ ಜನರ ಲಗೇಜ್ ಇಡಲು ವಸ್ತುಪ್ರದರ್ಶನದ ಆವರಣದಲ್ಲಿ ಲಗೇಜ್ ಕೌಂಟರ್ ಮಾಡಲಾಗಿತ್ತು ಹಾಗೇ ಸೆಲ್ಫಿ ಪಾಯಿಂಟ್, ಹೊಸ ಹೊಸ ಮನರಂಜನಾ ತಾಣಗಳು ಆಕರ್ಷಣೀಯವಾಗಿತ್ತು. ಪ್ರಾಧಿಕಾರವು ಸುರಕ್ಷತೆ ದೃಷ್ಟಿಯಿಂದ 70 ಸಿಸಿಟಿವಿ ಅಳವಡಿಸಿ ಮುಂಜಾಗ್ರತಾ ಕ್ರಮ ತೆಗೆದುಕೊಂಡಿದ್ದು ವಿಶೇಷವಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಭಾರತಕ್ಕೆ ಬ್ರಿಟಿಷರಿಂದ ಕೆಟ್ಟದ್ದಷ್ಟೇ ಅಲ್ಲ ಒಳ್ಳೆಯದೂ ಆಗಿದೆ

ಪ್ರಾಂಶುಪಾಲ ಪ್ರೊ.ನಟರಾಜ್ ಅಭಿಪ್ರಾಯ



ಮೈಸೂರು, ಜ.2(ಬಿಎಲ್‌ಯು)– ಭಾರತಕ್ಕೆ ಬ್ರಿಟಿಷರಿಂದ ಎಷ್ಟು ಕೆಟ್ಟದಾಗಿದೆಯೋ ಅಷ್ಟೆ ಒಳ್ಳೆಯದೂ ಆಗಿದೆ ಎಂದು ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ.ನಟರಾಜ್ ಅಭಿಪ್ರಾಯಪಟ್ಟರು.

ಮೈಸೂರಿನ ಯುವರಾಜ ಕಾಲೇಜು ಸಭಾಂಗಣದಲ್ಲಿ ಇಂದು ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳತ್ತ ಸಂವಿಧಾನ ಕುರಿತ ಉಪನ್ಯಾಸದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಸಂಗ್ರಾಮದ ವೇಳೆ ದಂಗೆ ಎದ್ದ ಜನರನ್ನು ಸಮಾಧಾನ ಮಾಡಲು ಬ್ರಿಟಿಷರು ಕೆಲವು ಸಮಾನ ನಾಗರಿಕ ಕಾನೂನು ಜಾರಿಗೊಳಿಸಿದರು. ಈ ಮೂಲಕ ಬ್ರಿಟಿಷರಿಂದ ಎಷ್ಟು ಕೆಟ್ಟದಾಗಿದೆಯೋ, ಅಷ್ಟೆ ಒಳ್ಳೆಯದಾಗಿದೆ ಎಂದರು.

ವಿಶ್ವದ ಎಲ್ಲಾ ದೇಶಗಳ ಸಂವಿಧಾನಕ್ಕಿಂತ ಭಾರತದ ಸಂವಿಧಾನ ಶ್ರೇಷ್ಠವಾಗಿದೆ. ವಿವಿಧತೆಯಲ್ಲಿ ಏಕತೆ ಸಾರುವ ಪ್ರತಿಯೊಬ್ಬರು ಒಪ್ಪುವ ಸಂವಿಧಾನ ರೂಪಿಸುವುದು ಸವಾಲಿನ ಸಂಗತಿಯಾಗಿತ್ತು. ಅದರಂತೆ ವಿಶಿಷ್ಟವಾದ ಸಂವಿಧಾನ ಭಾರತದಲ್ಲಿ ಜಾರಿಗೊಂಡಿತು. ದೇಶದ ಪ್ರತಿಯೊಬ್ಬ ಪ್ರಜೆಯು ಸಂವಿಧಾನದ ಬಗ್ಗೆ ತಿಳುವಳಿಕೆ ಹೊಂದುವುದು ಅತ್ಯಗತ್ಯ ಎಂದು ಪ್ರೊ.ನಟರಾಜ್ ಸಲಹೆ ನೀಡಿದರು.

ನಮ್ಮನ್ನು ಆಳುತ್ತಿರುವುದು ಕಾನೂನು ಹೊರತು, ವ್ಯಕ್ತಿಯಲ್ಲ. ಪ್ರಧಾನ ಮಂತ್ರಿಯೇ ಆಗಲಿ, ಮುಖ್ಯಮಂತ್ರಿ ಆಗಲಿ ಕಾನೂನಿನ ಅಡಿಯಲ್ಲಿ ಸಂವಿಧಾನದಂತೆ ರೂಪಿತವಾದ ಕಾನೂನಿನಡಿ ಕಾರ್ಯ ನಿರ್ವಹಿಸುತ್ತಾರೆ ಎಂದು ಹೇಳಿದರು.

ಜಾತ್ಯಾತೀತ ರಾಷ್ಟ್ರ ಭಾರತದಲ್ಲಿ ಕೆಲವು ಅವ್ಯವಸ್ಥೆ ಇರಬಹುದು. ಆದರೆ ಬಹಳಷ್ಟು ಜನರು ಟೀಕೆ ಮಾಡುವಷ್ಟು ವ್ಯವಸ್ಥೆ ಕೆಟ್ಟು ಹೋಗಿಲ್ಲ ಎಂದು ಅಭಿಪ್ರಾಯಪಟ್ಟರು.

ಸಾವಿರಾರು ವಿದ್ಯಾರ್ಥಿಗಳು ಉಪನ್ಯಾಸದಲ್ಲಿ ಪಾಲ್ಗೊಂಡಿದ್ದರು. ಪ್ರತಿಯೊಬ್ಬ ಭಾಷಣಕಾರರ ಮಾತುಗಳನ್ನು ಆಲಿಸಿದ ನಂತರ ಪ್ರಬಂಧ ಬರೆಯುವಂತೆ ಅಧ್ಯಾಪಕರು ವಿದ್ಯಾರ್ಥಿಗಳಿಗೆ ತಾಕೀತು ಮಾಡಿದರು. ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಮುಖ್ಯಸ್ಥ ಪ್ರೊ.ಸೋಮಶೇಖರ್, ಯುವರಾಜ ಕಾಲೇಜು ಪ್ರಾಂಶಪಾಲ ಪ್ರೊ.ದೇವರಾಜೇಗೌಡ, ಕಾಲೇಜು ಆಡಳಿತಾಧಿಕಾರಿ ಪ್ರೊ.ಎಂ.ಕೆ.ಮಹೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮೈಸೂರು ತಾಲೂಕು ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಗುರುಸ್ಪಂದನಾ ಮತ್ತು 2024ರ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿಎಂ ವಿವೇಕಾನಂದ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಮಹದೇವ, ಮೈಸೂರು ತಾಲೂಕು ಅಧ್ಯಕ್ಷ ರಘು, ಪ್ರಧಾನ ಕಾರ್ಯದರ್ಶಿ ಡಿ.ಮಾಲೇಗೌಡ, ಗೌರವಾಧ್ಯಕ್ಷ ಜೆ.ಬಿ.ಸತೀಶ್, ಖಜಾಂಚಿ ವೆಂಕಟೇಶ್, ಉಪಾಧ್ಯಕ್ಷ ಶಿವಪ್ಪ, ಸುಮತಿ, ಅಶೋಕ್, ಅನಿಲ್‌ಕುಮಾರ್, ಮಹೇಶ್ ಉಪಸ್ಥಿತರಿದ್ದರು.

ಜನವರಿ ತಿಂಗಳ ವಿದ್ಯುತ್ ಬಿಲ್ ತುಸು ಹಗುರ!

ಬೆಂಗಳೂರು: ನವೆಂಬರ್ ತಿಂಗಳಲ್ಲಿ ಇಂಧನ ಮತ್ತು ವಿದ್ಯುತ್ ಖರೀದಿ ಹೊಂದಾಣಿಕೆ ವೆಚ್ಚ (ಎಫ್‌ಪಿಪಿಸಿಎ) ಇಳಿಕೆ ಆಗಿರುವ ಕಾರಣ ರಾಜ್ಯದ ಎಲ್ಲ ಎಸ್ಕಾಂಗಳು(ವಿದ್ಯುತ್ ಸರಬರಾಜು ಕಂಪನಿ) ಗ್ರಾಹಕರಿಗೆ ಜನವರಿ ತಿಂಗಳಲ್ಲಿ ನೀಡುವ ವಿದ್ಯುತ್ ಬಿಲ್‌ನಲ್ಲಿ ಪ್ರತಿ ಯೂನಿಟ್‌ಗೆ 3 ಪೈಸೆಯಿಂದ 51 ಪೈಸೆವರೆಗೂ ಕಡಿತಗೊಳಿಸಲು ನಿರ್ಧರಿಸಿವೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ(ಬೆಸ್ಕಾಂ) ಪ್ರತಿ ಯೂನಿಟ್‌ಗೆ 37 ಪೈಸೆಯನ್ನು ಕಡಿತಗೊಳಿಸುವುದಾಗಿ ತಿಳಿಸಿದೆ. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ), ಪ್ರತಿ ಯೂನಿಟ್‌ಗೆ 51 ಪೈಸೆ, ಹೆಸ್ಕಾಂ ವ್ಯಾಪ್ತಿಯಲ್ಲಿ 3 ಪೈಸೆ, ಸೆಸ್ಕ್ ವ್ಯಾಪ್ತಿಯಲ್ಲಿ 39 ಪೈಸೆ ಮತ್ತು ಮೆಸ್ಕಾಂ ವ್ಯಾಪ್ತಿಯಲ್ಲಿ 31 ಪೈಸೆ ಕಡಿತಗೊಳಿಸುವುದಾಗಿ ಆಯಾ ಕಂಪನಿಗಳು ತಿಳಿಸಿವೆ. ಡಿಸೆಂಬರ್ ತಿಂಗಳಲ್ಲಿ ಗ್ರಾಹಕರು ಬಳಸಿದ ಗೃಹ ಬಳಕೆ, ವಾಣಿಜ್ಯ ಸೇರಿದಂತೆ ಎಲ್ಲ ವಿಧದ ವಿದ್ಯುತ್ ಶುಲ್ಕದ ಮೇಲೆ ಪ್ರತಿ ಯೂನಿಟ್‌ಗೆ ಮೇಲೆ ತಿಳಿಸಿರುವಷ್ಟು ಹಣವನ್ನು ಆಯಾ ಕಂಪನಿಗಳು ಕಡಿತಗೊಳಿಸುತ್ತವೆ. ರಾಜ್ಯ ಸರ್ಕಾರದ 'ಗೃಹ ಜ್ಯೋತಿ'ಯೋಜನೆಯಡಿ ಉಚಿತವಾಗಿ 200 ಯೂನಿಟ್ ವಿದ್ಯುತ್ ಬಳಸುವ ಗ್ರಾಹಕರಿಗೆ ಇದರಿಂದ ಪ್ರಯೋಜನವಾಗುವುದಿಲ್ಲ. 200 ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಸುವ ಗೃಹಬಳಕೆ ಹಾಗೂ ವಾಣಿಜ್ಯ ಬಳಕೆದಾರರಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಲಿದೆ.

ರಾಮಮಂದಿರ ಉದ್ಘಾಟನೆ ನಂತರ ಅಯೋಧ್ಯಾ ನಗರಿಗೆ ಬನ್ನಿ...

ಮೈಸೂರಿನ ಪ್ರತಿ ಮನೆ ಮನೆಗೆ ಮಂತ್ರಾಕ್ಷತೆ ನೀಡಿ ಸಾಂಪ್ರದಾಯಿಕ ಸ್ವಾಗತ

- ಉದ್ಘಾಟನೆ ದಿನದಂದು ಭಜನೆ, ಕೀರ್ತನೆ ಹಾಡಿ
- ಸಾಮೂಹಿಕವಾಗಿ 108 ಬಾರಿ ಜಪ ಮಾಡಿ
- ದೇವಾಧಿ ದೇವತೆಗಳು ಪ್ರಸನ್ನರಾಗಲಿ


ಮೈಸೂರು, ಜ.2(ಬಿಎಲ್‌ಯು)– ಶ್ರೀರಾಮನ ಜನ್ಮಸ್ಥಳ ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಜ.24ರಂದು ರಾಮ ಮಂದಿರದ ಉದ್ಘಾಟನೆ ನೆರವೇರಲಿದ್ದು, ತರುವಾಯ ಅಯೋಧ್ಯಾನಗರಿಗೆ ಭೇಟಿ ನೀಡುವಂತೆ ಮೈಸೂರಿನ ಪ್ರತಿ ಯೊಂದು ಮನೆಗೂ ಮಂತ್ರಾಕ್ಷತೆ ನೀಡಿ ಸಾಂಪ್ರದಾಯಿಕವಾಗಿ ಆಹ್ವಾನ ನೀಡಲಾಗುತ್ತಿದೆ.

ಶ್ರೀರಾಮ ಜನ್ಮ ಭೂಮಿ ತೀರ್ಥ ಕ್ಷೇತ್ರದ ಪರವಾಗಿ ಹಿಂದು ಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಯೊಂದು ಮನೆಗೂ ಭೇಟಿ ನೀಡಿ ರಾಮಮಂದಿರದ ಭಾವಚಿತ್ರ, ಭಿತ್ತಿಪತ್ರ, ಮಂತ್ರಾಕ್ಷತೆ ನೀಡಿ ಶ್ರೀರಾಮನ ದರ್ಶನ ಮಾಡುವಂತೆ ಕೋರಿದ್ದಾರೆ.

ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾಪನೆಯ ದಿನದ ನಂತರ ಶ್ರೀ ರಾಮ ಲಲ್ಲಾ (ಬಾಲರಾಮ) ನ ದರ್ಶನ ಮತ್ತು ನವ ನಿರ್ಮಿತ ಭವ್ಯ ಜನ್ಮ ಭೂಮಿ ಮಂದಿರವನ್ನು ವೀಕ್ಷಿಸಲು ತಮಗೆ ಅನುಕೂಲವಾದ ಸಮಯದಲ್ಲಿ ಪರಿವಾರ ಸಮೇತ ಅಯೋಧ್ಯಾನಗರಿಗೆ ಆಗಮಿಸುವಂತೆ ಮನವಿ ಮಾಡಿದ್ದಾರೆ.

ಅಯೋಧ್ಯೆಯ ರಾಮಮಂದಿರದಲ್ಲಿ ಜನವರಿ 22ರಂದು ಬೆಳಿಗ್ಗೆ 11ರಿಂದ 1 ಗಂಟೆ ಮಧ್ಯದಲ್ಲಿ ಪ್ರಾಣ ಪ್ರತಿಷ್ಠಾಪನೆ ನಡೆಯಲಿದೆ. ಈ ಸಂದರ್ಭದಲ್ಲಿ ಅಯೋಧ್ಯೆಯಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಗಲಿದೆ. ಅಂದಿನ ಅಮೃತ ಘಳಿಗೆಯಲ್ಲಿ ತಾವು ಸಹ ತಮ್ಮ ಗ್ರಾಮ, ಮೊಹಲ್ಲಾ, ಕಾಲೋನಿ, ಬಸ್ತಿಗಳ ಮಂದಿರಗಳಲ್ಲಿ ಧಾರ್ಮಿಕ ಕಾರ್ಯಕ್ರಮ ಆಯೋಜಿಸುವಂತೆ ಕೇಳಲಾಗಿದೆ. ಆಯಾ ಮಂದಿರಗಳಲ್ಲಿ ಪ್ರತಿಷ್ಠಾಪನೆಯಾಗಿರುವ ವಿವಿಧ ದೇವತೆಗಳ ಭಜನೆ, ಕೀರ್ತನೆ, ಪೂಜೆ ಮತ್ತು ಆರತಿಗಳನ್ನು ಮಾಡಿ. ಅಂದು ಶ್ರೀರಾಮ ಜಯರಾಮ ಜಯಜಯ ರಾಮ ಎಂಬ ವಿಜಯ ಮಹಾಮಂತ್ರವನ್ನು ಸಾಮೂಹಿಕವಾಗಿ 108 ಬಾರಿ ಜಪ ಮಾಡಿ, ಜೊತೆಗೆ ಹನುಮಾನ್ ಚಾಲಿಸಾ, ಸುಂದರ ಕಾಂಡ ಪಾರಾಯಣ, ರಾಮರಕ್ಷಾ ಸ್ತೋತ್ರದ ಪಠಣಗಳನ್ನು ಮಾಡಿ. ಇದರಿಂದ ದೇವಾಧಿ ದೇವತೆಗಳು ಪ್ರಸನ್ನರಾಗಲಿ ಹಾಗೂ ವಾತಾವರಣ ಸಾತ್ವಿಕವಾಗಿ ರಾಮಮಯವಾಗಲಿ ಎಂದಿದ್ದಾರೆ.

ನಗರಗಳ ಬಡಾವಣೆ ಹಾಗೂ ಗ್ರಾಮಗಳಲ್ಲಿ ರಾಮ ಭಕ್ತರನ್ನು ಒಗ್ಗೂಡಿಸಿ ದೂರದರ್ಶನ, ಎಲ್‌ಇಡಿ ಅಥವಾ ಪ್ರೊಜೆಕ್ಟರ್ ಮೂಲಕ ಪರದೆಗಳಲ್ಲಿ ರಾಮಮಂದಿರ ಉದ್ಘಾಟನಾ ಕಾರ್ಯಕ್ರಮವನ್ನು ನೇರವಾಗಿ ವೀಕ್ಷಿಸಲು ವ್ಯವಸ್ಥೆ ಮಾಡಿ ಎಂದು ಮನವಿ ಮಾಡಿದ್ದಾರೆ.



ಮನೆ ಮನೆಗಳಲ್ಲಿ ದೀಪ ಬೆಳಗಿಸಿ

ಅಯೋಧ್ಯೆಯ ರಾಮಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆ ಆದ ನಂತರ ಸಂಜೆ ಸೂರ್ಯಾಸ್ತವಾದ ಮೇಲೆ ಪ್ರತಿ ಮನೆಗಳಲ್ಲೂ ದೀಪ ಬೆಳಗಿಸಿ ಎಂದು ಕೋರಿದ್ದಾರೆ. ಈ ಮೂಲಕ ಎಲ್ಲಾ ದೇವಾಧಿದೇವತೆಗಳನ್ನು ಪ್ರಸನ್ನಗೊಳಿಸಲು ದೀಪಗಳನ್ನು ಬೆಳಗಿಸಿ, ಜಗತ್ತಿನ ಕೋಟಿ ಕೋಟಿ ಮನೆಗಳ ಮುಂದೆ ದೀಪೋತ್ಸವವು ನಡೆದು ಇಡೀ ಜಗತ್ತು ದೀಪಗಳ ಮಾಲೆಯಿಂದ ಜ್ಯೋತಿರ್ಮಯವಾಗಲಿ ಎಂದು ಮನವಿ ಮಾಡಿದ್ದಾರೆ. ಆದರೆ ಆ ದಿನದಂದು ಯಾವುದೇ ಮೆರವಣಿಗೆ, ಶೋಭಾಯಾತ್ರೆ, ಸಾರ್ವಜನಿಕ ಕಾರ್ಯಕ್ರಮ ಆಯೋಜಿಸಲು ಅವಕಾಶ ಇರುವುದಿಲ್ಲ. ಅಂದು ಪಟಾಕಿ ಕೂಡ ಸಿಡಿಸಬಾರದು ಎಂದು ಸಲಹೆ ನೀಡಲಾಗಿದೆ.

ಪರಂಪರಾನುಗತ ಶೈಲಿಯಲ್ಲಿ ಮಂದಿರ ನಿರ್ಮಾಣ

ಭವ್ಯ ರಾಮಮಂದಿರದ ಬಗ್ಗೆ ಭಿತ್ತಿಪತ್ರದಲ್ಲಿ ಸಮಗ್ರ ವಿವರ ನೀಡಲಾಗಿದೆ. ರಾಮಮಂದಿರ ಯಾವ ಶೈಲಿಯಲ್ಲಿದೆ, ಎಷ್ಟು ಎತ್ತರ, ಅಗಲವಿದೆ ಎಂಬ ಮಾಹಿತಿ ನೀಡಲಾಗಿದೆ. ಪೂರ್ವ–ಪಶ್ಚಿಮವಾಗಿ ಉದ್ದ 380 ಅಡಿ, ಅಗಲ 250 ಅಡಿ ಮತ್ತು 161 ಅಡಿ ಅಳತೆಯಲ್ಲಿ ಮಂದಿರ ನಿರ್ಮಾಣ.

ಮೂರು ಮಹಡಿಗಳ ಮಂದಿರ ನಿರ್ಮಾಣ– ಪ್ರತಿ ಮಹಡಿಯ ಎತ್ತರ 20 ಅಡಿ, ಒಟ್ಟು 392 ಸ್ತಂಭಗಳು ಮತ್ತು 44 ಬಾಗಿಲುಗಳು. ನೆಲ ಮಹಡಿಯ ಗರ್ಭಗೃಹದಲ್ಲಿ ಶ್ರೀರಾಮಲಲ್ಲಾ (ಬಾಲರಾಮ)ನ ವಿಗ್ರಹ ಮತ್ತು ಮೊದಲನೇ ಮಹಡಿಯ ಗರ್ಭಗುಡಿಯಲ್ಲಿ ಶ್ರೀರಾಮ ದರ್ಬಾರ್.

ಒಟ್ಟು 5 ಮಂಟಪಗಳು– ನೃತ್ಯ ಮಂಟಪ, ರಂಗ ಮಂಟಪ, ಸಭಾ ಮಂಟಪ, ಪ್ರಾರ್ಥನಾ ಮಂಟಪ ಮತ್ತು ಕೀರ್ತನಾ ಮಂಟಪ. ಸ್ತಂಭಗಳು ಮತ್ತು ಬಾಗಿಲುಗಳ ಮೇಲೆ ದೇವಾಧಿದೇವತೆಗಳ ಮತ್ತು ದೇವಾಂಗನೆಯರ ಮೂರ್ತಿಗಳು

16.5 ಅಡಿ ಎತ್ತರವನ್ನು 32 ಮೆಟ್ಟಿಲುಗಳಲ್ಲಿ ಕ್ರಮಿಸಿ, ಸಿಂಹದ್ವಾರದ ಮೂಲಕ ಪೂರ್ವ ದಿಕ್ಕಿನಿಂದ ಮಂದಿರಕ್ಕೆ ಪ್ರವೇಶ. ದಿವ್ಯಾಂಗರು ಮತ್ತು ವೃದ್ಧರಿಗಾಗಿ ಜಾರು ಮೆಟ್ಟಿಲು ಹಾಗೂ ಲಿಫ್ಟ್ ವ್ಯವಸ್ಥೆ. ಆಯಾತಾಕಾರವಾಗಿ ಮಂದಿರದ ಸುತ್ತಲೂ ಪರಿಕ್ರಮ– ಉದ್ದ 732 ಮೀಟರ್, ಅಗಲ 4.25 ಮೀಟರ್.

ಮಂದಿರದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಂದಿರಗಳು– ಭಗವಾನ್ ಸೂರ್ಯ, ಭಗವಾನ್ ಶಂಕರ, ಭಗವಾನ್ ಗಣಪತಿ, ದೇವಿ ಭಗವತಿ, ದಕ್ಷಿಣ ದಿಕ್ಕಿನಲ್ಲಿ ಹನುಮಂತ ಮತ್ತು ಉತ್ತರ ದಿಕ್ಕಿನಲ್ಲಿ ಮಾತಾ ಅನ್ನಪೂರ್ಣೇಶ್ವರಿಯ ಮಂದಿರ. ಮಂದಿರದ ಸಮೀಪದಲ್ಲಿ ಪೌರಾಣಿಕ ಕಾಲದ ಸೀತಾ ಕೊಳ. ಶ್ರೀರಾಮ ಜನ್ಮ ಭೂಮಿ ಮಂದಿರದ ಹೆಸರಿನಲ್ಲಿ ಪ್ರಸ್ತಾವಿತ ಅನ್ಯ ಮಂದಿರಗಳು–ಮಹರ್ಷಿ ವಾಲ್ಮೀಕಿ, ಮಹರ್ಷಿ ವಿಶ್ವಾಮಿತ್ರ, ಮಹರ್ಷಿ ಅಗಸ್ತ್ಯ, ನಿಷಾದರಾಜ ಗುಹ, ಮಾತಾ ಶಬರಿ ಮತ್ತು ದೇವಿ ಅಹಲ್ಯಾ. ನೈರುತ್ಯ ಭಾಗದಲ್ಲಿ ನವರತ್ನ ಕುಬೇರ ಪೀಠದಲ್ಲಿ ಸ್ಥಿತನಾದ ಶಿವ ಮಂದಿರದ ಜೀರ್ಣೋದ್ಧಾರ ಮತ್ತು ರಾಮ ಭಕ್ತ ಜಟಾಯು ರಾಜನ ಪ್ರತಿಮೆಯ ಸ್ಥಾಪನೆ.

ಜಪಾನ್: ಹನೆಡಾ ವಿಮಾನ ನಿಲ್ದಾಣದ ರನ್‌ವೇಯಲ್ಲಿ ದುರಂತ: ಹೊತ್ತಿ ಉರಿದ 367 ಜನರಿದ್ದ ವಿಮಾನ!



ಟೋಕಿಯೊ: ಇಲ್ಲಿನ ಹನೆಡಾ ವಿಮಾನ ನಿಲ್ದಾಣದಲ್ಲಿ ಜಪಾನ್ ಏರ್ ಲೈನ್ಸ್ ವಿಮಾನವೊಂದು ಬೆಂಕಿಗೆ ಆಹುತಿಯಾಗಿದೆ. ರನ್‌ವೇಯಲ್ಲಿ ವಿಮಾನ ಚಲಿಸುತ್ತಿದ್ದಾಗ ಈ ಅವಘಡ ಸಂಭವಿಸಿದ್ದು, ವಿಮಾನದಲ್ಲಿ 350ಕ್ಕೂ ಹೆಚ್ಚು ಪ್ರಯಾಣಿಕರಿದ್ದರು.

ಮಾಧ್ಯಮ ವರದಿಗಳ ಪ್ರಕಾರ, ಮತ್ತೊಂದು ವಿಮಾನಕ್ಕೆ ಡಿಕ್ಕಿ ಹೊಡೆದ ನಂತರ ಈ ದುರಂತ ಸಂಭವಿಸಿದೆ ಎಂದು ತಿಳಿದುಬಂದಿದೆ. ವೈರಲ್ ಆಗುತ್ತಿರುವ ವೀಡಿಯೊದಲ್ಲಿ, ವಿಮಾನದ ಕಿಟಕಿಗಳಿಂದ ಜ್ವಾಲೆಗಳು ಹೊರಬರುವುದನ್ನು ಕಾಣಬಹುದು. ಕೋಸ್ಟ್ ಗಾರ್ಡ್ ವಿಮಾನಕ್ಕೆ ಡಿಕ್ಕಿಯಾದ ನಂತರ ಜಪಾನ್ ಏರ್‌ಲೈನ್ಸ್ ವಿಮಾನಕ್ಕೆ ಬೆಂಕಿ ಹೊತ್ತಿಕೊಂಡಿದೆ ಎಂದು ಹೇಳಲಾಗುತ್ತಿದೆ. ವಿಮಾನಕ್ಕೆ ಬೆಂಕಿ ಹೊತ್ತಿಕೊಂಡಾಗ ಅದರಲ್ಲಿ 350 ಮಂದಿ ಇದ್ದರು. ವಿಮಾನದಲ್ಲಿದ್ದ ಎಲ್ಲ ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಸದ್ಯ ವಿಮಾನದ ಬೆಂಕಿಯನ್ನು ನಂದಿಸುವ ಪ್ರಯತ್ನ ನಡೆಯುತ್ತಿದೆ.

ನಾನು ಬಸವಾದಿ ಶರಣರ ಅನುಯಾಯಿ; ಸಿದ್ದೇಶ್ವರ ಸ್ವಾಮೀಜಿ ಬದುಕೇ ನಮಗೆ ಆದರ್ಶ: ಮುಖ್ಯಮಂತ್ರಿ ಸಿದ್ದರಾಮಯ್ಯ



ವಿಜಯಪುರದ ಜ್ಞಾನಯೋಗಾಶ್ರಮದಲ್ಲಿ ಸಿದ್ದೇಶ್ವರ ಸ್ವಾಮೀಜಿಗಳ ಗುರುನಮನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡುತ್ತಿರುವುದು.

ವಿಜಯಪುರ: ನಾನು ಯಾವತ್ತಿಗೂ ಬಸವಾದಿ ಶರಣರ ಅನುಯಾಯಿ, ಸಿದ್ದೇಶ್ವರ ಸ್ವಾಮೀಜಿ ಅವರ ಬದುಕೇ ನಮಗೆ ಆದರ್ಶ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಹೇಳಿದ್ದಾರೆ.

ವಿಜಯಪುರದ ಜ್ಞಾನಯೋಗಾಶ್ರಮದಲ್ಲಿ ಸಿದ್ದೇಶ್ವರ ಸ್ವಾಮೀಜಿಗಳ ಗುರುನಮನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಿಎಂ, ಸಿದ್ದೇಶ್ವರ ಸ್ವಾಮೀಜಿಗಳ ಬದುಕೇ ನಮಗೆ ಆದರ್ಶ. ಅವರ ಜೀವನದ ಆಶಯದಂತೆ ಬದುಕುವುದೇ ಅವರಿಗೆ ಸಲ್ಲಿಸುವ ದೊಡ್ಡ ಗೌರವ ಎಂದರು. ನಾನು ಇವತ್ತಿಗೂ–ಯಾವತ್ತಿಗೂ ಬಸವಾದಿ ಶರಣರ ಅನುಯಾಯಿ. ಸಿದ್ದೇಶ್ವರ ಸ್ವಾಮೀಜಿ ಬಸವಣ್ಣನವರ ರೀತಿಯಲ್ಲೇ ಜಾತಿ ಮತ್ತು ವರ್ಗ ರಹಿತ ಸಮ ಸಮಾಜಕ್ಕಾಗಿ ಶ್ರಮಿಸಿದವರು ಎಂದರು.

ಸಿದ್ದೇಶ್ವರ ಸ್ವಾಮಿಗಳು ಜ್ಞಾನ ಸಂಪಾದಿಸಿದರು. ಆ ಜ್ಞಾನವನ್ನು ಜನಮಾನಸಕ್ಕೆ ಹಂಚಿದರು. ದ್ವೇಷ, ಅಹಂಕಾರದಿಂದ ಬಿಡುಗಡೆ ಹೊಂದಿದ ಅತ್ಯುನ್ನತ ಮನುಷ್ಯತ್ವದ ಸೃಷ್ಟಿಗೆ ಶ್ರಮಿಸಿದವರು. ಇವರ ಬದುಕು ಮತ್ತು ಸಾಧನೆಯನ್ನು ವರ್ಣಿಸಲು ಪದಗಳೇ ಇಲ್ಲ. ಅಷ್ಟು ಸರಳತೆ ಅವರ ಬದುಕು ಮತ್ತು ವ್ಯಕ್ತಿತ್ವದಲ್ಲಿ ಬೆರೆತಿತ್ತು. ಧರ್ಮಾತೀತವಾಗಿ ಪ್ರತಿಯೊಬ್ಬರೂ ಬಾಳಬೇಕು ಎನ್ನುವುದು ಸಿದ್ದೇಶ್ವರ ಸ್ವಾಮಿಗಳ ಆಶಯವಾಗಿತ್ತು. ಶ್ರೀಗಳು ಸಮಾಜದ ಜಾತಿ ಮೈಲಿಗೆಯನ್ನು ಸೋಕಿಸಿಕೊಳ್ಳದೆ ದೂರ ಉಳಿದಿದ್ದರು. ಸಮಾಜದಲ್ಲಿ ದೂರದರ್ಶಿತ್ವ ಇಟ್ಟುಕೊಂಡು ಮನುಷ್ಯ ಸಮಾಜವನ್ನು ತಿದ್ದುವ ಗುರಿ ಹೊಂದಿದ್ದ ಕಾರಣಕ್ಕೇ ಅವರು ದಾರ್ಶನಿಕರಾಗಿದ್ದರು.

ಕಾರ್ಯಕ್ರಮದಲ್ಲಿರುವ ಹಲವು ಸಂತರು ಹೇಳಿದ ರೀತಿಯಲ್ಲಿ ಸಿದ್ದೇಶ್ವರ ಶ್ರೀಗಳ ಬದುಕಿನ ಸಂದೇಶ ಮತ್ತು ಆದರ್ಶಗಳನ್ನು ಕಾಪಾಡುವ ಸ್ಮರಣಾರ್ಥ ಕಾರ್ಯ ಮಾಡಲು ಸರ್ಕಾರ ಸಿದ್ಧವಿದೆ. ಸಿದ್ದೇಶ್ವರ ಸ್ವಾಮಿಗಳಿಗೆ ಗುರುನಮನ ಸಲ್ಲಿಸುವುದಕ್ಕಾಗಿಯೇ ನಾನು ಇಲ್ಲಿಗೆ ಬಂದಿದ್ದೇನೆ. ಸಿದ್ದೇಶ್ವರ ಸ್ವಾಮಿಗಳ ಬಗ್ಗೆ ನನಗೆ ವಿಶೇಷ ಗೌರವ ಮತ್ತು ಪ್ರೀತಿ ಇದೆ ಎಂದು ಸಿಎಂ ಹೇಳಿದರು.

ಭೂಕಂಪಕ್ಕೆ ಜಪಾನ್‌ನಲ್ಲಿ ಕನಿಷ್ಠ 30 ಸಾವು; ಒಂದೇ ದಿನ 155 ಬಾರಿ ಕಂಪಿಸಿದ ಭೂಮಿ

ಟೋಕಿಯೋ, ಜ.2–ಹೊಸ ವರ್ಷದ ಮೊದಲ ದಿನವೇ ಜಪಾನ್‌ಗೆ ಪ್ರಕೃತಿ ಆಘಾತ ನೀಡಿದ್ದು, ಈಶಾನ್ಯ ಜಪಾನ್‌ನಲ್ಲಿ ಪ್ರಬಲ ಭೂ ಕಂಪನ ಸಂಭವಿಸಿದ ಪರಿಣಾಮ ಕನಿಷ್ಟ 30 ಮಂದಿ ಸಾವನ್ನಪ್ಪಿದ್ದಾರೆ. ವರ್ಷದ ಮೊದಲ ದಿನವಾದ ನಿನ್ನೆ ಜಪಾನ್‌ನಲ್ಲಿ ಪ್ರಬಲ ಭೂಕಂಪನ ಸಂಭವಿಸಿತ್ತು. ರಿಕ್ಟರ್ ಮಾಪಕದಲ್ಲಿ 7.4ರಿಂದ 7.6ರವರೆಗೂ ಭೂಕಂಪನ ಸಂಭವಿಸಿದ್ದು, ಜಪಾನ್‌ನ ಈಶಾನ್ಯ ಭಾಗದ ನಾನಾ ವೋನಲ್ಲಿ ಭೂ ಕಂಪನದ ವರದಿಯಾಗಿದೆ. ಈ ಕಂಪನದಲ್ಲಿ ಕನಿಷ್ಠ 30 ಮಂದಿ ಸಾವನ್ನಪ್ಪಿದ್ದು, 32 ಸಾವಿರಕ್ಕೂ ಅಧಿಕ ಮಂದಿ ಕಂಪನದಿಂದ ಸಂತ್ರಸ್ತರಾಗಿದ್ದಾರೆ.

ಭೂಕಂಪನದಿಂದಾಗಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು, ವರ್ಷದ ಮೊದಲ ದಿನವೇ ಸೆಂಟ್ರಲ್ ಜಪಾನ್‌ನ ನಾಗರಿಕರು ಇಡೀ ರಾತ್ರಿ ಕತ್ತಲೆಯಲ್ಲಿ ಮುಳುಗುವಂತಾಗಿದೆ. ಜಪಾನ್ ಮಿಲಿಟರಿ ಬೇಸ್‌ನಲ್ಲಿ ಕನಿಷ್ಠ ಸಾವಿರಕ್ಕೂ ಅಧಿಕ ಮಂದಿ ಆಶ್ರಯ ಪಡೆದಿದ್ದಾರೆ ಎಂದು ಸೇನಾ ಮೂಲಗಳು ತಿಳಿಸಿವೆ.

155 ಬಾರಿ ಕಂಪನ: ಜಪಾನ್‌ನ ಇಶಿಕಾವಾ, ನಿಗಾಟಾ ಮತ್ತು ಟೊಯಾಮಾ ಪ್ರಾಂತ್ಯಗಳ ಕರಾವಳಿ ಪ್ರದೇಶಗಳಲ್ಲಿ ಕಂಪನ ಸಂಭವಿಸಿದ್ದು, 155 ಬಾರಿ ಭೂಮಿ ಕಂಪಿಸಿದೆ. ಮೊದಲ 6 ಕಂಪನಗಳು ಪ್ರಬಲವಾಗಿದ್ದು, ರಿಕ್ಟರ್ ಮಾಪಕದಲ್ಲಿ 6.2ರಿಂದ 6.7ರವರೆಗೂ ದಾಖಲಾಗಿವೆ. ಬಳಿಕ ಕನಿಷ್ಠ 3ರಂತೆ 140ಕ್ಕೂ ಅಧಿಕ ಕಂಪನಗಳು ಸಂಭವಿಸಿವೆ ಎಂದು ಭೂಕಂಪನ ಮಾಪನ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕರಾವಳಿಗೆ ಅಪ್ಪಳಿಸಿದ ಸುನಾಮಿ ಅಲೆಗಳು: ಜಪಾನ್ ಹವಾಮಾನ ಸಂಸ್ಥೆ ಸುನಾಮಿ ಎಚ್ಚರಿಕೆ ನೀಡಿದ್ದು, ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಿದೆ. ಅಲ್ಲದೆ ಮುಂಜಾಗ್ರತಾ ಕ್ರಮವಾಗಿ ಎತ್ತರದ ಪ್ರದೇಶಗಳಿಗೆ ತೆರಳುವಂತೆ ಅಧಿಕಾರಿಗಳು ಸೂಚನೆ ನೀಡಿದ್ದಾರೆ. 5 ಮೀಟರ್ ಎತ್ತರದವರೆಗೆ ಅಲೆಗಳು ಬರುವ ಸಾಧ್ಯತೆಯಿದ್ದು, ಕರಾವಳಿ ಪ್ರದೇಶದ ಜನರನ್ನು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚಿಸಲಾಗಿತ್ತು.

ಹಾಸನದಲ್ಲಿ ಇಬ್ಬರು ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ

ಹಾಸನ: ಒಂದೇ ಮನೆಯಲ್ಲಿ ತಾಯಿ, ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿರುವ ಹೃದಯವಿದ್ರಾವಕ ಘಟನೆ ನಗರದ ಹೊರ ವಲಯದಲ್ಲಿ ನಡೆದಿದೆ. ಮೃತರನ್ನು ತಾಯಿ ಶಿವಮ್ಮ(36) ಮತ್ತು ಅವರ 7 ವರ್ಷದ ಪುತ್ರಿ ಹಾಗೂ 9 ವರ್ಷದ ಮಗ ಎಂದು ಗುರುತಿಸಲಾಗಿದೆ. ಗಂಡ ಮನೆಯಲ್ಲಿ ಇಲ್ಲದ ವೇಳೆ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಕಾರಣ ನಿಗೂಢ: ಮೃತ ಶಿವಮ್ಮನಿಗೆ ಕಳೆದ 12 ವರ್ಷಗಳ ಹಿಂದೆ ಮದುವೆಯಾಗಿತ್ತು. ದಾಂಪತ್ಯದಲ್ಲಿಯೂ ಯಾವುದೇ ಕಿರಿಕಿರಿ ಇರಲಿಲ್ಲ ಗಂಡ ಹೆಂಡತಿ ಅನ್ಯೋನ್ಯವಾಗಿದ್ದರು. ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ. ಮೃತ ಶಿವಮ್ಮನ ಪತಿ ತುಮಕೂರಿನ ಬೇಕರಿವೊಂದರಲ್ಲಿ ಕೆಲಸ ಮಾಡಿಕೊಡಿದ್ದರು. ತುಮಕೂರಿನಲ್ಲಿ ಬೇಕರಿ ಕೆಲಸಕ್ಕೆಂದು ತಿಂಗಳ ಹಿಂದೆ ಹೋಗಿದ್ದೆ. ಸೋಮವಾರ ಸಂಜೆ ವಿಡಿಯೋ ಕಾಲ್ ಮಾಡಿ ಹೆಂಡತಿ ಮಕ್ಕಳೊಂದಿಗೆ ಮಾತನಾಡಿದ್ದೇನೆ. ಇವತ್ತು ಕೋರ್ಟ್‌ನಲ್ಲಿ ಕೆಲಸವಿದ್ದ ಕಾರಣ ತುಮಕೂರಿನಿಂದ ಹಾಸನಕ್ಕೆ ಬರುತ್ತೇನೆ; ಆಚೆ ಕಡೆ ಹೋಗೋಣ ಎಂದು ಹೇಳಿದ್ದೆ. ಹಾಸನಕ್ಕೆ ಬಂದ ಮೇಲೆ 3–4 ಬಾರಿ ಫೋನ್ ಮಾಡಿದಾಗ ಸ್ವಿಚ್ ಆಫ್ ಆಗಿತ್ತು ಮನೆ ಬಳಿಕ ಬಂದು ನೋಡಿದಾಗಲೂ ಯಾರೂ ಇರಲಿಲ್ಲ. ಎಲ್ಲಾ ಕಡೆ ಹುಡುಕಾಡಿದೆ, ಆದರೂ ಪತ್ತೆ ಆಗಲಿಲ್ಲ. ಮತ್ತೆ ಮನೆ ಹತ್ತಿರ ಬಂದಾಗ ಗ್ಯಾಸ್ ವಾಸನೆ ಬಂತು. ಆದರೇ, ಬಾಗಿಲು ಮತ್ತು ಎಲ್ಲಾ ಕಿಟಕಿಗಳನ್ನು ಮುಚ್ಚಲಾಗಿತ್ತು. ಮನೆ ಬಾಗಿಲಿಗೆ ಬೀಗ ಹಾಕಿದ್ದರಿಂದ ಹೊರಗಡೆ ಹೋಗಿರಬಹುದು ಎಂದು ಮನೆ ಬಳಿ ಸ್ವಲ್ಪ ಹೊತ್ತು ಕಾದು ಕುಳಿತಿದ್ದೆ. ನಂತರ ಬಾಗಿಲು ತೆರೆದು ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ.


ಸ್ಥಳಕ್ಕೆ ಪೊಲೀಸರು ಆಗಮಿಸಿ ಪರಿಶೀಲಿಸಿ, ಮೃತದೇಹಗಳನ್ನು ಹಾಸನದ ಜಯಚಾಮರಾಜೇಂದ್ರ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದೆ.



ಡಾ.ರಾಜ್ ಶಿವಸೈನ್ಯ ಅಭಿಮಾನಿಗಳ ಸಂಘದ 2024ರ ನೂತನ ವರ್ಷದ ಕ್ಯಾಲೆಂಡರ್ ಅನ್ನು ಯೋಗ ನರಸಿಂಹಸ್ವಾಮಿ ದೇವಸ್ಥಾನದ ಡಾ. ಭಾಷ್ಯಂ ಸ್ವಾಮೀಜಿ ಬಿಡುಗಡೆಗೊಳಿಸಿದರು. ಈ ವೇಳೆ ಚಲನಚಿತ್ರ ನಟ ಸೋಮಣ್ಣ, ಬಿ.ಎಸ್.ರವಿ, ಮಹೇಶ, ದೊರೆ, ಧರ್ಮ, ರವಿ, ಮಂಜು ಹಾಗೂ ಡಾ.ರಾಜ್‌ಕುಮಾರ್ ಅಭಿಮಾನಿಗಳು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಶ್ರೀ ಶಾರದಾ ವಿಪ್ರ ಸಂಘದ 2024ನೇ ಸಾಲಿನ ದಿನದರ್ಶಿಕೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಲೋಕಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಕನ್ನಡ ರಾಜ್ಯೋತ್ಸವ ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಣ ತಜ್ಞ ಚಕ್ರವರ್ತಿ ಶ್ರೀಧರ್, ಸಂಘದ ಅಧ್ಯಕ್ಷ ಡಿ.ಜಿ.ಸುರೇಶ್, ಕಾರ್ಯದರ್ಶಿ ಕೆ.ಎಸ್.ಪ್ರಸನ್ನ, ಜಂಟಿ ಕಾರ್ಯದರ್ಶಿ ಹೆಚ್.ಎಲ್.ಸುಬ್ರಹ್ಮಣ್ಯ, ಎಲ್.ವಿ.ದಿನೇಶ್, ಖಜಾಂಚಿ ಪಿ.ಶಿವಾನಂದ್, ಸಮಿತಿ ಸದಸ್ಯರಾದ ವಿಜಯಾನಂದ, ರಮೇಶ್‌ಭಟ್, ದಿಲೀಪ್, ಶಿವಶಂಕರ್, ಶ್ರೀಲಕ್ಷ್ಮೀ, ಪೂರ್ಣಿಮಾ ಭಟ್ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಅಬಕಾರಿ ಕಾನ್ಸ್‌ಟೇಬಲ್ಸ್ ಅಸೋಸಿಯೇಷನ್‌ನ 2024ರ ನೂತನ ವರ್ಷದ ಕ್ಯಾಲೆಂಡರ್ ಅನ್ನು ಅಬಕಾರಿ ಜಂಟಿ ಆಯುಕ್ತ ಡಾ.ವಿಜಯ್‌ಕುಮಾರ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಅಬಕಾರಿ ನಗರ ಉಪ ಆಯುಕ್ತ ಪಿ.ಮಹೇಶ್‌ಕುಮಾರ್, ಗ್ರಾಮೀಣ ಅಬಕಾರಿ ಉಪ ಆಯುಕ್ತ ಎ.ರವಿಶಂಕರ್, ಸಂಘದ ಅಧ್ಯಕ್ಷ ಪಿ.ರಾಘವೇಂದ್ರ, ಉಪಾಧ್ಯಕ್ಷ ಎನ್.ಅಜಯ್ ಕಾರ್ಯದರ್ಶಿ ಕೆ.ವಿ.ಮಹೇಶ್, ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಶಾರದಾದೇವಿನಗರ ವೃತ್ತ ಅಭಿವೃದ್ಧಿಗೆ ಪಾಲಿಕೆ ಸಿದ್ಧತೆ





ಮೈಸೂರು,ಜ.2(ಎಸ್‌ಪಿಎನ್)–ನಗರದ ನ್ಯೂ ಕಾಂತ ರಾಜ ಅರಸು ರಸ್ತೆಯ ಶಾರದಾದೇವಿನಗರದ ವೃತ್ತದ ಅಭಿವೃದ್ಧಿಗೆ ಮೈಸೂರು ನಗರಪಾಲಿಕೆ ಮುಂದಾಗಿದ್ದು, ಈ ಸಂಬಂಧ ಮಂಗಳವಾರ ಸಂಜೆ ವಲಯ ಕಚೇರಿ 3ರ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು.

ಹಲವು ವರ್ಷಗಳ ಹಿಂದೆಯೇ ಈ ವೃತ್ತದ ಅಭಿವೃದ್ಧಿಗೆ ಪಾಲಿಕೆ ಮುಂದಾಗಿದ್ದು, ಆದರೆ, ವೃತ್ತದಲ್ಲಿದ್ದ ಕೆಲ ಬೀದಿಬದಿ ವ್ಯಾಪಾರಿಗಳು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಗಿತಗೊಂಡಿತ್ತು. ಈ ಕುರಿತು ನ್ಯಾಯಾಲಯ ಸುದೀರ್ಘ ವಿಚಾರಣೆ ನಡೆಸಿ ಬೀದಿಬದಿ ವ್ಯಾಪಾರಿಗಳು ಹೂಡಿದ್ದ ದಾವೆಯನ್ನು ನ್ಯಾಯಾಲಯ ವಜಾಗೊಳಿಸಿದೆ. ಇದೀಗ ವೃತ್ತದ ಅಭಿವೃದ್ಧಿಗೆ ಯಾವುದೇ ಕಾನೂನಿನ ತೊಡಕಿಲ್ಲ ಎಂದು ಸ್ಥಳ ಪರಿಶೀಲನೆಗೆ ಬಂದಿದ್ದ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಈ ಭಾಗದ ಶಾಸಕರಾದ ಜಿ.ಟಿ.ದೇವೇಗೌಡರು, ಈ ತಿಂಗಳ ಅಂತ್ಯದೊಳಗೆ ವೃತ್ತದ ಅಭಿವೃದ್ಧಿಗೆ ಶಿಲಾನ್ಯಾಸ ನೆರವೇರಿಸಲು ಅನುಮತಿ ಕೇಳಲಾಗಿದೆ. ಶಾಸಕರು ಶಿಲಾನ್ಯಾಸ ನೆರವೇರಿಸಲು ದಿನಾಂಕ ನಿಗಧಿಪಡಿಸುವುದರೊಳಗೆ ಕಾರ್ಯಾದೇಶ ನೀಡಲು ಪೂರ್ವ ತಯಾರಿ ನಡೆಸುವಂತೆ ಹಿರಿಯ ಅಧಿಕಾರಿಗಳು ಸೂಚಿಸಿದ್ದಾರೆ. ಹಾಗಾಗಿ ಸುಮಾರು 2 ಕೋಟಿ ರೂ., ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಪಾಲಿಕೆ ಮುಂದಾಗಿದೆ ಎಂದು ತಿಳಿಸಿದರು.



ನೋಟಿಸ್ ಜಾರಿ: ವೃತ್ತದಲ್ಲಿರುವ ಎಲ್ಲಾ ಬೀದಿಬದಿ ವ್ಯಾಪಾರಿಗಳು, ತರಕಾರಿ ವ್ಯಾಪಾರಿಗಳು, ಪೆಟ್ಟಿ ಅಂಗಡಿ ಮಾಲೀಕರಿಗೂ ನೋಟಿಸ್ ನೀಡಿ, ವೃತ್ತದಲ್ಲಿರುವ ಎಲ್ಲಾ ಅಂಗಡಿಗಳನ್ನು ಖಾಲಿ ಮಾಡುವಂತೆ ಸೂಚಿಸಲಾಗುವುದು. ಶಾರದಾದೇವಿನಗರದ ವೃತ್ತ ಎಂದು ಸರ್ಕಾರದಿಂದ ಘೋಷಣೆ ಮಾಡಿಲ್ಲ. ಆದರೆ, ಈ ಭಾಗದ ಜನರು ರೂಢಿಗತವಾಗಿ ಇಂದಿಗೂ ಈ ಸ್ಥಳವನ್ನು ಶಾರದಾದೇವಿ ನಗರ ವೃತ್ತ ಎಂದೇ ಕರೆಯುವುದುಂಟು, ಈ ಹೆಸರಿಗೆ ಚ್ಯುತಿಬಾರದ ರೀತಿಯಲ್ಲಿ ಅಭಿವೃದ್ಧಿಪಡಿಸಲು ಮುಂದಾಗಿರುವುದಾಗಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಟ್ರಾಫಿಕ್ ಸಮಸ್ಯೆ: ಈ ವೃತ್ತದ ಎರಡು ಕಡೆಯ ಬೀದಿಬದಿ ವ್ಯಾಪಾರಿಗಳು ಫುಟ್‌ಪಾತ್ ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದರಿಂದ ಈ ಮಾರ್ಗದಲ್ಲಿ ಸಂಚರಿಸುವ ಬಸ್‌ಗಳು, ಈ ವೃತ್ತದಲ್ಲಿ ನಿಲುಗಡೆಗೊಳಿಸಿದಾಗ ಮತ್ತೊಂದು ಬಸ್ ಮುಂದೆ ಸಾಗಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಈ ವೃತ್ತವನ್ನು ಅಗಲೀಕರಣಗೊಳಿಸುವಂತೆ ಈ ಭಾಗದ ಸಾರ್ವಜನಿಕರು ಹಲವಾರು ವರ್ಷಗಳಿಂದ ಪಾಲಿಕೆಗೆ ಮನವಿ ಸಲ್ಲಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಈ ವೃತ್ತವನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಮೈಸೂರು ಮಿತ್ರ ಬುಧವಾರ 3 ಜನವರಿ 2024

ಬೆಳೆಗಳಿಗೆ ಸಾಲದ ಪ್ರಮಾಣ ನಿಗದಿ

ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾಹಿತಿ



ಮಂಡ್ಯ, ಜ.2– ಜಿಲ್ಲೆಯಲ್ಲಿ ರೈತರು ಆರ್ಥಿಕವಾಗಿ ಸದೃಢರಾಗಲು ದುಡಿಯುವ ಬಂಡವಾಳದ ಅವಶ್ಯಕತೆ ಇದ್ದು, 2024–25ನೇ ಸಾಲಿನಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ರಾಷ್ಟ್ರೀಯ ಬ್ಯಾಂಕ್‌ನಿಂದ ನೀಡುವ ಬೆಳೆ ಸಾಲ ಮತ್ತು ಕೃಷಿ ಪೂರಕ ಚಟುವಟಿಕೆಗಳಾದ ಪಶುಸಂಗೋಪನೆ ಹಾಗೂ ಮೀನುಗಾರಿಕೆ ಉದ್ಯಮಕ್ಕೆ ಘಟಕವಾರು ಸಾಲದ ಪ್ರಮಾಣ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸಾಲ ನಿಗದಿ ಸಂಬಂಧ ನಡೆದ ಅಧಿಕಾರಿಗಳ ಸಭೆಯಲ್ಲಿ ವಿವಿಧ ಅಧಿಕಾರಿಗಳ ಮಾಹಿತಿ ಪಡೆದು ಮಾತನಾಡಿದ ಅವರು, ಜಿಲ್ಲೆಯಲ್ಲಿ ಭತ್ತ, ರಾಗಿ ಮತ್ತು ಕಬ್ಬು ಬೆಳೆಯುವ ರೈತರ ಸಂಖ್ಯೆ ಹೆಚ್ಚಿದ್ದು, ಇವುಗಳಿಗೆ ನೀಡುವ ಸಾಲದ ಪ್ರಮಾಣ ಹೆಚ್ಚಿಸಬೇಕು. ಇದರಿಂದ ಜಿಲ್ಲೆಯ ರೈತರಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಹೇಳಿದರು.

2023–24ನೇ ಸಾಲಿನಲ್ಲಿ ಪ್ರತಿ ಎಕರೆಗೆ 1ನೇ ಬೆಳೆ ಕಬ್ಬಿಗೆ 85 ಸಾವಿರ ರೂ., ಕೂಳೆ ಕಬ್ಬಿಗೆ 75 ಸಾವಿರ ರೂ. ನಿಗದಿಪಡಿಸಲಾಗಿತ್ತು. 2024–25ನೇ ಸಾಲಿನಲ್ಲಿ ಸಾಲದ ಪ್ರಮಾಣ ಹೆಚ್ಚಳ ಮಾಡಲಾಗಿದ್ದು, ಪ್ರತಿ ಎಕರೆಗೆ 1ನೇ ಬೆಳೆ ಕಬ್ಬಿಗೆ 95 ಸಾವಿರ ರೂ., ಕೂಳೆ ಕಬ್ಬಿಗೆ 80 ಸಾವಿರ ರೂ. ಅನ್ನು ಸಭೆಯಲ್ಲಿ ನಿಗದಿಪಡಿಸಲಾಗಿದೆ. 2023–24ನೇ ಸಾಲಿನಲ್ಲಿ ಪ್ರತಿ ಎಕರೆಗೆ ಮಳೆ ಆಶ್ರಿತ ಭತ್ತಕ್ಕೆ 40 ಸಾವಿರ ರೂ., ನೀರಾವರಿ ಭತ್ತಕ್ಕೆ 52 ಸಾವಿರ ರೂ., ನಿಗದಿಪಡಿಸಲಾಗಿತ್ತು. 2024–25ನೇ ಸಾಲಿನಲ್ಲಿ ಪ್ರತಿ ಎಕರೆಗೆ ಮಳೆ ಆಶ್ರಿತ ಭತ್ತಕ್ಕೆ 45 ಸಾವಿರ ರೂ., ನೀರಾವರಿ ಭತ್ತಕ್ಕೆ 55 ಸಾವಿರ ರೂ. ನಿಗದಿಪಡಿಸಲಾಗಿದೆ ಎಂದು ಮಾಹಿತಿ ನೀಡಿದರು,

ಕಳೆದ ಬಾರಿ ಪ್ರತಿ ಎಕರೆಗೆ ಮಳೆ ಆಶ್ರಿತ ರಾಗಿಗೆ 32 ಸಾವಿರ ರೂ., ನೀರಾವರಿ ರಾಗಿಗೆ 37 ಸಾವಿರ ರೂ., ನಿಗದಿಪಡಿಸಲಾಗಿತ್ತು. ಈ ಬಾರಿ ಸಾಲದ ಪ್ರಮಾಣ ಹೆಚ್ಚಳ ಮಾಡಲಾಗಿರುವುದರಿಂದ ಪ್ರತಿ ಎಕರೆಗೆ ಮಳೆ ಆಶ್ರಿತ ರಾಗಿಗೆ 35 ಸಾವಿರ ರೂ. ಹಾಗೂ ನೀರಾವರಿ ರಾಗಿಗೆ 40 ಸಾವಿರ ರೂ. ಅನ್ನು ನಿಗದಿಪಡಿಸಲಾದೆ. ಇನ್ನುಳಿದ ಬೆಳೆಗಳಿಗೆ ಕಳೆದ ಸಾಲಿಗಿಂತ ಈ ಬಾರಿ ಶೇ.5ರಷ್ಟು ಸಾಲದ ಪ್ರಮಾಣ ಹೆಚ್ಚುವರಿ ಮಾಡಬೇಕು. ನಿಗದಿಪಡಿಸಿರುವ ಸಾಲದ ಪ್ರಾಮಾಣ ಗರಿಷ್ಠ ಮೊತ್ತವಾಗಿದೆ. ರೈತರು ಸಾಲದ ಬಂಡವಾಳವನ್ನು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು. ನೀಡುವ ಸಾಲವನ್ನು ಉಪಯೋಗಿಸಿಕೊಂಡು ಮರುಪಾವತಿ ಮಾಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಡಿಸಿಸಿ ಬ್ಯಾಂಕಿನ ಕಾರ್ಯನಿರ್ವಾಹಕಾಧಿಕಾರಿ ವನಜಾಕ್ಷಿ, ಜನರಲ್ ಮ್ಯಾನೇಜರ್ ರೂಪಶ್ರೀ, ನಬಾರ್ಡ್ ಜಿಲ್ಲಾ ವ್ಯವಸ್ಥಾಪಕಿ ಹರ್ಷಿತಾ, ಲೀಡ್ ಬ್ಯಾಂಕ್ ಮ್ಯಾನೇಜರ್ ಅರುಣ್ ಕುಮಾರ್, ಕೃಷಿ ಇಲಾಖೆಯ ಜಂಟಿನಿರ್ದೇಶಕ ಅಶೋಕ್, ಜಿಲ್ಲಾ ಪಶು ವೈದ್ಯಾಧಿಕಾರಿ ಡಾ.ಸುರೇಶ್ ಹಾಗೂ ಮತ್ತಿತರ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಹಿಂದೂಗಳ ಮೇಲೆ ರಾಜ್ಯ ಸರ್ಕಾರದಿಂದ ದ್ವೇಷ ರಾಜಕಾರಣ

ಬಿಜೆಪಿ ಶಾಸಕ ಮಹೇಶ್ ಟೆಂಗಿನಕಾಯಿ ಆರೋಪ



ಮಂಡ್ಯ, ಜ.2–ರಾಜ್ಯ ಕಾಂಗ್ರೆಸ್ ಸರ್ಕಾರ ಹಳೇ ಕೇಸುಗಳನ್ನು ರೀ ಓಪನ್ ಮಾಡಿ, 31 ವರ್ಷದ ಹಿಂದಿನ ಘಟನೆ ಸಂಬಂಧ ಹಿಂದೂ ಕಾರ್ಯಕರ್ತರ ಬಂಧಿಸಿ, ಹಿಂದೂಗಳ ಮೇಲೆ ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಬಿಜೆಪಿ ಶಾಸಕ ಮಹೇಶ್ ಟೆಂಗಿನಕಾಯಿ ಆರೋಪಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕಾಗಿ 1992ರ ಡಿ.5ರಂದು ಹುಬ್ಬಳ್ಳಿಯಲ್ಲಿ ನಡೆದಿದ್ದ ಹೋರಾಟದಲ್ಲಿ ಪಾಲ್ಗೊಂಡಿದ್ದ ಇಬ್ಬರನ್ನು 31 ವರ್ಷಗಳ ಬಳಿಕ ಬಂಧಿಸಲಾಗಿದೆ. ಅದರಲ್ಲೂ ರಾಮಮಂದಿರ ಉದ್ಘಾಟನಾ ಸಮಯದಲ್ಲಿ ಬಂಧಿಸಿದ್ದು ಏಕೆ? 31 ವರ್ಷಗಳಿಂದ ಬಂಧನವಾಗದ ಶ್ರೀಕಾಂತ್ ಪೂಜಾರಿ ಅವರನ್ನು ಎರಡು ದಿನಗಳ ಹಿಂದೆ ಬಂಧಿಸಲಾಗಿದೆ. ಆತ ಎಲ್ಲಿಯೂ ಓಡಿ ಹೋಗಿರಲಿಲ್ಲ. ಆಟೋ ಓಡಿಸುತ್ತಾ, ಜೀವನ ಮಾಡ್ತಿದ್ದರು. ಈಗ ಯಾಕೆ ಬಂಧಿಸಲಾಗಿದೆ? ಈ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕಾಗಿದೆ ಎಂದು ಆಗ್ರಹಿಸಿದರು.

ಮತ್ತೊಂದೆಡೆ ರಾಜ್ಯ ಸರ್ಕಾರ 3–4 ವರ್ಷ ಹಿಂದೆ ಹುಬ್ಬಳ್ಳಿ ಗಲಭೆ ಮಾಡಿದವರ ಪರ ನಿಲ್ಲುತ್ತದೆ. ಅಲ್ಪಸಂಖ್ಯಾತರು ಸಾವಿರಾರು ಸಂಖ್ಯೆಯಲ್ಲಿ ಸೇರಿ ಗಲಭೆ ನಡೆಸಿದ್ದರು. ಪೊಲೀಸ್ ಠಾಣೆ ಕಬ್ಜ ಮಾಡಿದ್ದರು. ಕಮಿಷನರ್ ಕಾರು ಪುಡಿ ಮಾಡಿ, ಜಖಂಗೊಳಿಸಿದ್ದರು. ಪೊಲೀಸರಿಗೆ, ಮಂದಿರಗಳಿಗೆ ಕಲ್ಲು ಹೊಡೆದರು. ಅವತ್ತು ಬಿಜೆಪಿ ಸರ್ಕಾರ 750 ಜನರನ್ನ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಿತ್ತು. ಆದರೆ ಕಾಂಗ್ರೆಸ್ ಬಂದ 6 ತಿಂಗಳಲ್ಲಿ ಡಿಸಿಎಂ ಪತ್ರ ಬರೆದಿದ್ದಾರೆ. ಹುಬ್ಬಳ್ಳಿ ಗಲಭೆ ಪ್ರಕರಣದಲ್ಲಿದ್ದವರು ಅಮಾಯಕರು. ಅವರನ್ನ ಬಿಡುಗಡೆ ಮಾಡುವಂತೆ ಪತ್ರ ಬರೆದಿದ್ದರು. ಒಂದೆಡೆ ಬಂಧನ ಮಾಡುವ ಕೆಲಸ ಮಾಡಿದರೆ, ಮತ್ತೊಂದೆಡೆ ಈ ಸರ್ಕಾರ ಜೈಲಲ್ಲಿರುವ ಗಲಭೆಕೋರರನ್ನ ಬಿಡಿಸುವ ಪ್ರಯತ್ನ ಮಾಡುತ್ತಿದೆ ಎಂದು ಕಿಡಿಕಾರಿದರು.

ಹಿಂದೂಗಳ ಮೇಲೆ ದ್ವೇಷಕಾರುವ ಕೆಲಸವನ್ನ ರಾಜ್ಯ ಸರ್ಕಾರ ವ್ಯವಸ್ಥಿತವಾಗಿ ಮಾಡುತ್ತಿದೆ. ಅಯೋಧ್ಯೆ ರಾಮಮಂದಿರ ಉದ್ಘಾಟನೆ ಇಡೀ ಜಗತ್ತಿಗೆ ಸಂತಸದ ವಿಷಯ. ಜ.22ಕ್ಕೆ ಅಭೂತಪೂರ್ವ ಕಾರ್ಯಕ್ರಮ ನಡೆಯುತ್ತಿದ್ದು, ಇದು ದೇಶದ 140 ಕೋಟಿ ಜನರಿಗೆ ಹೆಮ್ಮೆಯಾಗಿದೆ. ಈ ವೇಳೆ ದ್ವೇಷ ರಾಜಕಾರಣ ಮಾಡಿ, ಪೊಲೀಸರನ್ನ ದುರುಪಯೋಗಪಡಿಸಿಕೊಳ್ಳುತ್ತಿರುವುದು ಎಷ್ಟು ಸರಿ? ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಉಪಸ್ಥಿತರಿದ್ದರು.

ಬಾಲಕ ಬಾವಿಗೆ ಬಿದ್ದು ಸಾವು



ಮೇಲುಕೋಟೆ, ಜ.2– ಬಾಲಕನೋರ್ವ ಬಾವಿಗೆ ಕಾಲು ಜಾರಿ ಬಿದ್ದು ಮೃತಪಟ್ಟಿರುವ ಘಟನೆ ಸೋಮವಾರ ಮೇಲುಕೋಟೆ ಹೋಬಳಿಯ ಕನಗೋನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಗಂಗಾಧರ್ ಅವರ ಮಗ ಶಶಾಂಕ (17) ಮೃತಪಟ್ಟ ಬಾಲಕ. ಈತ ಮೇಲುಕೋಟೆಯ ಲಕ್ಷ್ಮೀ ಹಯಗ್ರೀವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿದ್ದು, ಹೊಸವರ್ಷ ಆಚರಣೆ ಹಿನ್ನೆಲೆಯಲ್ಲಿ ಕಾಲೇಜಿಗೆ ಗೈರಾಗಿದ್ದ ಶಶಾಂಕ ಸೋಮವಾರ ಸಂಜೆಯಾದರೂ ಮನೆಗೆ ಬಾರದ ಕಾರಣ ಈತನ ಚಿಕ್ಕಪ್ಪ ಎಲ್ಲೆಡೆ ಹುಡುಕಾಟ ನಡೆಸಿ, ನಂತರ ಮೇಲುಕೋಟೆ ಪೊಲೀಸ್ ಠಾಣೆಗೆ ನಾಪತ್ತೆ ದೂರು ನೀಡಿದ್ದರು.

ಮಂಗಳವಾರ ಬೆಳಗ್ಗೆ ತಂದೆ ಗಂಗಾಧರ್ ಜಮೀನಿನ ಬಳಿ ಶಶಾಂಕನ ಬ್ಯಾಗ್ ಇದ್ದ ಕಾರಣ ಅನುಮಾನಗೊಂಡು ಬಾವಿಯನ್ನು ಪರಿಶೀಲಿಸಿದಾಗ ಶಶಾಂಕ ಬಾವಿಗೆ ಬಿದ್ದು ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಈತ ಬಹಿರ್ದೆಸೆಗೆ ತೆರಳಿದ್ದಾಗ ಬಾವಿಗೆ ಬಿದ್ದು ಮೃತಪಟ್ಟಿರಬಹುದು ಎನ್ನಲಾಗಿದೆ.

ಈ ಸಂಬಂಧ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಳಿ ತೂಕದಲ್ಲಿ ಮೋಸ: ಸಿಬ್ಬಂದಿ ಮರಕ್ಕೆ ಕಟ್ಟಿ ಆಕ್ರೋಶ



ಪಾಂಡವಪುರ, ಜ.2–ಫಾರಂನಲ್ಲಿ ಕೋಳಿ ತುಂಬುವಾಗ ರೈತನಿಗೆ ತೂಕದಲ್ಲಿ ಮೋಸ ಮಾಡಲು ಯತ್ನಿಸಿದಾಗ ಚಿಕನ್ ಮಾರಾಟ ಖಾಸಗಿ ಕಂಪನಿಯ ಸಿಬ್ಬಂದಿಯನ್ನು ಮರಕ್ಕೆ ಕಟ್ಟಿ ಹಾಕಿ ಆಕ್ರೋಶ ವ್ಯಕ್ತಪಡಿಸಿದ ಘಟನೆ ತಾಲೂಕಿನ ಚಿಕ್ಕಬ್ಯಾಡರಹಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ಗ್ರಾಮದ ರೈತ ಹನುಮಂತೇಗೌಡಗೆ ಸೇರಿದ ಕೋಳಿ ಫಾರಂನಲ್ಲಿ ಈ ವಂಚನೆ ನಡೆದಿದ್ದು, ರೈತ ತಮ್ಮ ಫಾರಂನಲ್ಲಿ ಕೋಳಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತಿದ್ದರು. ಕೋಳಿ ಖರೀದಿಸಲು ಬರುತ್ತಿದ್ದ ಮೈಸೂರು ಮೂಲದ ಖಾಸಗಿ ಚಿಕನ್ ಕಂಪನಿಯ ಸಿಬ್ಬಂದಿ ಲಕ್ಷ್ಮಣ್ ಕಳೆದ ಮೂರ್ನಾಲ್ಕು ತಿಂಗಳಿಂದ ಈ ರೈತನಿಗೆ ಕೋಳಿ ತುಂಬುವಾಗ ತೂಕದಲ್ಲಿ ಮೋಸ ಮಾಡುತ್ತಿದ್ದ. ಇದರಿಂದ ಅನುಮಾನಗೊಂಡ ಹನುಮಂತೇಗೌಡ ಬೇರೆ ಯಂತ್ರ ತರಿಸಿ ತೂಕ ಹಾಕಿಸಿದಾಗ ಸುಮಾರು 30 ಕೆಜಿ ತೂಕದಲ್ಲಿ ವ್ಯತ್ಯಾಸ ಬಂದಿದೆ. ಇದರಿಂದ ರೊಚ್ಚಿಗೆದ್ದ ರೈತ ಹನುಮಂತೇಗೌಡ, ಕೋಳಿ ತುಂಬಲು ಬಂದಿದ್ದ ನಾಲ್ವರಲ್ಲಿ ಈತನನ್ನು ಹಿಡಿದು ಮರಕ್ಕೆ ಕಟ್ಟಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಂತರ ಈತನ ವಿರುದ್ಧ ಪಾಂಡವಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸಿದ್ದಾಪುರಪಾಳ್ಯ: ಕಟ್ಟೆಗೆ ಬಿದ್ದು ವ್ಯಕ್ತಿ ಸಾವು

ನಾಗಮಂಗಲ, ಜ.2– ದನಗಳಿಗೆ ನೀರು ಕುಡಿಸಲು ಹೋದ ವ್ಯಕ್ತಿ ಕಟ್ಟೆಗೆ ಬಿದ್ದು ಮೃತಪಟ್ಟಿರುವ ಘಟನೆ ಮಂಗಳವಾರ ಬೆಳ್ಳೂರು ಹೋಬಳಿಯ ಸಿದ್ದಾಪುರ ಪಾಳ್ಯದಲ್ಲಿ ನಡೆದಿದೆ. ಗ್ರಾಮದ ಶಿವನಂಜೇಗೌಡರ ಮಗ ರಂಗರಾಮು (65) ಮೃತಪಟ್ಟಿದ್ದು, ಈತ ಬೆಳಗ್ಗೆ ದನಗಳನ್ನು ಮೇಯಿಸಲು ಜಮೀನಿಗೆ ಹೋಗಿದ್ದರು. ಈ ವೇಳೆ ಮೇವನ್ನು ಕಟಾವು ಮಾಡಿ, ಮೊಬೈಲ್ ಅನ್ನು ಅಲ್ಲೇ ಇಟ್ಟು ಬಳಿಕ ಹೊಸಕಟ್ಟೆಗೆ ದನಗಳಿಗೆ ನೀರು ಕುಡಿಸಲು ಹೋಗಿದ್ದರು. ಈ ವೇಳೆ ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾರೆ. ಎಷ್ಟು ಹೊತ್ತಾದರೂ ತಂದೆ ಮನೆಗೆ ಬಾರದಿದ್ದರಿಂದ ರಂಗರಾಮು ಅವರ ಮಗ ನವೀನ್ ಕುಮಾರ್ ಹೊಸಕಟ್ಟೆ ಬಳಿ ಹೋಗಿ ನೋಡಿದಾಗ ನೀರಿನಲ್ಲಿ ಬಿದ್ದು ಮೃತಪಟ್ಟಿರುವುದು ಪತ್ತೆಯಾಗಿದೆ. ಈ ಸಂಬಂಧ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಂಧಿ ಗ್ರಾಮದ ಅಭಿವೃದ್ಧಿ ಹೆಸರಲ್ಲಿ ಮರಗಳ ಹನನ ಆರೋಪ

ಮಂಡ್ಯ, ಜ.2–ಅರಣ್ಯ ಇಲಾಖೆ ಅನುಮತಿ ಪಡೆಯದೆ ತಾಲೂಕಿನ ಹೆಚ್. ಮಲ್ಲಿಗೆರೆ ಫಾರಂನಲ್ಲಿ ಗಾಂಧಿ ಗ್ರಾಮದ ಅಭಿವೃದ್ಧಿ ಹೆಸರಲ್ಲಿ 19 ಮರಗಳನ್ನು ಹನನ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ಗಾಂಧಿ ಸ್ಮಾರಕ ಟ್ರಸ್ಟ್‌ನ ಸೂಚನೆಯಂತೆ ಮರಗಳನ್ನು ಹನನ ಮಾಡಿರುವ ಆರೋಪ ಕೇಳಿ ಬಂದಿದ್ದು, ಹಿಂದೆ ಗಾಂಧಿ ಗ್ರಾಮಕ್ಕಾಗಿ ರೇಷ್ಮೆ ಇಲಾಖೆಗೆ ಸೇರಿದ್ದ 20 ಎಕರೆ ಜಮೀನನ್ನು ಮಂಡ್ಯ ತಾಲೂಕಿನ ಹೆಚ್.ಮಲ್ಲಿಗೆರೆ ಗ್ರಾಮದಲ್ಲಿ ರಾಜ್ಯ ಸರ್ಕಾರ ಮಂಜೂರು ಮಾಡಿತ್ತು. ಆದರೆ, ಅರಣ್ಯ ಇಲಾಖೆ ಅನುಮತಿ ಪಡೆಯದೆ, ಮರ ಕಡಿದು ನಂತರ ಅನುಮತಿಗೆ ಟ್ರಸ್ಟ್ ಪತ್ರ ನೀಡಿದೆ ಎಂದು ಹೇಳಲಾಗಿದೆ.

ಈಗಾಗಲೇ ಮರ ಕಡಿಸಿದ್ದ ಗ್ರಾಪಂ ಅಧ್ಯಕ್ಷ ಸೇರಿ ಇತರರ ವಿರುದ್ಧ ಅರಣ್ಯ ಕಾಯ್ದೆಯಡಿ ಮೊಕದ್ದಮೆ ದಾಖಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ವಿಧಾನಪರಿಷತ್ ಸದಸ್ಯ ಹಾಗೂ ಗಾಂಧಿ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಮಧು ಜಿ.ಮಾದೇಗೌಡ ಅವರಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸುವ ಸಾಧ್ಯತೆ ಇದೆ.

ಬೇಡವಾದ ಮರಗಳನಷ್ಟೇ ಕಡಿಯಲಾಗಿದೆ: ಮಧು ಜಿ.ಮಾದೇಗೌಡ ಸ್ಪಷ್ಟನೆ



ಸರ್ಕಾರ ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್‌ಗೆ 20 ಎಕರೆ ಜಮೀನು ನೀಡಿದ್ದು, ಈ ಜಾಗದಲ್ಲಿದ್ದ ಐದಾರು ಕಾಡುಬಾಗೆ ಮರಗಳನ್ನು ತೆರವುಗೊಳಿಸಲಾಗಿದೆ. ಒಳ್ಳೆಯ ಮರಗಳನ್ನು ಇಟ್ಟುಕೊಂಡು, ಬೇಡವಾದ ಮರಗಳನ್ನು ಕಡಿಯಲಾಗಿದೆ ಎಂದು ಗಾಂಧಿ ಭವನ ಟ್ರಸ್ಟ್ ಅಧ್ಯಕ್ಷ ಮಧು ಜಿ.ಮಾದೇಗೌಡ ಸ್ಪಷ್ಟಪಡಿಸಿದ್ದಾರೆ.

ಈ ಜಾಗ ನಮ್ಮ ವ್ಯಾಪ್ತಿಯಲ್ಲಿದ್ದು, ಇದು ನಮಗೆ ಸಂಬಂಧಿಸಿದ ಜಮೀನು. ಬಿದ್ದು ಹೋಗುವ ಪರಿಸ್ಥಿತಿಯಲ್ಲಿದ್ದ ಮರಗಳ ಕಡಿಯಲಾಗಿದೆ. ಈ ಸಂಬಂಧ ಈಗಾಗಲೇ ಅರಣ್ಯ ಇಲಾಖೆಗೆ ಪತ್ರ ನೀಡಿದ್ದೇವೆ. ಆದರೆ, ಅವರು ಪ್ರೊಸೆಸ್ ಮಾಡಿರಲಿಲ್ಲ ಅಷ್ಟೇ. ಈಗಾಗಲೇ ಈ ಜಾಗದಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ರಸ್ತೆ, ಚರಂಡಿ ನಿರ್ಮಾಣ ಮಾಡಲಾಗಿದೆ. ಗುಡಿ ಕೈಗಾರಿಕೆಗೆ ಶೆಡ್ ನಿರ್ಮಿಸಬೇಕಾಗಿದ್ದು, ಒಂದು ತಿಂಗಳಲ್ಲಿ ಅಲ್ಲಿ ನಾಲ್ಕು ಗುಡಿ ಕೈಗಾರಿಕೆಗಳು ಪ್ರಾರಂಭಿಸಲಾಗುವುದು. ಇದರಿಂದ ಹೆಚ್.ಮಲ್ಲಿಗೆರೆ ಗ್ರಾಮಸ್ಥರಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ. 100 ಕೋಟಿ ರೂ. ವೆಚ್ಚದಲ್ಲಿ ನಮ್ಮ ತಂದೆ ಅವರ ಗಾಂಧಿ ಗ್ರಾಮದ ಕಲ್ಪನೆಯಾಗಿತ್ತು. ಆದರೆ, ಗಾಂಧಿ ಗ್ರಾಮ ಸಾಕಷ್ಟು ತೊಂದರೆ ಆಗಿದ್ದು, ಆ ನಿವಾರಣೆಗಳನ್ನು ಸರಿಪಡಿಸಿ, ಈಗ ಚಾಲನೆ ನೀಡಲಾಗಿದೆ. ಗಾಂಧಿ ಗ್ರಾಮದಿಂದ ಒಂದು ಟೂರಿಸಂ ಸ್ಪಾಟ್ ಆಗಲಿದೆ.

ಕೌಶಲ್ಯ ಸ್ಪರ್ಧೆಗೆ ಹೆಸರು ನೋಂದಣಿ

ಮಂಡ್ಯ, ಜ.2– ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಯುವ ಜನತೆಗೆ ವಿಶ್ವ ಕೌಶಲ್ಯ ಸ್ಪರ್ಧೆ ಏರ್ಪಡಿಸಲಾಗಿದ್ದು, ಆಸಕ್ತರು ಹೆಸರು ನೋಂದಾಯಿಸಿಕೊಳ್ಳಬಹುದು. ವಿವಿಧ 17 ಕೌಶಲ್ಯ ಸ್ಪರ್ಧೆಗಳನ್ನು ಏರ್ಪಡಿಸಿದ್ದು, ಹೆಸರು ನೋಂದಾಯಿಸಿಕೊಳ್ಳಲು ಜ.7 ಕೊನೆಯ ದಿನವಾಗಿದೆ. ಮಾಹಿತಿಗಾಗಿ ದೂ.ಸಂ: 18005999918 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಂಡ್ಯ, ಜ.2– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2023–24ನೇ ಸಾಲಿನ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಹ ಸಂಸ್ಥೆ ಹಾಗೂ ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಅಗತ್ಯ ದಾಖಲಾತಿಗಳೊಂದಿಗೆ ಜ.12ರೊಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ ದೂ: 08232–221315 ಅನ್ನು ಸಂಪರ್ಕಿಸಬಹುದು.

ಮೈಸೂರಲ್ಲಿ ಲಿಂಗೈಕ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಪ್ರಥಮ ಪುಣ್ಯಸ್ಮರಣೆ





ನಡೆದಾಡುವ ದೇವರಿಗೆ ಭಕ್ತಿ ನಮನ

ಮೈಸೂರು, ಜ.2(ಎಸ್‌ಬಿಡಿ)– ಮೈಸೂರಿನ ವಿವಿಧೆಡೆ ಮಂಗಳವಾರ, ಲಿಂಗೈಕ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಆಚರಿಸಲಾಯಿತು.

ಚಾಮುಂಡಿಪುರಂ ವೃತ್ತದಲ್ಲಿ ಚಾಮುಂಡಿಪುರಂ ಸೇರಿದಂತೆ ಸುತ್ತಮುತ್ತಲ ನಿವಾಸಿಗಳು ಹಾಗೂ ಶ್ರೀ ಜಯಚಾಮರಾಜ ಒಡೆಯರ್ ವೃತ್ತ(ಹಾರ್ಡಿಂಜ್ ಸರ್ಕಲ್)ದಲ್ಲಿ ಟೀಂ ಮೈಸೂರು ಸಂಘಟನೆ ಸದಸ್ಯರು ಸಿದ್ದೇಶ್ವರ ಶ್ರೀಗಳ ಫೋಟೋಗೆ ಪುಷ್ಪಾರ್ಚನೆ ಸಲ್ಲಿಸಿ, ಮೇಣದ ಬತ್ತಿ ಬೆಳಗಿಸುವ ಮೂಲಕ ಗೌರವ ಸಲ್ಲಿಸಿದರು.

ಚಾಮುಂಡಿಪುರಂ ವೃತ್ತದಲ್ಲಿ ಮಾತನಾಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸರಳ ನುಡಿಗಳಿಂದ ಎಲ್ಲರನ್ನೂ ಆಕರ್ಷಿಸಿದರಲ್ಲದೆ ನುಡಿದಂತೆ ನಡೆದು ಸರಳ ಸಂತರೆನಿಸಿಕೊಂಡಿದ್ದರು. ನಡೆದಾಡುವ ದೇವರಾಗಿದ್ದ ಅವರು ಭೌತಿಕವಾಗಿ ಅಗಲಿದ್ದರೂ ಎಲ್ಲರ ಮನಸ್ಸಿನಲ್ಲೂ ಹಸಿರಾಗಿದ್ದಾರೆ. ಪ್ರವಚನಗಳ ಮೂಲಕ ಮನುಕುಲದ ಉದ್ಧಾರಕ್ಕಾಗಿ ದುಡಿದ ಸಿದ್ದೇಶ್ವರ ಸ್ವಾಮೀಜಿಯವರ ಸೇವಾ ಕಾರ್ಯ ಅವಿಸ್ಮರಣೀಯ. ಶ್ರೀಗಳು ಕಾವಿ ಧರಿಸದೆ ಜೀವನದುದ್ದಕ್ಕೂ ಅಧ್ಯಾತ್ಮದ ಕೃಷಿ ಮಾಡಿದ ಋಷಿ ಎಂದು ಸ್ಮರಿಸಿಕೊಂಡರು.

ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯ ಮ.ವಿ. ರಾಮ್ ಪ್ರಸಾದ್, ಸಿದ್ದೇಶ್ವರ ಭಕ್ತ ವೃಂದದ ಸಿ.ಸಂದೀಪ್, ವಿದ್ಯಾ ಅರಸ್, ರಘು ಅರಸ್, ಅಂಬಳೆ ಶಿವಣ್ಣ, ಬಸವರಾಜು, ಮಹೇಶ್, ಧರ್ಮೇಂದ್ರ, ನಾಗೇಂದ್ರ, ನಾಗರಾಜ್, ಮಂಜುಳಾ, ಪುರುಷೋತ್ತಮ, ಭಾಸ್ಕರ್, ಅಜಯ್ ಶಾಸ್ತ್ರಿ, ವಿಕ್ರಂ, ಎಂ.ಜಿ.ವಿನಯ್, ಶ್ರೀಧರ್, ಅರವಿಂದ, ರಾಜೇಂದ್ರ, ರೇಣು, ಚೇತನ್, ಮಂಜು, ರೂಪೇಶ್, ರವಿ, ಸಂತೋಷ್, ಮೋಹನ್, ರಾಕೇಶ್, ಪ್ರವೀಣ್, ಉಮಾಶಂಕರ್, ಧನುಷ್, ಸುರೇಂದರ್, ಪವನ್, ಲಕ್ಷ್ಮೀನಾರಾಯಣ್, ಯೋಗೇಶ್, ಶೇಖರ್ ಮತ್ತಿತರರಿದ್ದರು.

ಟೀಂ ಮೈಸೂರು ಸ್ಮರಣೆ: ಹಾರ್ಡಿಂಜ್ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಟೀಂ ಮೈಸೂರು ಸದಸ್ಯ ಮಂಜು ಹುಣಸೂರು ಮಾತನಾಡಿ, ನಾಡಿನ ಪ್ರಸಿದ್ಧ ವಾಗ್ಮಿ, ಆಧ್ಯಾತ್ಮ ಪ್ರವಚನಕಾರರು, ಅಪರೂಪದ ಸಂತರು, ಜ್ಞಾನಯೋಗಿಗಳು, ಕಿಸೆ ಇಲ್ಲದ ವೈರಾಗ್ಯ ಮೂರ್ತಿ, ನಡೆದಾಡುವ ದೇವರೆನಿಸಿದ್ದ ಸಿದ್ದೇಶ್ವರ ಶ್ರೀಗಳ ಮಾರ್ಗವನ್ನು ಅನುಸರಿಸಿದರೆ ಸಮಾಜ ಶಾಂತಿಯ ತೋಟವಾಗುತ್ತದೆ. ವೇದ, ಉಪನಿಷತ್ತು ಯೋಗಶಾಸ್ತ್ರ, ಭಗವದ್ಗೀತೆ ಮುಂತಾದ ವಿಚಾರಗಳನ್ನು ಸಾಮಾನ್ಯರ ಜೀವನದೊಂದಿಗೆ ಬೆಸೆದು ಅರ್ಥೈಸುತ್ತಿದ್ದರು. ಬದುಕಿನ ಮಹತ್ವ, ಜೀವನ ಕಟ್ಟಿಕೊಳ್ಳುವ ರೀತಿ, ಸಂಬಂಧಗಳ ಮೌಲ್ಯವನ್ನು ಮನಮುಟ್ಟುವಂತೆ ಹೇಳುತ್ತಿದ್ದರು. ಶ್ರೀಗಳ ಬದುಕು ಆದರ್ಶನೀಯ. ಅವರ ಪ್ರವಚನಗಳನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ತಲುಪಿಸುವ ಕೆಲಸವಾಗಬೇಕಿದೆ ಎಂದರು.

ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯ ಸತೀಶ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ವಾಣೀಶ್, ಮುಖಂಡ ಬ್ರಹ್ಮಚಾರ್, ಟೀಂ ಮೈಸೂರು ಸಂಘಟನೆಯ ಗೋಕುಲ್ ಗೋವರ್ಧನ್, ಕಿರಣ್ ಜೈರಾಮ್ ಗೌಡ, ಯಶ್ವಂತ್, ಹಿರಿಯಣ್ಣ, ಮುರಳಿ, ಆನಂದ್, ಅನಿಲ್ ಜೈನ್, ಪ್ರಸನ್ನ ರಾಜ್ ಗುರು, ಮನೋಹರ್, ಸುನಿಲ್, ನವೀನ್, ಗಣೇಶ್, ಸುಮಂತ್, ಹೊಯ್ಸಳ, ಹರೀಶ್, ನವೀನ್, ಶೇಖರ್, ರಾಘವೇಂದ್ರ, ಸ್ಪಂದನ ಗ್ರೂಪ್ ಮಹೇಶ್, ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಬ್ರಾಂಡೆಡ್ ಬಟ್ಟೆಗಳ ಮಾರಾಟ: ಇಂದು ಕಡೇ ದಿನ



ಮೈಸೂರು, ಜ.2– ಪ್ರವಾಹದಿಂದಾಗಿ ಚೆನ್ನೈನ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್‌ಗಳ ಪ್ರದರ್ಶನಗಳು ಮುಚ್ಚಿರುವುದರಿಂದ ಮೈಸೂರಿನ ಕುವೆಂಪು ನಗರದ ಉದಯರವಿ ರಸ್ತೆಯಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಎಲ್ಲಾ ರೀತಿಯ ರೆಡಿಮೇಡ್ ಗಾರ್ಮೆಂಟ್ಸ್‌ಗಳ ಪ್ರದರ್ಶನ ಮತ್ತು ನೇರ ಮಾರಾಟ ಏರ್ಪಡಿಸಲಾಗಿದೆ.

ಡಿ.29ರಂದು ಆರಂಭವಾಗಿರುವ ಈ ನೇರ ಮಾರಾಟ ಮೇಳ ಜ.3 ರವರೆಗೆ ನಡೆಯಲಿದೆ. ಶೇ.80ರಷ್ಟು ರಿಯಾಯಿತಿ ದರದಲ್ಲಿ ರೆಡಿಮೇಡ್ ಬಟ್ಟೆಗಳನ್ನು ಮಾರಾಟ ಮಾಡಲಾಗುತ್ತಿದ್ದು, 20 ಕಂಪೆನಿಗಳ 25 ಬ್ರಾಂಡೆಡ್ ಗಾರ್ಮೆಂಟ್ಸ್‌ಗಳ ಮಾರಾಟ ಮೇಳದಲ್ಲಿ ಶರ್ಟ್ಸ್, ಜೀನ್ಸ್, ಟಾಪ್ಸ್, ಕುರ್ತಿ, ಶೂ, ಚಪ್ಪಲಿ, ಸ್ಯಾರಿ, ಬೆಡ್‌ಶೀಟ್ಸ್, ಲೇಡಿಸ್ ಮತ್ತು ಜೆಂಟ್ಸ್ ಜಾಕೆಟ್, ಅಂಡರ್ ಗಾರ್ಮೆಂಟ್ಸ್, ಬೆಲ್ಸ್ ಮತ್ತು ಪರ್ಸ್, ಲೇಡಿಸ್ ಟಾಪ್ಸ್ 250 ರೂ., ಬ್ರಾಂಡೆಡ್ ಲೆಗ್ಗಿನ್ಸ್ 250 ರೂ. ಸೇರಿದಂತೆ ಎಲ್ಲಾ ಬಟ್ಟೆಗಳು ಅತ್ಯಂತ ಕಡಿಮೆ ದರದಲ್ಲಿ ದೊರೆಯಲಿವೆ.

ನಾಡು, ನುಡಿ, ಜಲದ ಪರ ಹೋರಾಟಕ್ಕೆ ಬೆಂಬಲ; ಆದರೆ ಕಾನೂನು ಕೈಗೆತ್ತಿಕೊಳ್ಳುವುದ ಸಹಿಸಲ್ಲ

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಸ್ಪಷ್ಟನೆ



ಮೈಸೂರು, ಜ.2(ಎಸ್‌ಬಿಡಿ)– ಕನ್ನಡ ನಾಡು, ನುಡಿ, ಜಲದ ಬಗ್ಗೆ ಹೋರಾಟಕ್ಕೆ ನಮ್ಮ ಬೆಂಬಲ ಇದ್ದೇ ಇರುತ್ತದೆ. ಆದರೆ ಕಾನೂನಿನ ಮುಂದೆ ನಾವೆಲ್ಲರೂ ಒಂದೇ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಕನ್ನಡಪರ ಹೋರಾಟಗಾರರ ಬಂಧನ ವಿಚಾರವಾಗಿ ಮೈಸೂರಿನಲ್ಲಿ ಮಂಗಳವಾರ ಪ್ರತಿಕ್ರಿಯಿಸಿದ ಅವರು, ನಾಡು ನುಡಿ ಜಲದ ಬಗ್ಗೆ ಹೋರಾಟಕ್ಕೆ ನಮ್ಮ ಬೆಂಬಲವಿದೆ. ಆದರೆ ಕಾನೂನು ಕೈಗೆತ್ತಿಕೊಳ್ಳುವುದು ಸರಿಯಲ್ಲ. ಫಲಕಗಳ ಸಂಬಂಧ ಸರ್ಕಾರ ಈಗಾಗಲೇ 60:40ರ ಕನ್ನಡ ಬಳಕೆಗೆ ನಿರ್ದೇಶನ ನೀಡಿದೆ. ಅದನ್ನು ಎಲ್ಲರೂ ಪಾಲನೆ ಮಾಡಬೇಕು. ಕಾನೂನಿನ ಮುಂದೆ ನಾವು ನೀವು ಎಲ್ಲರೂ ಒಂದೇ ಎಂದರು.

ಹಿಂದೂ ಮುಖಂಡ ಕಲ್ಲಡ್ಕ ಪ್ರಭಾಕರ್ ಅವಹೇಳನ ಹೇಳಿಕೆ ನೀಡಿದ್ದಾರೆಂಬ ವಿಚಾರದ ಬಗ್ಗೆ ಮಾತನಾಡಿ, ಕಲ್ಲಡ್ಕ ಪ್ರಭಾಕರ್ ಮೇಲಿಂದ ಇಳಿದು ಬಂದಿಲ್ಲ. ಅವರ ಮೇಲೂ ಕ್ರಮ ತೆಗೆದುಕೊಳ್ಳುವ ಕೆಲಸ ಆಗುತ್ತಿದೆ. ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಯಾರನ್ನೂ ಪೋಷಣೆ ಅಥವಾ ರಕ್ಷಣೆ ಮಾಡುವ ಮಾತೇ ಇಲ್ಲ ಎಂದು ತಿಳಿಸಿದರು.

ಇದೇ ವೇಳೆ ಬಿಜೆಪಿ ವಿರುದ್ಧ ಹರಿಹಾಯ್ದು, ಬಿಜೆಪಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ರಾಜಕೀಯವಾಗಿ ಮುಗಿಸುವ ಪ್ರಯತ್ನ ನಡೆಸಿರುವುದು ನೂರಕ್ಕೆ ನೂರು ಸತ್ಯ. ಸಿಬಿಐ, ಇಡಿ ಸಂಸ್ಥೆಗಳನ್ನು ಬೇಕಾದಂತೆ ಬಳಸಿಕೊಳ್ಳುತ್ತಿದ್ದಾರೆ. ಈ ಪ್ರಕರಣವನ್ನು ಸರ್ಕಾರ ಕಾನೂನಾತ್ಮಕವಾಗಿ ವಾಪಸ್ ಪಡೆದಿದ್ದರೂ ಮತ್ತೆ ಹೆದರಿಸುವ ಪ್ರಯತ್ನದ ಮೂಲಕ ದ್ವೇಷದ ರಾಜಕೀಯ ಮಾಡುತ್ತಿದೆ. ಬಿಜೆಪಿಯವರ ಮೇಲೆ ಯಾಕೆ ಇಡಿ, ಸಿಬಿಐ ಕೇಸ್‌ಗಳನ್ನು ಹಾಕುತ್ತಿಲ್ಲ. ಭಾವನಾತ್ಮಕ ವಿಚಾರಗಳನ್ನು ಜನರ ಮೇಲೆ ಹೇರಿ ಅವರ ದಿಕ್ಕು ತಪ್ಪಿಸುವುದೇ ಬಿಜೆಪಿ ಅಜೆಂಡಾ. ಅವರಿಗೆ ಅಭಿವೃದ್ಧಿ ಕಡೆ ಚಿಂತನೆ ಇಲ್ಲ ಎಂದರು.

ಗಡಿ ಭಾಗದಲ್ಲಿರುವ ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಶ್ನೆ ಇಲ್ಲ. ಈಗಾಗಲೇ ಕೇರಳಾಗೆ ಹೋಗಿ ಬಂದಿದ್ದು, ಮುಂದಿನ ದಿನಗಳಲ್ಲಿ ಅದರ ಬಗ್ಗೆ ಸೂಕ್ತ ಕ್ರಮ ವಹಿಸಲಾಗುವುದು. ರಂಗಾಯಣ ನಿರ್ದೇಶಕರ ಆಯ್ಕೆ ಪ್ರಕ್ರಿಯೆ ಶೀಘ್ರದಲ್ಲೇ ನಡೆಯಲಿದೆ ಎಂದು ಇದೇ ವೇಳೆ ಸಚಿವರು ತಿಳಿಸಿದರು.

ಶ್ರೀನಿವಾಸ್ ಪ್ರಸಾದ್ ನಿಧನ



ಭಾರತೀನಗರ, ಜ.2– ಸಮೀಪದ ದೇವರಹಳ್ಳಿ ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕ ಡಿ.ಎಚ್.ರಾಜಣ್ಣ ಅವರ ಪುತ್ರ ಹಾಗೂ ಮಳವಳ್ಳಿ ಡಿಸಿಸಿ ಬ್ಯಾಂಕ್ ನೌಕರ ಡಿ.ಆರ್.ಶ್ರೀನಿವಾಸ್ ಪ್ರಸಾದ್ (ಚಂದು 33) ಅನಾರೋಗ್ಯದಿಂದ ಮಂಗಳವಾರ ನಿಧನರಾದರು. ಮೃತರು ತಂದೆ–ತಾಯಿ, ಬಂಧು–ಬಳಗ ಅಗಲಿದ್ದಾರೆ. ಸ್ವಗ್ರಾಮ ದೇವರಹಳ್ಳಿಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.





ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕರೂ ಆದ ಯುವ ಮುಖಂಡ ಯು. ಅಭಿಲಾಷ್ ಅವರನ್ನು ಚಾಲೆಂಜಿಂಗ್ ಸ್ಟಾರ್ ದರ್ಶನ್ ಸಿಹಿ ತಿನಿಸಿ, ಶುಭ ಕೋರಿದರು. ಇದೇ ವೇಳೆ ಕಾಂಗ್ರೆಸ್ ಮುಖಂಡರಾದ ಮೆಲ್ಲಹಳ್ಳಿ ರವಿ ಎನ್. ಗೌಡ, ಉದ್ಯಮಿ ಎನ್.ಆರ್. ಮೊಹಲ್ಲಾ ರಾಜೇಶ್, ಮದನ್, ಧರ್ಮ, ವಿನೋದ್, ಆನಂದ್, ಅಜ್ಜು, ಸಂಜು ಇನ್ನಿತರರು ಭಾರಿ ಹಾರ ಹಾಕಿ ಅಭಿನಂದಿಸಿ, ಶುಭಾಶಯ ಕೋರಿದರು.

ಸಾಂಸ್ಕೃತಿಕ ನಗರಿಯಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವ



ಮೈಸೂರಿನ ಜೈ ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿಯು, ಸೋಮವಾರ ಅಶೋಕಪುರಂನ ಜಯನಗರ ರೈಲ್ವೇ ಗೇಟ್ ಬಳಿ ಕೋರೆಗಾಂವ್ ವಿಜಯೋತ್ಸವ ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಲಾ ಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ, ಕಾರ್ಯದರ್ಶಿ ಎಸ್ ಉಮೇಶ್, ಮಾಜಿ ಮಹಾಪೌರ ಪುರುಷೋತ್ತಮ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಜನರ ಹಾದಿ ತಪ್ಪಿಸಲು ಬಿಜೆಪಿ ಧರ್ಮ ರಾಜಕಾರಣ

ಮಡಿಕೇರಿ, ಜ.2– ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಎದುರು ನಿಂತು ಕರ್ನಾಟಕಕ್ಕೆ ಏನು ಬೇಕು ಎಂದು ಕೇಳಲಾಗದ ರಾಜ್ಯ ಬಿಜೆಪಿ ನಾಯಕರು ಜನರ ಹಾದಿ ತಪ್ಪಿಸಲು ಧರ್ಮ ರಾಜಕಾರಣ ಮಾಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಆರೋಪಿಸಿದರು.



ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಗೊಳ್ಳುತ್ತಿರುವುದಕ್ಕೂ, ಗಲಭೆ ಸಂಬಂಧ ಹಳೆಯ ಪ್ರಕರಣಗಳ ಕುರಿತು ರಾಜ್ಯದಲ್ಲಿ ವಿಚಾರಣೆ ನಡೆಯುತ್ತಿರುವುದಕ್ಕೂ ಯಾವುದೇ ಸಂಬಂಧವಿಲ್ಲ. ಈ ಬಗ್ಗೆ ಈಗಾಗಲೇ ಗೃಹ ಸಚಿವರು ಸ್ಪಷ್ಟನೆ ನೀಡಿದ್ದಾರೆ ಎಂದರು.

ದೇಶದ ಇತಿಹಾಸದಲ್ಲೇ ಕಾಂಗ್ರೆಸ್ ದ್ವೇಷ ರಾಜಕಾರಣ ಮಾಡಿಲ್ಲ. ವಿರೋಧ ಪಕ್ಷದಲ್ಲಿದ್ದ ಬಿಜೆಪಿಯ ವಾಜಪೇಯಿ, ಅಡ್ವಾಣಿ ಅವರನ್ನು ಅತ್ಯಂತ ಗೌರವಯುತವಾಗಿ ನಡೆಸಿಕೊಂಡಿದೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಅಮಿತ್ ಶಾ, ಸಿಬಿಐ, ಇಡಿ, ಚುನಾವಣಾಧಿಕಾರಿಗಳನ್ನು ಬಳಸಿಕೊಂಡು ದ್ವೇಷ ರಾಜಕಾರಣ ಮಾಡುತ್ತಿದ್ದಾರೆ. ಇವರ ಎದುರು ನಿಲ್ಲಲು ಧೈರ್ಯವಿಲ್ಲದ ಸಂಸದರು ಇಲ್ಲಸಲ್ಲದ ವಿಚಾರಗಳನ್ನು ಎಳೆದು ಜನರ ಹಾದಿ ತಪ್ಪಿಸುತ್ತಿದ್ದಾರೆ ಎಂದು ದೂರಿದರು.

ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಜಿಎಸ್‌ಟಿ ಪಾಲಿನ ಹಣ ನೀಡಿಲ್ಲ. ಉದ್ಯೋಗ ಖಾತ್ರಿಯ ಕಾರ್ಮಿಕರ ಹಣವನ್ನು ಬಿಡುಗಡೆ ಮಾಡಿಲ್ಲ. ಬರ ಪರಿಹಾರ ಇನ್ನೂ ಬಿಡುಗಡೆ ಮಾಡಿಲ್ಲ. ರಾಜ್ಯದಲ್ಲಿ 25 ಬಿಜೆಪಿ ಸಂಸದರಿದ್ದರೂ ಇದನ್ನೆಲ್ಲ ಕೇಳುವ ಧೈರ್ಯ ಅವರಿಗಿಲ್ಲ. ಅಧಿವೇಶನದಲ್ಲೂ ಮಾತನಾಡುವುದಿಲ್ಲ. ಮುಖ್ಯಮಂತ್ರಿ ಹಾಗೂ ಸಚಿವರು ಕೇಂದ್ರ ಸರ್ಕಾರದ ಬಳಿ ತೆರಳಿ ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡಿದರೂ ಇಲ್ಲಿಯವರೆಗೆ ಹಣ ನೀಡಿಲ್ಲ ಎಂದರು.

ನೀರು ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಗಮನಹರಿಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಸೂಚನೆ

ಮಡಿಕೇರಿ, ಜ.2–ಮುಂದಿನ ಆರು ತಿಂಗಳಲ್ಲಿ ಜಿಲ್ಲೆಯ ಗ್ರಾಮೀಣ, ಪಟ್ಟಣ ಹಾಗೂ ನಗರ ಪ್ರದೇಶದಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗದಂತೆ ಗಮನಹರಿಸಬೇಕು ಎಂದು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.



> ಕೊಡಗು ಜಿಲ್ಲೆಯಲ್ಲಿ ಈ ಬಾರಿ ಕಡಿಮೆ ಮಳೆಯಾಗಿದ್ದು, ಬರ ನಿರ್ವಹಣೆಗೆ ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಂಡಿದೆ. ಈಗಾಗಲೇ ಸರ್ಕಾರದಿಂದ 750 ಲಕ್ಷ ರೂ. ಬಿಡುಗಡೆಯಾಗಿದ್ದು, ಜಿಲ್ಲಾಧಿಕಾರಿ ಪಿಡಿ ಖಾತೆಯಲ್ಲಿ 47 ಕೋಟಿ ರೂ. ಇದೆ. ತಹಶೀಲ್ದಾರ್ ಖಾತೆಯಲ್ಲಿಯೂ ಹಣ ಇದೆ. ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವು ಪೂರೈಕೆಗೆ ಕ್ರಮವಹಿಸಲಾಗಿದೆ. -ವೆಂಕಟ್ ರಾಜಾ, ಜಿಲ್ಲಾಧಿಕಾರಿ

ನಗರದ ಜಿಪಂ ಸಭಾಂಗಣದಲ್ಲಿ ಮಂಗಳವಾರ ನಡೆದ ಕೆಡಿಪಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕುಡಿಯುವ ನೀರು ಪೂರೈಕೆಗೆ ಪ್ರಥಮ ಆದ್ಯತೆ ನೀಡಬೇಕು. ಜಿಲ್ಲೆಯ ಯಾವ ಭಾಗದಲ್ಲೂ ನೀರು ಸರಬರಾಜಿನಲ್ಲಿ ಸಮಸ್ಯೆ ಇದೆ ಎಂದು ದೂರು ಕೇಳಿ ಬರಬಾರದು. ಹಾಗೆಯೇ ಜಾನುವಾರುಗಳಿಗೆ ಅಗತ್ಯ ಮೇವು ಪೂರೈಕೆ ಮಾಡುವಂತೆ ಕಟ್ಟುನಿಟ್ಟಾಗಿ ಆದೇಶಿಸಿದರು.

ಬರ ನಿರ್ವಹಣೆಯಲ್ಲಿ ಉದಾಸೀನ ಮಾಡಬಾರದು. ಪಂಚಾಯತ್ ರಾಜ್ ಇಂಜಿನಿಯರ್‌ಗಳು, ತಹಶೀಲ್ದಾರ್‌ಗಳು, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ಪಿಡಿಓಗಳು ಕುಡಿಯುವ ನೀರು ಪೂರೈಕೆಗೆ ವಿಶೇಷ ಆದ್ಯತೆ ನೀಡಬೇಕು. ಮಡಿಕೇರಿ ನಗರಕ್ಕೆ ನೀರು ಪೂರೈಸುವ ಕುಂಡಾ ಮೇಸ್ತ್ರಿ ಯೋಜನೆ ಸಂಬಂಧಿಸಿದಂತೆ ಇನ್ನೂ ಹಸ್ತಾಂತರವಾಗದಿರುವುದು, ಹಾಗೆಯೇ ಮೋಟಾರು ಅಳವಡಿಸುವ ಕಾಮಗಾರಿ ಸಬಂಧಿಸಿದಂತೆ 6 ತಿಂಗಳಾದರೂ ಟೆಂಡರ್ ಆಹ್ವಾನಿಸದಿರುವುದಕ್ಕೆ ಸಚಿವರು ಮತ್ತು ಶಾಸಕರು ತೀವ್ರ ಅತೃಪ್ತಿ ವ್ಯಕ್ತಪಡಿಸಿದರು.

ನಗರಸಭೆ ಸಂಬಂಧಿಸಿದಂತೆ ಸಾಕಷ್ಟು ದೂರುಗಳು ಬರುತ್ತಿದ್ದು, ದೂರು ಬರದಂತೆ ಎಚ್ಚರವಹಿಸಿ ಕಾರ್ಯ ನಿರ್ವಹಿಸಬೇಕು ಎಂದು ಸೂಚಿಸಿದರು. ನಂತರ ಕುಂಡಾ ಮೇಸ್ತ್ರಿ ಯೋಜನೆ ಅನುಷ್ಠಾನ ಸಂಬಂಧಿಸಿದಂತೆ ಶಾಸಕ ಡಾ.ಮಂತರ್ ಗೌಡ ಪ್ರಸ್ತಾಪಿಸಿ, ಜಲಜೀವನ್ ಮಿಷನ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಂತೆ ಸಂಬಂಧಪಟ್ಟ ಇಂಜಿನಿಯರ್‌ಗೆ ಸೂಚಿಸಿದರು. ಇದೇ ವೇಳೆ ಕುಡಿಯುವ ನೀರು ಸಂಬಂಧಿಸಿದಂತೆ ಶಾಸಕ ಎ.ಎಸ್.ಪೊನ್ನಣ್ಣ, ವಿಧಾನಪರಿಷತ್ ಸದಸ್ಯರಾದ ಸುಜಾ ಕುಶಾಲಪ್ಪ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಗಮನಸೆಳೆದರು.

ನಂತರ ಸಚಿವರು ಮಾತನಾಡಿ, ಕೋವಿಡ್ ನಿಯಂತ್ರಣ ಸಂಬಂಧಿಸಿದಂತೆ ಅಗತ್ಯ ಮುನ್ನೆಚ್ಚರಿಕೆ ಕೈಗೊಳ್ಳಬೇಕು. ಜಿಲ್ಲೆಯ ಗಡಿಭಾಗದಲ್ಲಿ ಕೋವಿಡ್ ತಪಾಸಣೆ ಮಾಡಬೇಕು. ಕೋವಿಡ್ ಕಂಡು ಬಂದಲ್ಲಿ ಸರ್ಕಾರದ ನಿಯಮದಂತೆ ಹೆಚ್ಚಿನ ಗಮನಹರಿಸಬೇಕು. ಔಷಧ ದಾಸ್ತಾನು ಮಾಡಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಮಾತನಾಡಿ, ಕೋವಿಡ್ ಸಂಬಂಧ ಅಗತ್ಯ ಮುನ್ನೆಚ್ಚರ ವಹಿಸಲಾಗಿದೆ. ಗಡಿಪ್ರದೇಶದ ಚೆಕ್‌ಪೋಸ್ಟ್‌ಗಳಲ್ಲಿ ಅಗತ್ಯ ತಪಾಸಣೆ ಮಾಡಲಾಗುತ್ತಿದೆ. ಕಾಲಕಾಲಕ್ಕೆ ತಜ್ಞ ವೈದ್ಯರ ನೇಮಕಾತಿ ಆಹ್ವಾನಿಸಲಾಗುತ್ತಿದೆ. ಇತ್ತೀಚೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಭೇಟಿ ನೀಡಿದ ಸಂದರ್ಭದಲ್ಲಿ ವೈದ್ಯರ ನೇಮಕಾತಿ ಸಂಬಂಧ ಪ್ರಸ್ತಾಪಿಸಲಾಗಿದ್ದು, ವಿಶೇಷ ಆದ್ಯತೆ ಮೇಲೆ ಕೊಡಗು ಜಿಲ್ಲೆಗೆ ವೈದ್ಯರನ್ನು ನಿಯೋಜಿಸುವ ಸಂಬಂಧ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಸೋಮಸುಂದರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚಿನ್ನಸ್ವಾಮಿ, ಆಹಾರ ಇಲಾಖೆ ಜಂಟಿ ನಿರ್ದೇಶಕಿ ಕುಮುದಾ ಶರತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಪಂ ಸಿಇಓ ವರ್ಣಿತ್ ನೇಗಿ, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್. ವೀಣಾ, ಜಿಪಂ ಉಪ ಕಾರ್ಯದರ್ಶಿ ಧನರಾಜ್, ಮುಖ್ಯ ಯೋಜನಾಧಿಕಾರಿ ಝೀವಲ್ ಖಾನ್ ಇತರರು ಇದ್ದರು.

ಬಿಜೆಪಿ ವಿರುದ್ಧ ಶಾಸಕ ಪೊನ್ನಣ್ಣ ಅಸಮಾಧಾನ


ಕಾನೂನಿನ ಅರಿವಿಲ್ಲದವರು ಕಾನೂನು ಪ್ರಕ್ರಿಯೆಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇದು ಸರಿಯಾದ ಕ್ರಮವಲ್ಲ. ಹಳೆಯ ಪ್ರಕರಣಗಳ ಇತ್ಯರ್ಥಕ್ಕಾಗಿ ಸಾಮಾನ್ಯ ಸುತ್ತೋಲೆಯನ್ನು ಅಧಿಕಾರಿಗಳ ಮಟ್ಟದಲ್ಲಿ ಕಳುಹಿಸಲಾಗಿದೆ. ರಾಮಮಂದಿರ ಉದ್ಘಾಟನೆಗೆ ನಮ್ಮ ವಿರೋಧವಿಲ್ಲದಿರುವಾಗ ದ್ವೇಷ ರಾಜಕಾರಣ ಮಾಡುವ ಅಗತ್ಯವೇನಿದೆ ಎಂದು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಬಿಜೆಪಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಮಡಿಕೇರಿಯಲ್ಲಿ ಮಂಗಳವಾರ ಹುಬ್ಬಳ್ಳಿಯಲ್ಲಿ 31 ವರ್ಷಗಳ ಬಳಿಕ ಕರಸೇವಕರ ಬಂಧನ ವಿಚಾರ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಮಮಂದಿರ ಉದ್ಘಾಟನೆಗೆ ನಮ್ಮ ವಿರೋಧವಿಲ್ಲವೆಂದು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ನಾನು ಕೂಡ ರಾಮ ಮಂದಿರದ ಉದ್ಘಾಟನಾ ಕಾರ್ಯಕ್ರಮಕ್ಕೆ ಶುಭ ಕೋರುತ್ತೇನೆ. 4 ವರ್ಷ ಇವರದ್ದೇ ಸರ್ಕಾರವಿದ್ದರೂ ಹಳೆಯ ಪ್ರಕರಣ ಇತ್ಯರ್ಥಪಡಿಸದೆ ಮಲಗಿದ್ದರಾ? ಎಂದು ಪ್ರಶ್ನಿಸಿದರು.

ಕಾನೂನು ವ್ಯಾಪ್ತಿಯ ಸುತ್ತೋಲೆಗೂ ರಾಮಮಂದಿರ ಉದ್ಘಾಟನಾ ಕಾರ್ಯಕ್ರಮಕ್ಕೂ ಸಂಬಂಧವಿಲ್ಲ. ರಾಮಮಂದಿರಕ್ಕೆ ನಮ್ಮ ವಿರೋಧವಿದ್ದಿದ್ದರೆ ನಾವು ದ್ವೇಷ ರಾಜ ಕಾರಣ ಮಾಡುತ್ತಿದ್ದೇವೆ ಎಂದು ಹೇಳಬಹು ದಿತ್ತು ಆದರೆ, ಇಡಿ, ಸಿಬಿಐಯನ್ನು ಕಪಿ ಮುಷ್ಠಿಯ ಲ್ಲಿಟ್ಟುಕೊಂಡು ರಾಜಕೀಯ ದ್ವೇಷ ಮಾಡುತ್ತಿರುವವರು ಬಿಜೆಪಿಯವರು ಎಂದರು.

ವಿಕಲಚೇತನರಿಗೆ ಶೇ.5ರಷ್ಟು ಅನುದಾನ ಮೀಸಲು

ವಿರಾಜಪೇಟೆ, ಜ.2–ವಿಕಲಚೇತನರಿಗೆ ಗ್ರಾಮ ಪಂಚಾಯಿತಿ ನಿಧಿಯಿಂದ ಶೇ.5 ರಷ್ಟು ಅನುದಾನವನ್ನು ಮೀಸಲಿರಿಸಿ, ಅವರಿಗೆ ಸೋಲಾರ್ ದೀಪ ಹಾಗೂ ಸ್ವಯಂ ಉದ್ಯೋಗ ನೀಡಿ ಸ್ವಾವಲಂಬಿ ಜೀವನ ನಡೆಸಲು ಸಹಕಾರ ನೀಡಲಾಗುವುದು ಎಂದು ಬೇಟೋಳಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಣಿ ತಿಳಿಸಿದರು.



ಸಮೀಪದ ಬೇಟೋಳಿ ಗ್ರಾಪಂನಲ್ಲಿ ನಡೆದ ವಿಕಲಚೇತನರ ಸಮನ್ವಯ ವಿಶೇಷ ಗ್ರಾಮಸಭೆ, ವ್ಹೀಲ್‌ಚೇರ್ ಹಾಗೂ ಸಾಧನಾ ಸಲಕರಣೆ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಕಲಚೇತನರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವ ಕೆಲಸ ಮಾಡಲಾಗುತ್ತಿದೆ ವಿಕಲಚೇತನರು ಸಮಸ್ಯೆಗಳಿದ್ದಲ್ಲಿ ಗ್ರಾಪಂ ಸದಸ್ಯರನ್ನು ಭೇಟಿ ಮಾಡಿ ಬಗೆಹರಿಸಿಕೊಳ್ಳುವಂತೆ ಸಲಹೆ ನೀಡಿದರು.

ಗ್ರಾಪಂ ಅಧ್ಯಕ್ಷ ಎ.ಎಂ.ಬೋಪಣ್ಣ ಮಾತನಾಡಿ, ಗ್ರಾಪಂನಿಂದ ಗ್ರಾಮೀಣ ಪುನರ್ವಸತಿ ಯೋಜನೆ, ಕೃಷಿಹೊಂಡ, ಇಂಗುಗುಂಡಿ, ವಿದ್ಯಾರ್ಥಿಗಳಿಗೆ ಶಿಷ್ಯವೇತನ ಹಾಗೂ ಪ್ರೋತ್ಸಾಹಧನ, ಬಸ್‌ಪಾಸ್, ತರಬೇತಿ, ಸ್ವಯಂ ಉದ್ಯೋಗ, ಪೆಟ್ಟಿಗೆ ಅಂಗಡಿ, ವ್ಯಾಪರ ಸೇರಿದಂತೆ ಅನೇಕ ಸರ್ಕಾರದ ಸೌಲಭ್ಯಗಳಿವೆ. ಇವುಗಳನ್ನು ವಿಕಲಚೇತನರು ಪಡೆದುಕೊಳ್ಳಬೇಕು ಎಂದರು.

ಹಿರಿಯ ನಾಗರಿಕ ಸಬಲೀಕರಣ ಇಲಾಖೆಯ ಅಧಿಕಾರಿ ವಿಮಲಾ ಮಾತನಾಡಿ, ವಿಕಲಚೇತನರಿಗೆ ಗುರುತಿನ ಚೀಟಿ ನೀಡುವ ಯೋಜನೆ, ವೈದ್ಯಕೀಯ ಪರಿಹಾರ ನಿಧಿ, ಒಂದು ಲಕ್ಷದವರೆಗೆ ಸಹಾಯಧನ, ಮಹಿಳೆಯರಿಗೆ ಶಿಶು ಪಾಲನಾ ಭತ್ಯೆ, ವಿಕಲಚೇತನರನ್ನು ವಿವಾಹವಾಗುವವರಿಗೆ ಪ್ರೋತ್ಸಾಹಧನವನ್ನು ಹಂತ ಹಂತವಾಗಿ ನೀಡಲಾಗುವುದು ಎಂದು ತಿಳಿಸಿದರು.

ಗ್ರಾಪಂ ಉಪಾಧ್ಯಕ್ಷೆ ಕೆ.ಹಚ್. ಅಲೀಮಾ, ಸದಸ್ಯರಾದ ಎ.ಎ.ವಸಂತಕಟ್ಟಿ, ಪಿ.ಬಿ.ಚಂಗಪ್ಪ, ಎಂ.ಎಂ.ರಜಿತ್, ಬಿ.ಜೆ. ಯಶೋದಾ, ಸಿ.ಎಸ್.ಸುದೀಶ್, ಪಿ.ಕೆ.ಗೀತಾ, ಪಿ.ಎಂ.ಲಕ್ಷ್ಮೀ, ಎಂ.ಎಂ.ರಜಾಕ್, ಗ್ರಾಮೀಣ ಪುನರ್ವಸತಿ ಯೋಜನೆಯ ಕಾರ್ಯಕರ್ತೆ ಆಯಿಷಾ ಉಪಸ್ಥಿತರಿದ್ದರು.

ಮಂತ್ರಾಕ್ಷತೆ ಸ್ವೀಕರಿಸಲು ಯಾವುದೇ ನಿರ್ಬಂಧವಿಲ್ಲ

ಮಡಿಕೇರಿ, ಜ.2– ಅಯೋಧ್ಯೆಯ ಮಂತ್ರಾಕ್ಷತೆ ಸ್ವೀಕರಿಸಲು ಯಾವುದೇ ಷರತ್ತು, ನಿರ್ಬಂಧ, ವ್ರತಾಚರಣೆಯ ಅಗತ್ಯವಿಲ್ಲ ಮತ್ತು ಸೂತಕದ ಅಡ್ಡಿ ಇಲ್ಲ ಎಂದು ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಹಾಗೂ ವಿಶ್ವ ಹಿಂದೂ ಪರಿಷತ್‌ನ ಕೊಡಗು ಜಿಲ್ಲಾ ಘಟಕ ಸ್ಪಷ್ಟಪಡಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಟ್ರಸ್ಟ್ ಮತ್ತು ವಿಹೆಚ್‌ಪಿ, ಅಯೋಧ್ಯೆಯ ಮಂತ್ರಾಕ್ಷತೆ ಸ್ವೀಕಾರದ ಕುರಿತು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಮಾಹಿತಿಯನ್ನು ನೀಡಿದ್ದಾರೆ. ಈ ಬಗ್ಗೆ ಯಾರೂ ಗೊಂದಲಕ್ಕೀಡಾಗದೆ ಭಕ್ತಿಯಿಂದ ಮಂತ್ರಾಕ್ಷತೆಯನ್ನು ಸ್ವೀಕರಿಸಬೇಕು. ಮಂತ್ರಾಕ್ಷತೆ ವಿತರಿಸುವ ಸಂದರ್ಭ ಮನೆಯವರಿಂದ ಹಣ ಅಥವಾ ಯಾವುದೇ ವಸ್ತುವನ್ನು ದಾನವಾಗಿ ಪಡೆಯಬಾರದು ಎಂದು ತಿಳಿಸಿದೆ. ಮಂತ್ರಾಕ್ಷತೆಯನ್ನು ಕೊಡಗು ಜಿಲ್ಲೆಗೆ ತಂದು ಓಂಕಾರೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ನಂತರ ತಾಲೂಕು ಮಟ್ಟದಲ್ಲಿ ವಿತರಿಸಲಾಗುವುದು. ಸೋಮವಾರದಿಂದ ಜ.15ರ ವರೆಗೆ ವಿತರಿಸಲು ಸಮಯ ನಿಗದಿಪಡಿಸಲಾಗಿದ್ದು, ಜ.7ರಂದು ಮಹಾಅಭಿಯಾನದ ಮೂಲಕ ಬೆಳಗ್ಗಿನಿಂದ ಸಂಜೆ ವರೆಗೆ ಮಂತ್ರಾಕ್ಷತೆ ವಿತರಿಸಲಾಗುವುದು.

ಭಕ್ತರಿಗೆ ಮನವಿ: ಸ್ವೀಕರಿಸಿದ ಅಕ್ಷತೆಯನ್ನು ಮನೆಯ ಪೂಜಾ ಕ್ಷೇತ್ರದಲ್ಲಿ ಇರಿಸಬೇಕು. ಅಯೋಧ್ಯೆಯ ಶ್ರೀರಾಮ ಪ್ರಾಣ ಪ್ರತಿಷ್ಠೆಯ ದಿನ ಜ.22ರಂದು ಬೆಳಗ್ಗೆ 10 ಗಂಟೆಗೆ ಎಲ್ಲರೂ ಆಯಾ ಗ್ರಾಮಗಳ ದೇವಾಲಯಕ್ಕೆ ಹೋಗಿ ರಾಮನಾಮ ಜಪದೊಂದಿಗೆ ಪೂಜೆ ಸಲ್ಲಿಸಬೇಕು ಎಂದು ಟ್ರಸ್ಟ್ ಮತ್ತು ವಿಹೆಚ್‌ಪಿ ಮನವಿ ಮಾಡಿದೆ.

ಜ.15ರಂದು ಬಸವೇಶ್ವರ ದೇವಾಲಯ ವಾರ್ಷಿಕೋತ್ಸವ

ಮಡಿಕೇರಿ, ಜ.2–ಕೊಡಗರಹಳ್ಳಿಯ ಶ್ರೀ ಬೈತೂರಪ್ಪ ಪೊವ್ವದಿ ಬಸವೇಶ್ವರ ದೇವಾಲಯದ 12ನೇ ವಾರ್ಷಿಕೋತ್ಸವ ಜ.15ರಂದು ನಡೆಯಲಿದೆ. ದೇವಾಲಯದಲ್ಲಿ ಅಂದು ಮುಂಜಾನೆಯಿಂದಲೇ ವಿವಿಧ ಪೂಜಾ ಕೈಂಕರ್ಯ ಜರುಗಲಿದ್ದು, ಬೆಳಗ್ಗೆ 7 ಗಂಟೆಗೆ ಮಹಾ ಗಣಪತಿ ಹೋಮ, 8 ಗಂಟೆಗೆ ಏಕಾದಶ ರುದ್ರಾಭಿಷೇಕ, 9 ಗಂಟೆಗೆ ಶ್ರೀದೇವಿಗೆ ನವಕಲಶಾಭಿಷೇಕ ಪೂಜೆ, 11 ಗಂಟೆಗೆ ನವಗ್ರಹಗಳಿಗೆ ವಿಶೇಷ ಕಲಶಾಭಿಷೇಕ ಪೂಜೆ, 11.30ಕ್ಕೆ ನಾಗದೇವರಿಗೆ ವಿಶೇಷ ಪೂಜೆ ಜರುಗಲಿದೆ. ಮಧ್ಯಾಹ್ನ 12ಕ್ಕೆ ಮಹಾಪೂಜೆ ಹಾಗೂ ತೀರ್ಥಪ್ರಸಾದ ವಿತರಣೆ ನಡೆಯಲಿದ್ದು, 1 ಗಂಟೆಗೆ ಅನ್ನಸಂತರ್ಪಣೆ ನೆರವೇರಲಿದೆ ಎಂದು ಬೈತೂರಪ್ಪ ಪೊವ್ವದಿ ಬಸವೇಶ್ವರ ದೇವಾಲಯ ಟ್ರಸ್ಟ್‌ನ ಪ್ರಮುಖರು ತಿಳಿಸಿದ್ದಾರೆ.

ಕಾರಿನ ಬಳಿ ಭಿಕ್ಷೆ ಬೇಡುತ್ತಾ ಬಂದ ಬಾಲಕಿ ಅಪಹರಿಸಿದ ಕೇರಳ ಮೂಲದ ದುಷ್ಕರ್ಮಿಗಳು

- ಕಾರು ಅಪಘಾತಕ್ಕೀಡಾಗಿ ಗ್ರಾಮಸ್ಥರ ಕೈಗೆ ಸಿಕ್ಕಿ ಬಿದ್ದ ಯುವಕರು
- ಬಾಲಕಿ ರಕ್ಷಿಸಿ; ಅಪಹರಣಕಾರರಿಗೆ ಧರ್ಮದೇಟು ನೀಡಿದ ಮಧುವನಹಳ್ಳಿ ಗ್ರಾಮಸ್ಥರು

ಚಾಮರಾಜನಗರ, ಜ.2– ಕಾರಿನ ಬಳಿ ಭಿಕ್ಷೆ ಬೇಡುತ್ತಾ ಬಂದ ಅಪ್ರಾಪ್ತ ಬಾಲಕಿಯನ್ನು ಅಪಹರಣ ಮಾಡಿದ ಕೇರಳ ಮೂಲದ ನಾಲ್ವರನ್ನು ಕೊಳ್ಳೇಗಾಲ ಪೊಲೀಸರು ಬಂಧಿಸಿ, ವಿಚಾರಣೆಗೊಳಪಡಿಸಿದ್ದಾರೆ.

ಕೇರಳದಿಂದ ಆಗಮಿಸಿದ್ದ ನಾಲ್ವರು ಯುವಕರ ತಂಡ ಕೊಳ್ಳೇಗಾಲ ಬಸ್ ನಿಲ್ದಾಣದಲ್ಲಿ ಭಿಕ್ಷೆ ಬೇಡುತ್ತಾ ಕಾರಿನ ಬಳಿ ಬಂದ ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ, ವೇಗವಾಗಿ ಹೋಗುತ್ತಿದ್ದರು. ಈ ವೇಳೆ ತಾಲೂಕಿನ ಮಧುವನಹಳ್ಳಿ ಬಳಿ ಕಾರು ವ್ಯಕ್ತಿಯೊಬ್ಬನಿಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಅಪಘಾತದ ವಿಚಾರಕ್ಕೆ ಯುವಕರನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡಾಗ ಕಾರಿನಲ್ಲಿ ಅಪ್ರಾಪ್ತ ಬಾಲಕಿಯೊಬ್ಬಳ ಬಾಯಿಗೆ ಬಟ್ಟೆ ತುರುಕಿ ಅಪಹರಣ ಮಾಡುತ್ತಿರುವುದು ಬೆಳಕಿಗೆ ಬಂದಿದೆ. ಕೂಡಲೇ ಗ್ರಾಮಸ್ಥರು ಕಾರಿನಲ್ಲಿದ್ದ ಬಾಲಕಿಯನ್ನು ರಕ್ಷಿಸಿ, ಅಪಹರಣಕಾರರಿಗೆ ಗೂಸಾ ನೀಡಿದ್ದಾರೆ.

ಈ ವೇಳೆ ಗ್ರಾಮಸ್ಥರು ಬಾಲಕಿಯನ್ನು ವಿಚಾರಿಸಿದಾಗ ತಾನು ಕೊಳ್ಳೇಗಾಲ ಬಸ್ ನಿಲ್ದಾಣದ ಬಳಿ ಭಿಕ್ಷೆ ಬೇಡುವಾಗ ಇವರ ಕಾರಿನ ಬಳಿ ಭಿಕ್ಷೆ ಬೇಡುತ್ತಾ ಹೋದ್ದೆ. ಆಗ ಇವರು ನನ್ನನ್ನು ಕಾರಿನೊಳಗೆ ಎಳೆದುಕೊಂಡು ಬಾಯಿಗೆ ಬಟ್ಟೆ ತುರುಕಿ ಅಪಹರಿಸುತ್ತಿದ್ದಾರೆ. ನನ್ನನ್ನು ಕಾಪಾಡಿ ಎಂದು ಕಣ್ಣೀರಿಟ್ಟಿದ್ದಾಳೆ. ಬಳಿಕ ಕೊಳ್ಳೇಗಾಲ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದ ಗ್ರಾಮಸ್ಥರು ಅಪಹರಣಕಾರರಿಗೆ ಚೆನ್ನಾಗಿ ಥಳಿಸಿ ಪೊಲೀಸರ ವಶಕ್ಕೆ ನೀಡಿದ್ದಾರೆ. ಅಲ್ಲದೇ ಬಾಲಕಿಯನ್ನು ಸಹ ಪೊಲೀಸರ ವಶಕ್ಕೆ ನೀಡಲಾಗಿದ್ದು, ಆಕೆಯನ್ನು ಅವರ ಕುಟುಂಬದೊಂದಿಗೆ ಸೇರಿಸುವುದಾಗಿ ಪೊಲೀಸರು ಭರವಸೆ ನೀಡಿದ್ದಾರೆ.

ಈ ಸಂಬಂಧ ಕೊಳ್ಳೇಗಾಲ ಪೊಲೀಸ್ ಠಾಣೆಗೆ ದೂರು ನೀಡಿರುವ ಮಧುವನಹಳ್ಳಿ ಗ್ರಾಮಸ್ಥರು, ಅಪಹರಣಕಾರರಿಗೆ ಕಠಿಣ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

ಪ್ರಗತಿಯಲ್ಲಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚನೆ

ಹನೂರು, ಜ.2– ತಾಲೂಕಿನ ಪ್ರಸಿದ್ಧ ಯಾತ್ರಾ ಸ್ಥಳ ಶ್ರೀಮಲೆ ಮಹದೇಶ್ವರ ಬೆಟ್ಟದಲ್ಲಿ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚನೆ ನೀಡಿದರು.



> **13 ಹಾಡಿಗಳಿಗೆ ಸೌಲಭ್ಯಕ್ಕೆ ಸೂಚನೆ**
>
> ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟ ವ್ಯಾಪ್ತಿಯಲ್ಲಿ ಬರುವ 13 ಹಾಡಿಗಳಿಗೆ ಅಗತ್ಯ ಮೂಲ ಸೌಕರ್ಯ, ರಸ್ತೆ ನಿರ್ಮಾಣ ಸಂಬಂಧ ಕ್ರಿಯಾ ಯೋಜನೆ ತಯಾರಿಸುವಂತೆ ಪಿಡಬ್ಲ್ಯೂಡಿ ಇಲಾಖೆ ಅಧಿಕಾರಿಗಳಿಗೆ ಸಚಿವ ಕೆ.ವೆಂಕಟೇಶ್ ಸೂಚಿಸಿದರು.
>
> ಹಾಡಿಗಳಲ್ಲಿ ಕುಡಿಯುವ ನೀರು, ರಸ್ತೆ ಸೇರಿದಂತೆ ಅಗತ್ಯ ಸೌಲಭ್ಯಗಳ ಕೊರತೆ ಇರುವ ಬಗ್ಗೆ ದೂರುಗಳು ಬರುತ್ತಿದ್ದು, ಇವುಗಳನ್ನು ಕಲ್ಪಿಸಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕು ಎಂದರು.

ಹೊಸ ವರ್ಷ ಹಿನ್ನೆಲೆಯಲ್ಲಿ ಸೋಮವಾರ ರಾತ್ರಿ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿದ ಸಚಿವರು, ರಾತ್ರಿ ಮಾದಪ್ಪನ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಪ್ರಾಧಿಕಾರದಿಂದ ಸಚಿವರನ್ನು ಸನ್ಮಾನಿಸಲಾಯಿತು. ನಂತರ ರಾತ್ರಿ ಬೆಟ್ಟದಲ್ಲಿಯೇ ವಾಸ್ತವ್ಯ ಹೂಡಿದ್ದ ಅವರು, ಮಂಗಳವಾರ ಮಲೆ ಮಹದೇಶ್ವರ ಬೆಟ್ಟದಲ್ಲಿ ಪ್ರಗತಿ ಹಂತದಲ್ಲಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿ ಮಾತನಾಡಿದ ಅವರು, 386 ವಸತಿ ಗೃಹಗಳ ಕಾಮಗಾರಿ ಪ್ರಾರಂಭವಾಗಿ 3 ವರ್ಷಗಳೇ ಕಳೆದರೂ ಇನ್ನೂ ಪೂರ್ಣಗೊಂಡಿಲ್ಲ. ಇದರಿಂದ ಹಬ್ಬ ಹರಿದಿನ ಜಾತ್ರಾ ಸಂದರ್ಭಗಳಲ್ಲಿ ಭಕ್ತರ ವಾಸ್ತವ್ಯಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ಮಾರ್ಚ್ ಒಳಗೆ ಕಾಮಗಾರಿ ಪೂರ್ಣಗೊಳಿಸಿ ಭಕ್ತರಿಗೆ ಅನುಕೂಲ ಕಲ್ಪಿಸಬೇಕು ಎಂದರು.

ಬಳಿಕ 108 ಅಡಿ ಎತ್ತರದ ಮಹದೇಶ್ವರ ಪ್ರತಿಮೆ ತಳ ಭಾಗದಲ್ಲಿ ನಡೆಯು ತ್ತಿರುವ ಮಹದೇಶ್ವರ ಚರಿತ್ರೆ ತಿಳಿಸುವ ಪ್ರತಿಮೆ ಇತರೆ ಕಾಮಗಾರಿಗಳ ಕುರಿತು ಪರಿಶೀಲಿಸಿದ ಸಚಿವರು ಪ್ರತಿಮೆ ಉದ್ಘಾಟನೆಯಾಗಿ 9 ತಿಂಗಳು ಕಳೆದಿದೆ. ಮುಂದುವರೆದ ಅಭಿವೃದ್ಧಿ ಕಾಮಗಾರಿಯನ್ನು ತ್ವರಿತವಾಗಿ ನಿರ್ವಹಿಸಬೇಕು. ಇನ್ನು ಒಂದು ತಿಂಗಳೊಳಗೆ ಗುಣಮಟ್ಟದ ಕಾಮಗಾರಿ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿದರು.

ಮಾದಪ್ಪನ ಪ್ರತಿಮೆ ನಿರ್ಮಾಣದ ಸ್ಥಳಕ್ಕೆ ತೆರಳುವ ರಸ್ತೆ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಮಲೆ ಮಹದೇಶ್ವರ ಸ್ವಾಮಿ ದರ್ಶನ ಮಾಡಲು ಬರುವ ಭಕ್ತರಿಗೆ ತಿರುಪತಿ ಮಾದರಿಯಲ್ಲಿ 49 ಕೋಟಿ ವೆಚ್ಚದಲ್ಲಿ ಕ್ಯೂ ಲೈನ್ ಕಾಮಗಾರಿ ನಡೆಯುತ್ತಿದೆ ನೆಲಮಹಡಿಯಲ್ಲಿ 4 ಬ್ಲಾಕ್ ನಿರ್ಮಾಣ ಮಾಡುತ್ತಿದ್ದು 3 ಬ್ಲಾಕ್‌ಗಳ ಕಾಮಗಾರಿ ಮುಗಿದಿದೆ ಒಂದು ಬ್ಲಾಕ್ ಕಾಮಗಾರಿ ಮಾತ್ರ ಬಾಕಿ ಇದ್ದು ಆದಷ್ಟು ಬೇಗ ಕಾಮಗಾರಿ ಮುಗಿಸುವಂತೆ ಸೂಚನೆ ನೀಡಿದರು.

ಮಜ್ಜನ ಬಾವಿ ಸಮೀಪದ ದೊಡ್ಡ ಕೆರೆ ಮೈದಾನದಲ್ಲಿ ಕಲ್ಯಾಣಿ ಕಾಮಗಾರಿ ಪ್ರಾರಂಭಿಸಲಾಗಿದೆ. ಆದರೆ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಕಳೆದ 3 ವರ್ಷ ಗಳಿಂದ ತೆಪ್ಪೋತ್ಸವ ನಡೆದಿಲ್ಲ. ಆದ್ದರಿಂದ ಯುಗಾದಿ ಜಾತ್ರಾ ಮಹೋತ್ಸವದ ಒಳಗೆ ಕಾಮಗಾರಿ ಪೂರ್ಣಗೊಳಿಸಿ ತೆಪ್ಪೋತ್ಸವಕ್ಕೆ ಸಿದ್ಧತೆ ಮಾಡಿಕೊಳ್ಳುವಂತೆ ಸಚಿವರು ತಿಳಿಸಿದರು.

ಮಹದೇಶ್ವರ ಬೆಟ್ಟಕ್ಕೆ ತಾಳಬೆಟ್ಟದಿಂದ ಬರುವ ಪಾದಯಾತ್ರಿಕರಿಗೆ ಅನುಕೂಲ ಕಲ್ಪಿಸಲು ಮೆಟ್ಟಿಲು ಕಾಮಗಾರಿ ಬೇಗನೆ ಮುಗಿಸಬೇಕು. ಕಳೆದ ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆ ಪಡೆದ ಕಾಮಗಾರಿಗಳನ್ನು ಸಹ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಈ ವೇಳೆ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿಸಾಹು, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಮಹೇಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಚಿನ್ನಣ್ಣ, ಮಲೆ ಮಹದೇಶ್ವರ ವನ್ಯ ಜೀವಿಧಾಮದ ಉಪ ಸಂರಕ್ಷಣಾಧಿಕಾರಿ ಚಂದ್ರಶೇಖರ್ ಪಾಟೀಲ್, ಗ್ರೇಡ್–2 ತಹಸೀಲ್ದಾರ್ ಧನಂಜಯ್ ಇದ್ದರು.

ಇಂದು ಗೋಲಕ ಹಣ ಎಣಿಕೆ


ಚಾಮರಾಜನಗರ, ಜ.2– ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಗೋಲಕಗಳ ಎಣಿಕೆ ಕಾರ್ಯ ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣದ ಮೊದಲ ಮಹಡಿಯ ವಿಶ್ರಾಂತಿ ಗೃಹದಲ್ಲಿ ಜ.3ರಂದು ಬೆಳಗ್ಗೆ ಸೂಕ್ತ ಪೊಲೀಸ್ ಬಂದೋಬಸ್ತ್‌ನಲ್ಲಿ ನಡೆಸಲಾಗುವುದು ಎಂದು ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿಕ್ಕತಾಯಮ್ಮ ನಿಧನ

ಚಾಮರಾಜನಗರ, ಜ.2– ತಾಲೂಕಿನ ಮಲಿಯೂರು ಗ್ರಾಮದ ನಿವಾಸಿ ಚಿಕ್ಕತಾಯಮ್ಮ (86) ಮೈಸೂರಿನಲ್ಲಿ ನಿಧನರಾದರು. ಮೃತರು ಪತ್ರಕರ್ತ, ಅಹಿಂದ ಸಮಿತಿ ರಾಜ್ಯಾಧ್ಯಕ್ಷ ಸೋಮಯ್ಯ ಸೇರಿದಂತೆ ಐವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಮಲಿಯೂರಿನಲ್ಲಿ ಮಂಗಳವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕರವೇ ಅಧ್ಯಕ್ಷರ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ



ಕೊಳ್ಳೇಗಾಲ, ಜ.2– ಸರ್ಕಾರ ಈ ಕೂಡಲೇ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರ ಮೇಲಿನ ಮೊಕದ್ದಮೆಗಳನ್ನು ಹಿಂಪಡೆದು ರಾಜ್ಯಾಧ್ಯಕ್ಷ ನಾರಾಯಣಗೌಡರನ್ನು ಬಿಡುಗಡೆಗೊಳಿಸದಿದ್ದರೇ ಗಡಿ ಜಿಲ್ಲೆ ಬಂದ್ ಮಾಡುತ್ತೇವೆ. ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸದಿದ್ದರೇ ಉಗ್ರ ಹೋರಾಟ ಅನಿವಾರ್ಯ ಎಂದು ವೇದಿಕೆ ತಾಲೂಕು ಅಧ್ಯಕ್ಷ ಮಹಮ್ಮದ್ ಮತೀನ್ ಎಚ್ಚರಿಕೆ ನೀಡಿದರು.

ಪಟ್ಟಣದ ಎಂಜಿಎಸ್‌ವಿ ಜೂನಿಯರ್ ಕಾಲೇಜು ಮೈದಾನ ಆವರಣದಲ್ಲಿ ಜಮಾಯಿಸಿದ ಕರವೇ ನಾರಾಯಣಗೌಡ ಬಣದ ಕಾರ್ಯಕರ್ತರು ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರು ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ತಾಲೂಕು ಕಚೇರಿಯಲ್ಲಿ ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಶಿರಸ್ತೇದಾರ್ ಕೃಪಾಕರ್ ಅವರಿಗೆ ಮನವಿ ಸಲ್ಲಿಸಿದರು.

ಕರವೇ ಅಧ್ಯಕ್ಷ ಮತೀನ್ ಮಾತನಾಡಿ, ರಾಜ್ಯ ಸರ್ಕಾರ ಸರ್ವಾಧಿಕಾರ ಮೆರೆದಿದೆ. ಕನ್ನಡ, ನಾಡು, ನುಡಿ ನೆಲಕ್ಕಾಗಿ ಹೋರಾಡುವವರಿಗೆ ಬೆಲೆ ನೀಡುತ್ತಿಲ್ಲ. ಕರ್ನಾಟಕವನ್ನು ಕನ್ನಡ ಮಯ ಮಾಡಲು ಹೋರಾಡುವವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ನಮ್ಮ ರಾಜ್ಯಾಧ್ಯಕ್ಷ ಟಿ.ಎನ್.ನಾರಾಯಣಗೌಡರನ್ನು ಬಂಧಿಸಲಾಗಿದೆ. ಇದನ್ನು ಕರವೇ ಖಂಡಿಸುತ್ತೇವೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಎಚ್ಚೆತ್ತುಕೊಳ್ಳಬೇಕು. ಕನ್ನಡಿಗರ ಅಸ್ಮಿತ್ವಕ್ಕೆ ಧಕ್ಕೆಯಾದರೆ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಲಾಗುವುದು. ಈ ಕೂಡಲೇ ಕರವೇ ಕಾರ್ಯಕರ್ತರ ಮೇಲಿನ ಮೊಕದ್ದಮೆ ಹಿಂಪಡೆದು, ನಾರಾಯಣಗೌಡರ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ಕರವೇ ಟೌನ್ ಅಧ್ಯಕ್ಷ ಗಿರಿವಾಸನ್, ಉಪಾಧ್ಯಕ್ಷ ಪ್ರಭಾಕರ್, ಗೌರವಾಧ್ಯಕ್ಷ ಮಲ್ಲಿಕಾರ್ಜುನ್, ಪ್ರಧಾನ ಕಾರ್ಯದರ್ಶಿ ಸಚಿನ್, ಸಂಘಟನಾ ಕಾರ್ಯದರ್ಶಿ ಪೇಪರ್ ಚಂದ್ರು, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಆರ್.ಮಹದೇವ ಸ್ವಾಮಿ, ಪ್ರಭಾಕರ್, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಮಹದೇವ ಪ್ರಸಾದ್, ಗೋವಿಂದ, ಛಲವಾದಿ ಮಹಾಸಭೆ ರಾಜ್ಯ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು ಇನ್ನಿತರರಿದ್ದರು.



ಚಾಮರಾಜನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಗೌರವಾಧ್ಯಕ್ಷೆ ನರ್ಗೀಸ್ ಭಾನು ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಜಿಲ್ಲಾಧ್ಯಕ್ಷ ವಿ.ಶ್ರೀನಿವಾಸ ಪ್ರಸಾದ್, ಚಾಮುಲ್‌ನ ಗುಣ, ಭರವಸೆ ವಿಭಾಗದ ತಾಂತ್ರಿಕ ಅಧಿಕಾರಿ ಅಲಿಖಾನ್ ಸಾಹೇಬ್, ಉಪಾಧ್ಯಕ್ಷ ರಾಜೇಂದ್ರ ಸಿ., ಪ್ರಧಾನ ಕಾರ್ಯದರ್ಶಿ ಮಹದೇವ ಪ್ರಸಾದ್.ಬಿ., ಸಹ ಕಾರ್ಯದರ್ಶಿ ಸುರೇಶ್ ಕುಮಾರ್ ಜಿ., ಸಂಘಟನಾ ಕಾರ್ಯದರ್ಶಿ ಮಧುಕುಮಾರ್ ಸಿ.ಎಂ., ಸದಸ್ಯರಾದ ಲೋಕೇಶ್.ಎನ್., ಅಕ್ಷಯ್ ಸಿ.ಎಸ್, ನಾಗೇಂದ್ರ ಸಿ, ಶ್ರೀಧರ್ ಇದ್ದರು.

ವಿಕಲಚೇತನರ ಬಸ್‌ಪಾಸ್ ನವೀಕರಣ

ಚಾಮರಾಜನಗರ, ಜ.2– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಚಾಮರಾಜನಗರ ವಿಭಾಗ ವ್ಯಾಪ್ತಿಗೆ ಬರುವ ತಾಲೂಕುಗಳಲ್ಲಿ ಜ.11 ರಿಂದ ವಿಕಲಚೇತನರ ರಿಯಾಯಿತಿ ದರದ ಬಸ್‌ಪಾಸ್‌ಗಳನ್ನು ನವೀಕರಿಸಲಾಗುತ್ತದೆ.

ಚಾಮರಾಜನಗರ, ಯಳಂದೂರು ತಾಲೂಕುಗಳ ಫಲಾನುಭವಿಗಳ ಬಸ್‌ಪಾಸ್‌ಗಳನ್ನು ಚಾಮರಾಜನಗರ ಬಸ್ ನಿಲ್ದಾಣ, ಗುಂಡ್ಲುಪೇಟೆ ತಾಲೂಕಿನ ಫಲಾನುಭವಿಗಳ ಬಸ್‌ಪಾಸ್‌ಗಳನ್ನು ಗುಂಡ್ಲುಪೇಟೆ ಬಸ್ ನಿಲ್ದಾಣ, ಕೊಳ್ಳೇಗಾಲ, ಹನೂರು ತಾಲೂಕುಗಳ ಪಾಸ್‌ಗಳನ್ನು ಕೊಳ್ಳೇಗಾಲ ಘಟಕ ಹಾಗೂ ನಂಜನಗೂಡು, ತಿ.ನರಸೀಪುರ ತಾಲೂಕುಗಳ ಪಾಸ್‌ಗಳನ್ನು ನಂಜನಗೂಡು ಘಟಕದಲ್ಲಿ ನವೀಕರಿಸಲಾಗುತ್ತದೆ. ನವೀಕರಿಸಲು ಆನ್‌ಲೈನ್ ಸೇವಾ ಸಿಂಧು ತಂತ್ರಾಂಶದಲ್ಲಿ ಕಡ್ಡಾಯವಾಗಿ ಅರ್ಜಿ ಸಲ್ಲಿಸಬೇಕು. 2023ನೇ ಸಾಲಿನಲ್ಲಿ ಪಡೆದಿರುವ ಹಳೆ ಪಾಸ್, ಯುಡಿಐಡಿ ಕಾರ್ಡ್, ಇತ್ತೀಚಿನ 2 ಭಾವಚಿತ್ರ ಆಧಾರ್ ಕಾರ್ಡ್ ಪ್ರತಿ ಹಾಗೂ 660 ರೂ. ಪಾವತಿಸಿ ಬೆಳಗ್ಗೆ 10 ರಿಂದ ಸಂಜೆ 4ರವರೆಗೆ ಖುದ್ದು ಹಾಜರಿದ್ದು ಬಸ್‌ಪಾಸ್ ನವೀಕರಿಸಿಕೊಳ್ಳಬೇಕು.

2023ನೇ ಸಾಲಿನಲ್ಲಿ ವಿಕಲಚೇತನರ ಬಸ್‌ಪಾಸ್ ಹೊಂದಿರುವ ಫಲಾನುಭವಿಗಳಿಗೆ 2024ರ ಫೆ.29ರವರೆಗೆ ಮಾತ್ರ ಬಸ್‌ಗಳಲ್ಲಿ ಪ್ರಯಾಣಿಸಲು ಅವಕಾಶವಿದೆ. ಬಸ್ ಪಾಸ್ ನವೀಕರಣವನ್ನು ಫೆ.29ರವರೆಗೆ ಮಾತ್ರ ಮಾಡಲಾಗುತ್ತದೆ. ವಿಕಲಚೇತನರು ನಿಗದಿತ ಅವಧಿಯೊಳಗೆ ಬಸ್‌ಪಾಸ್ ನವೀಕರಿಸಿಕೊಳ್ಳುವಂತೆ ಚಾಮರಾಜನಗರ ವಿಭಾಗದ ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ನಾಲ್ವರು ಕೂಲಿ ಕಾರ್ಮಿಕರ ದುರ್ಮರಣ

ಎರಡು ತಾಸು ತಡವಾಗಿ ತೆರಳಿದ ಬಸ್ ಪ್ರಯಾಣಿಕರು: ಅಪಘಾತ ಸಂಭವಿಸಿದ್ದರಿಂದ ಕೆಎಸ್‌ಆರ್‌ಟಿಸಿ ಎಲೆಕ್ಟ್ರಿಕ್ ಬಸ್ ಪ್ರಯಾಣಿಕರು ಎರಡು ತಾಸು ತಡವಾಗಿ ತೆರಳಬೇಕಾಯಿತು. ವಿರಾಜಪೇಟೆ ಕಡೆಯಿಂದ ಬರುತ್ತಿದ್ದ ಬಸ್ ಇಂದು ಬೆಳಗ್ಗೆ 8.35 ಗಂಟೆ ವೇಳೆಗೆ ಮಹೀಂದ್ರ ಜೀಪ್‌ಗೆ ಹುಣಸೂರು ಆರ್‌ಟಿಓ ಸರ್ಕಲ್‌ನಲ್ಲಿ ಡಿಕ್ಕಿ ಹೊಡೆದು ನಾಲ್ವರು ಕೂಲಿ ಕಾರ್ಮಿಕರು ಸಾವನ್ನಪ್ಪಿದ್ದರಿಂದ ಪೊಲೀಸರು ಮಹಜರು ಪ್ರಕ್ರಿಯೆ ನಡೆಸಿ ಬಸ್ಸನ್ನು ವಶಕ್ಕೆ ಪಡೆದ ಕಾರಣ ಸಂಸ್ಥೆ ಅಧಿಕಾರಿಗಳು ಬೇರೊಂದು ಬಸ್ ತರಿಸಿ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಬೆಳಗ್ಗೆ 10.30 ಗಂಟೆಯಾಯಿತು.

ಹಾಗಾಗಿ ಸರ್ಕಾರಿ, ಖಾಸಗಿ ಕಚೇರಿಗೆ ಹೋಗುವವರು 2 ತಾಸು ತಡವಾಗಿ ಹೊರಡಬೇಕಾಯಿತು. ಬಯೋಮೆಟ್ರಿಕ್ ಹಾಜರಾತಿ ಕೊಡಬೇಕಾದ ನೌಕರರು ತಡವಾದ್ದರಿಂದ ತವಗೆ ತೊಂದರೆಯಾಯಿತು ಎಂದು ತಮ್ಮ ಸಮಸ್ಯೆ ಹೇಳಿಕೊಳ್ಳುತ್ತಿದ್ದರು. ಕಡೆಗೆ ಬೆಳಗ್ಗೆ 10.30 ಗಂಟೆ ವೇಳೆಗೆ ಬೇರೆ ಸಾರಿಗೆ ಬಸ್ ಕರೆಸಿ ಪ್ರಯಾಣಿಕರನ್ನು ಅಧಿಕಾರಿಗಳು ಕಳುಹಿಸಿಕೊಟ್ಟರು.

ಅದೇ ಸ್ಥಳದಲ್ಲಿ ಮತ್ತೊಂದು ಅಪಘಾತ: ಇಂಜಿನಿಯರಿಂಗ್ ದೋಷ ಪರಿಶೀಲನೆ

ಮೈಸೂರು, ಜ. 2(ಆರ್‌ಕೆ, ಕೆಕೆ)– ಸಾರಿಗೆ ಬಸ್ ಮತ್ತು ಮಹೀಂದ್ರ ಜೀಪ್ ನಡುವೆ ಡಿಕ್ಕಿಯಾಗಿ ನಾಲ್ವರು ಸಾವನ್ನಪ್ಪಿದ ಹುಣಸೂರಿನ ಆರ್‌ಟಿಓ ಸರ್ಕಲ್ ಸ್ಥಳದಲ್ಲೇ ಇಂದು ಮತ್ತೊಂದು ಅಪಘಾತ ಸಂಭವಿಸಿದೆ. ಬೆಳಗ್ಗೆ 8.30 ಗಂಟೆ ವೇಳೆಗೆ ಒಂದು ಭೀಕರ ಅಪಘಾತ ಸಂಭವಿಸಿದ ಬೆನ್ನಲ್ಲೇ ಬೆಳಗ್ಗೆ 10.35 ಗಂಟೆಗೆ ಅದೇ ಸ್ಥಳದಲ್ಲೇ ಇನ್ನೊಂದು ಅಪಘಾತ ಸಂಭವಿಸಿದೆ. ಕೊಡಗಿನಿಂದ ಮೈಸೂರು ಕಡೆಗೆ ಬರುತ್ತಿದ್ದ ಟೊಯೋಟಾ ಇನ್ನೋವಾ ಕಾರಿಗೆ ಮೈಸೂರಿನಿಂದ ಗೋಣಿಕೊಪ್ಪಗೆ ಹೋಗುತ್ತಿದ್ದ ಸರಕು ಸಾಗಣೆ ವಾಹನವು ಡಿಕ್ಕಿ ಹೊಡೆಯಿತು.

ಆದರೆ ವಾಹನಗಳು ಜಖಂಗೊಂಡವಾದರೂ, ಯಾರಿಗೂ ಗಾಯಗಳಾಗಲಿಲ್ಲ. ಮೊದಲು ಸಂಭವಿಸಿದ್ದ ಅಪಘಾತ ನೋಡುತ್ತಾ ಚಾಲಕ ನಿಧಾನವಾಗಿ ಚಲಿಸುತ್ತಿದ್ದ ಇನ್ನೋವಾಕ್ಕೆ ಸರಕು ಸಾಗಣೆ ವಾಹನ ಡಿಕ್ಕಿ ಹೊಡೆಯಿತು. ಸ್ಥಳದಲ್ಲೇ ಇದ್ದ ಪೊಲೀಸರು ತಕ್ಷಣ ಎರಡೂ ವಾಹನಗಳನ್ನು ತೆರವುಗೊಳಿಸಿ ಟ್ರಾಫಿಕ್ ಜಾಮ್ ಆಗದಂತೆ ಎಚ್ಚರ ವಹಿಸಿದ್ದರು. ಪಟ್ಟಣದ ಆರ್‌ಟಿಓ ಸರ್ಕಲ್ ತಿರುವಿನಿಂದ ಕೂಡಿದ್ದು, ರೋಡ್ ಇಂಜಿನಿಯರಿಂಗ್‌ನಲ್ಲಿ ದೋಷ ಇರುವುದರಿಂದ ಆ ಸ್ಥಳ ಅಪಘಾತ ವಲಯವಾಗಿದೆ. ಕೆಎಸ್‌ಆರ್‌ಟಿಸಿ ಬಸ್ಸುಗಳು, ಲಾರಿಗಳು ಅತೀ ವೇಗವಾಗಿ ಚಲಿಸುವುದರಿಂದ ಅಪಘಾತಗಳು ಸಂಭವಿಸುತ್ತಿವೆ ಎಂದು ಸಾರ್ವಜನಿಕರು ದೂರಿದ್ದಾರೆ. ಅಪಘಾತ ಸ್ಥಳ ಪರಿಶೀಲಿಸಿದ ಎಸ್ಪಿ ಸೀಮಾ ಲಾಟ್ಕರ್, ಎಎಸ್ಪಿ ಡಾ. ಬಿ.ಎನ್.ನಂದಿನಿ, ದೋಷ ಕಂಡುಬಂದ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳನ್ನು ಕರೆಸಿ ತಾಂತ್ರಿಕ ದೋಷ ಸರಿಪಡಿಸುವಂತೆ ಸಲಹೆ ನೀಡಿದರು. ಈ ಸಂಬಂಧ ಸಭೆ ನಡೆಸಿ ಹಿರಿಯ ಅಧಿಕಾರಿಗಳು, ರೋಡ್ ಇಂಜಿನಿಯರಿಂಗ್ ತಜ್ಞರ ಸಲಹೆ ಪಡೆದು ಅಪಘಾತವಾಗದಂತೆ ಆರ್‌ಟಿಓ ಸರ್ಕಲ್ ಸ್ಥಳವನ್ನು ಸರಿಪಡಿಸುವುದಾಗಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಎಸ್ಪಿ ಸೀಮಾ ಲಾಟ್ಕರ್ ಅವರಿಗೆ ಭರವಸೆ ನೀಡಿದ್ದಾರೆ.

ಮಂತ್ರಿಯಾಗುವ ಕನಸು

ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಸರ್ಕಾರಕ್ಕೆ ಪ್ರಾರಂಭದಲ್ಲಿ ಇದ್ದ ವರ್ಚಸ್ಸು ನಂತರದ ಬೆಳವಣಿಗೆಗಳಲ್ಲಿ ಕುಂದುತ್ತಿದೆ ಎಂಬ ಭಾವನೆ ಬಿಜೆಪಿಯಲ್ಲಿದೆ.

ಹಿಂದುಳಿದ ವರ್ಗಗಳ ಆಯೋಗದ ವರದಿ ಅನುಷ್ಠಾನಕ್ಕೆ ಮುಂದಾದುದು, ಲಿಂಗಾಯತ ಹಾಗೂ ಒಕ್ಕಲಿಗರ ಕೆಂಗಣ್ಣಿಗೆ ಸರ್ಕಾರ ಗುರಿಯಾಗಿದೆ. ಈ ಎರಡೂ ಸಮುದಾಯಗಳು ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಬೆಂಬಲಿಸಿದ್ದವು, ಈ ಕಾರಣಕ್ಕೆ ವಿರೋಧವಾಗುವುದರ ಜೊತೆಗೆ ಅತಿಯಾಗಿ ಅಲ್ಪಸಂಖ್ಯಾತರನ್ನು ಓಲೈಸುತ್ತಿರುವುದು ಉಳಿದ ಸಮಾಜಗಳವರಿಗೆ ಕಿರಿಕಿರಿ ಉಂಟು ಮಾಡಿದೆ.

ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಗುಂಗಿನಲ್ಲಿ ಉಳಿದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ಕೊಡುತ್ತಿಲ್ಲ, ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಮೂಲಸೌಕರ್ಯ ಕಾರ್ಯಗಳನ್ನೂ ಕೈಗೆತ್ತಿಕೊಳ್ಳಲಾಗುತ್ತಿಲ್ಲ, ಇದು ಮತದಾರರಲ್ಲಿ ಬೇಸರ ಮೂಡಿಸಿದೆ. ಅಧಿಕಾರಕ್ಕೆ ಬರುತ್ತಿದ್ದಂತೆ ವರ್ಗಾವರ್ಗಿ ದಂಧೆಯೂ ಜನರ ಅಸಮಾಧಾನಕ್ಕೆ ಕಾರಣವಾಗಿದೆ. ಇದೆಲ್ಲದಕ್ಕೂ ಮಿಗಿಲಾಗಿ ಮತ್ತೆ ರಾಷ್ಟ್ರದಲ್ಲಿ ಸದೃಢ ಸರ್ಕಾರ ತರಲು ನರೇಂದ್ರ ಮೋದಿ ಅವರನ್ನೇ ಬೆಂಬಲಿಸಬೇಕೆಂಬ ಹುಮ್ಮಸ್ಸು ಮತದಾರರಲ್ಲಿ ಕಂಡುಬರುತ್ತಿದೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡೇ ಅಧಿಕಾರ ಇಲ್ಲದೆ ಮನೆಯಲ್ಲಿರುವ ಬಿಜೆಪಿ ನಾಯಕರು ಲೋಕಸಭಾ ಟಿಕೆಟ್‌ಗಾಗಿ ಪೈಪೋಟಿ ನಡೆಸಿದ್ದಾರೆ.

8 ಅಡಿ ಎತ್ತರವಿದೆ

ವಿಗ್ರಹ ಕೆತ್ತನೆಯ ಶಿಲ್ಪಿ (ಮುಖ್ಯ ಶಿಲ್ಪಿ) ಅರುಣ್ ಯೋಗಿರಾಜ್ ಅವರಾಗಿದ್ದು, ಅವರ ನೇತೃತ್ವದ ವಿಗ್ರಹ ಕೆತ್ತನೆಯಲ್ಲಿ ನಾನೂ ಸೇರಿದಂತೆ 6 ಮಂದಿ ಶಿಲ್ಪಿಗಳು ಭಾಗಿಯಾಗಿದ್ದೆವು. ಒಟ್ಟು 6 ತಿಂಗಳು ಅಯೋಧ್ಯೆಯಲ್ಲಿ ಕೆತ್ತನೆ ಕೆಲಸದಲ್ಲಿ ಅರುಣ್ ಅವರಿಗೆ ಸಹಕಾರ ನೀಡಿದೆವು. ಎಲ್ಲಾ 6 ಮಂದಿ ಮೈಸೂರಿನವರೇ ಎಂದು ತಿಳಿಸಿದರು.

ವಿಗ್ರಹ ಒಟ್ಟು 8 ಅಡಿ (96 ಇಂಚು) ಇದ್ದು, ರಾಮಲಲ್ಲಾನ ಕಾಲಿನ ಹೆಬ್ಬೆಟ್ಟಿನಿಂದ ಹಣೆ ತುದಿಯವರೆಗೆ 51 ಇಂಚು ಅಳತೆ ಇದೆ. ಉಳಿದ ಇಬ್ಬರು ಶಿಲ್ಪಿಗಳು ಮಾಡಿರುವುದೂ ಅದೇ ಅಳತೆಯ (ಕಾಲಿನ ಹೆಬ್ಬೆಟ್ಟಿನಿಂದ ಹಣೆ ತುದಿಯವರೆಗೆ) ವಿಗ್ರಹಗಳಾಗಿವೆ. ಇದೇ ಅಳತೆ ಪಾಲನೆ ಮಾಡಬೇಕೆಂಬ ಸೂಚನೆಯನ್ನು ನೀಡಲಾಗಿತ್ತು. ಮೂವರು ಶಿಲ್ಪಿಗಳು ಕೆತ್ತನೆ ಮಾಡಿರುವ ಮೂರು ಪ್ರತ್ಯೇಕ ರಾಮಲಲ್ಲಾ ವಿಗ್ರಹಗಳಲ್ಲಿ ಅಧಿಕೃತ ಆಯ್ಕೆ ಪ್ರಕಟಿಸಿಲ್ಲ. ಯಾವುದೇ ವಿಗ್ರಹದ ಫೋಟೋ ಬಿಡುಗಡೆ ಮಾಡಿಲ್ಲ. ನಮ್ಮ ಬಳಿ ಇದ್ದರೂ ಅವುಗಳನ್ನು ಹಂಚಿಕೊಳ್ಳಲು ಅವಕಾಶವಿಲ್ಲ. ನಾವು 6 ಮಂದಿ ಕಳೆದ ಡಿ.10ರಂದು ಅಯೋಧ್ಯೆಯಿಂದ ಮೈಸೂರಿಗೆ ಮರಳಿದೆವು ಎಂದು ಹೇಳಿದರು.

ಅರುಣ್ ಯೋಗಿರಾಜ್ ಅಯೋಧ್ಯೆಯಲ್ಲೇ ಇದ್ದಾರೆ. ಜ.1ರಂದೇ ಆಯ್ಕೆ ಪ್ರಕ್ರಿಯೆ ನಡೆದು ಅರುಣ್ ಯೋಗಿರಾಜ್ ಅವರ ಕೆತ್ತನೆಯ ವಿಗ್ರಹ ಆಯ್ಕೆಯಾಗಿದೆ ಎಂದು ಹೇಳಲಾಗುತ್ತಿದೆ. ಅರುಣ್ ಕೆತ್ತನೆಯ ವಿಗ್ರಹವೇ ಪ್ರತಿಷ್ಠಾಪನೆಯಾಗುವ ವಿಶ್ವಾಸ ನಮಗೂ ಇದೆ. ನಮಗೆ ರಾಮಲಲ್ಲಾ ವಿಗ್ರಹ ಕೆತ್ತನೆಯಲ್ಲಿ ಅವಕಾಶ ಸಿಕ್ಕಿದ್ದೇ ಪುಣ್ಯ. ಈ ಅವಕಾಶಕ್ಕಾಗಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಕೃತಜ್ಞತೆ ಸಲ್ಲಿಸುತ್ತೇವೆ ಎಂದು ತಿಳಿಸಿದರು. ಬಾಲ ರಾಮನ ವಿಗ್ರಹವನ್ನು ಈ ಹಿಂದೆ ಯಾರೂ ಕೆತ್ತನೆ ಮಾಡಿಲ್ಲ. ಹಾಗಾಗಿ ಅರುಣ್ ಅವರು ಸಾಕಷ್ಟು ತಲೆಕೆಡಿಸಿಕೊಂಡು ಕೆತ್ತನೆ ಮಾಡಿದ್ದಾರೆ. ಬಾಲರಾಮನ ವಿಗ್ರಹದ ಪೀಠದಲ್ಲಿ ನವಗ್ರಹ ಮೂಡಿಸಿದ್ದು, ವಿಗ್ರಹ ಅದ್ಭುತವಾಗಿ ಮೂಡಿ ಬಂದಿದೆ. ಕೆತ್ತನೆ ಕಾರ್ಯದ ಹಿನ್ನೆಲೆಯಲ್ಲಿ ನಮಗೆ ವಸತಿ ಸೇರಿದಂತೆ ಎಲ್ಲಾ ಸೌಲಭ್ಯ ಕಲ್ಪಿಸಿದ್ದರು. ಕೆತ್ತನೆ ಕಾರ್ಯಕ್ಕೆ ಪ್ರತ್ಯೇಕ ಸ್ಥಳದಲ್ಲಿ ಅವಕಾಶ ಕಲ್ಪಿಸಿದ್ದರು. ಇನ್ನೆರಡು ವಿಗ್ರಹ ಕೆತ್ತನೆ ಮಾಡಿದವರು 7 ತಿಂಗಳಲ್ಲಿ ವಿಗ್ರಹ ಕೆತ್ತನೆ ಪೂರ್ಣಗೊಳಿಸಿದ್ದಾರೆ. ನಾವು 6 ತಿಂಗಳಲ್ಲೇ ಪೂರ್ಣಗೊಳಿಸಿದ್ದೇವೆ ಎಂದರು.

ಹಿರಿಯ ನಾಗರಿಕರು ಕಂಗಾಲು

ಸುರಕ್ಷಿತ ಹಾಗೂ ಗುಣಮಟ್ಟದ ಆರೈಕೆ ಹಾಗೂ ಸೇವೆ ಕಲ್ಪಿಸುವ ಭರವಸೆಯನ್ನು ನಂಬಿ ಹಿರಿಯರು ಇಲ್ಲಿ ನೆಲೆ ಕಂಡುಕೊಂಡಿದ್ದಾರೆ. ವೃತ್ತಿ ಜೀವನದಲ್ಲಿ ಸಂಪಾದಿಸಿದ ಹಣ, ನಿವೃತ್ತಿ ವೇಳೆ ಸಿಕ್ಕ ಹಿಡಿಗಂಟು ಎಲ್ಲವನ್ನೂ ಕೂಡಿಸಿ ಈ ಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್ ಖರೀದಿಸಿದ್ದಾರೆ. ಆದರೆ ನಿವೃತ್ತಿ ನಂತರ ನೆಮ್ಮದಿಯಿಂದ ಬದುಕು ನಡೆಸುವ ಇವರ ಆಸೆ ಕೈಗೂಡುವ ಬದಲು, ಆತಂಕದಲ್ಲೇ ಕಾಲದೂಡುವಂತಾಗಿದೆ. ಆರಂಭದಿಂದಲೂ ಒಂದಲ್ಲಾ ಒಂದು ಸಮಸ್ಯೆ ಎದುರಿಸುತ್ತಲೇ ಇದ್ದಾರೆ. ಇದೀಗ ಹೊಸ ವರ್ಷದ ಎರಡನೇ ದಿನವೇ ಪಾಲಿಕೆ ಬ್ಯಾನರ್‌ನಿಂದ ಆಘಾತಕ್ಕೀಡಾಗಿದ್ದಾರೆ.

ಅಪಾರ್ಟ್‌ಮೆಂಟ್‌ನಲ್ಲಿ ಸುಮಾರು 70 ಫ್ಲಾಟ್‌ಗಳಿವೆ ಎನ್ನಲಾಗಿದೆ. ಇಲ್ಲಿ 70ರಿಂದ 92 ವಯಸ್ಸಿನ ಸುಮಾರು 48 ಮಂದಿ ಹಿರಿಯರು ನೆಲೆಸಿದ್ದಾರೆ. ದಂಪತಿಗಳು, ಕೆಲವರು ಏಕಾಂಗಿಯಾಗಿದ್ದಾರೆ. ಈ ವಯೋಮಾನದಲ್ಲಿ ಆರೋಗ್ಯ ಕಾಪಾಡಿಕೊಳ್ಳುವುದೇ ದೊಡ್ಡ ಸವಾಲು. ವಯೋ ಸಹಜ ಆರೋಗ್ಯ ಸಮಸ್ಯೆಗಳನ್ನು ನಿರ್ವಹಿಸಿಕೊಳ್ಳುವುದೇ ಕಷ್ಟ, ಈ ಪರಿಸ್ಥಿತಿಯಲ್ಲಿ ತಮ್ಮ ನೆಲೆ ಬಗ್ಗೆ ಈ ರೀತಿಯ ಗೊಂದಲ ಸೃಷ್ಟಿಯಾದರೆ ಹಿರಿಯ ಜೀವಗಳು ಹೇಗೆ ಸಹಿಸಲು ಸಾಧ್ಯ?. ಜೀವಮಾನದ ಸಂಪಾದನೆಯಲ್ಲಿ ಖರೀದಿಸಿರುವ ಫ್ಲಾಟ್‌ನಲ್ಲಿ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ ಎಂದರೆ ಅವರ ಮನಸ್ಸಿಗೆ ಯಾವ ಪರಿ ಘಾಸಿಯಾಗಿರಬೇಕು?. ಅವರ ಪರಿಸ್ಥಿತಿಯಲ್ಲಿ ನಮ್ಮನ್ನು ಕಲ್ಪಿಸಿಕೊಂಡರೆ ಸ್ವಲ್ಪ ಮಟ್ಟಿಗೆ ಅರಿವಾಗಬಹುದು.

ಹಿಂದೆಯೂ ಹೀಗೆ ಆಗಿತ್ತು: ಪಾಲಿಕೆ ಅಧಿಕಾರಿಗಳು 2021ರ ಅಕ್ಟೋಬರ್‌ನಲ್ಲಿ ಇದೇ ರೀತಿಯ ನೋಟಿಸ್ ಅಳವಡಿಸಿದ್ದರಲ್ಲದೆ ಅಪಾರ್ಟ್‌ಮೆಂಟ್ ಗೇಟ್‌ಗೆ ಬೀಗ ಹಾಕಿ ನಿವಾಸಿಗಳಲ್ಲಿ ಆತಂಕ ಹುಟ್ಟಿಸಿದ್ದರು. ಇದರಿಂದ ವಿಚಲಿತರಾದ ಹಿರಿಯರು ದಿಕ್ಕು ತೋಚದೆ ಪರಿತಪಿಸಿದ್ದರು. ಆದರೆ ಕೋವಿಡ್ ಕಾಲಘಟ್ಟವಾಗಿದ್ದರಿಂದ ಪಾಲಿಕೆ ಆಯುಕ್ತರು, ತಮ್ಮ ಅಧಿಕಾರಿಗಳಿಗೆ ಸೂಚನೆ ನೀಡಿ, ಗೇಟ್ ಬೀಗ ತೆಗೆಸಿದ್ದರು.

ಖಾತೆ ಬದಲಾವಣೆಯೂ ಆಗಿಲ್ಲ: ತಪೋವನ ಸೋಲೇಸ್ ಅಪಾರ್ಟ್‌ಮೆಂಟ್‌ನ ಆಸ್ತಿ ತೆರಿಗೆಯನ್ನು 2018–19ನೇ ಸಾಲಿನಿಂದಲೂ ಪಾವತಿಸಿಲ್ಲ. ಈ ಬಗ್ಗೆ ಮಾಲೀಕರಿಗೆ ಹಲವು ಬಾರಿ ನೋಟಿಸ್ ನೀಡಿದ್ದರೂ ಬಾಕಿ ಪಾವತಿಸದ ಕಾರಣ ಅಂತಿಮ ನೋಟೀಸ್ ಬಳಿಕ ಜಪ್ತಿ ಎಚ್ಚರಿಕೆಯ ಸೂಚನಾ ಫಲಕ ಅಳವಡಿಸಲಾಗಿದೆ. ತೆರಿಗೆ ಬಾಕಿ ಇರುವ ಕಾರಣದಿಂದ ಅಲ್ಲಿನ ನಿವಾಸಿಗಳಿಗೆ ಖಾತೆ ವರ್ಗಾವಣೆಯೂ ಆಗಿಲ್ಲ ಎಂದು ಪಾಲಿಕೆ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಲಕ್ಷಾಂತರ ರೂಪಾಯಿ ಪರಿಷ್ಕೃತ ಬಾಡಿಗೆ ಬಾಕಿ ಹಿನ್ನೆಲೆ

ಮೈಸೂರು ಪಾಲಿಕೆಯ ಎಸ್‌ಬಿಐ ಶಾಖೆಗೆ ಬೀಗ

● 5,200 ರೂಪಾಯಿ ಮಾತ್ರ ಬಾಡಿಗೆ ಪಾವತಿ ● ಹಾಲಿ ಬಾಡಿಗೆ ಮಾಸಿಕ 25,000 ಆಗಿದೆ ● ಹಿಂದಿನ ಪರಿಷ್ಕೃತ ಬಾಡಿಗೆ ಬಾಕಿ ಮೊತ್ತ 17 ಲಕ್ಷ ● ದಿಢೀರ್ ಬೀಗ; ಬ್ಯಾಂಕ್ ಅಧಿಕಾರಿಗಳಿಗೆ ತಟ್ಟಿದ ಬಿಸಿ ● ಹಣ ಡ್ರಾ ಮಾಡಲು ನೌಕರರು, ಪಿಂಚಣಿದಾರರ ಪರದಾಟ

ಮೈಸೂರು, ಜ.2(ಬಿಎಲ್‌ಯು)– ಲಕ್ಷಾಂತರ ರೂಪಾಯಿ ಬಾಡಿಗೆ ಬಾಕಿ ಉಳಿಸಿಕೊಂಡಿರುವ ಹಿನ್ನೆಲೆಯಲ್ಲಿ ಮೈಸೂರು ನಗರಪಾಲಿಕೆಯ ಪ್ರಧಾನ ಕಚೇರಿಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಶಾಖೆಗೆ ಇಂದು ನಗರ ಪಾಲಿಕೆ ಅಧಿಕಾರಿಗಳು ದಿಢೀರ್ ಬೀಗ ಜಡಿದರು.



ಇಂದು ಬೆಳಿಗ್ಗೆ 9.30 ಗಂಟೆಗೆ ಬ್ಯಾಂಕ್ ಬಾಗಿಲು ತೆರೆದು ಸಿಬ್ಬಂದಿ ಇನ್ನೇನು ಕಾರ್ಯಾರಂಭ ಮಾಡಬೇಕು ಎನ್ನುವಾಗಲೇ ನಗರಪಾಲಿಕೆ ಅಧಿಕಾರಿಗಳು ದಿಢೀರ್ ಧಾವಿಸಿ, ಸಿಬ್ಬಂದಿಗಳನ್ನು ಹೊರಗೆ ಕಳುಹಿಸಿ ಬ್ಯಾಂಕ್‌ಗೆ ಬೀಗ ಹಾಕಿದರು.

ಮೈಸೂರು ನಗರಪಾಲಿಕೆಯ ಹಣಕಾಸು ವ್ಯವಹಾರಕ್ಕೆ ಅನುಕೂಲವಾಗಲೆಂದು 1974ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಶಾಖೆ ತೆರೆಯಲು ಅವಕಾಶ ಮಾಡಿಕೊಡಲಾಗಿತ್ತು. ಅದು ನಂತರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ವಿಲೀನವಾಗಿದೆ.

ನಗರಪಾಲಿಕೆಯ ನೌಕರರು, ಪಿಂಚಣಿದಾರರು, ಗುತ್ತಿಗೆದಾರರು ಸೇರಿದಂತೆ 5000 ಮಂದಿ ಇಲ್ಲಿ ಖಾತೆ ಹೊಂದಿದ್ದಾರೆ. ನಗರಪಾಲಿಕೆ ನೌಕರರ ವೇತನ, ಪಿಂಚಣಿ ಹಾಗೂ ಗುತ್ತಿಗೆದಾರರ ವ್ಯವಹಾರ ವೆಲ್ಲಾ ಇದೇ ಬ್ಯಾಂಕ್‌ನಲ್ಲಿ ನಡೆಯುತ್ತದೆ. ಇದಲ್ಲದೆ ಬಹಳಷ್ಟು ಸಾರ್ವಜನಿಕರ ಖಾತೆಗಳು ಇಲ್ಲಿವೆ.

ಸುಮಾರು 3 ಸಾವಿರ ಚದರ ಅಡಿ ಜಾಗವನ್ನು ಬ್ಯಾಂಕ್‌ಗಾಗಿ ಈ ಹಿಂದೆ 5,200 ರೂಪಾಯಿಗೆ ಬಾಡಿಗೆಗೆ ನೀಡಲಾಗಿತ್ತು. ಹಲವು ವರ್ಷಗಳಿಂದ ಬ್ಯಾಂಕ್ ಈ ಮೊತ್ತದ ಬಾಡಿಗೆಯನ್ನೇ ಪಾವತಿ ಮಾಡುತ್ತಾ ಬಂದಿತ್ತು. ಆದರೆ ನಗರಪಾಲಿಕೆ ಮಾತ್ರ ಕರಾರಿನನ್ವಯ ಕಾಲಾನುಕಾಲಕ್ಕೆ ಬಾಡಿಗೆ ಪರಿಷ್ಕರಿಸಿದ್ದು, ಅದರಂತೆ ಈಗ ತಿಂಗಳಿಗೆ 25 ಸಾವಿರ ರೂಪಾಯಿ ಪಾವತಿ ಮಾಡಬೇಕಿತ್ತು. ಪರಿಷ್ಕೃತ ಬಾಡಿಗೆ ದರ ಪಾವತಿ ಮಾಡದೇ ಇರುವುದಕ್ಕೆ ನಗರಪಾಲಿಕೆಯ ಹಿಂದಿನ ಆಯುಕ್ತರು ಈ ಸಂಬಂಧ ಆಗಾಗ ನೋಟಿಸ್ ಜಾರಿ ಮಾಡಿದ್ದರು.

> ❝ನಗರಪಾಲಿಕೆಗೆ ನೀಡಬೇಕಿರುವ ಪರಿಷ್ಕೃತ ಬಾಡಿಗೆ ಬಾಕಿ ಬಗ್ಗೆ ಮೇಲಾಧಿಕಾರಿಗಳಿಗೆ ವಿವರಿಸಿದ್ದೇನೆ. ಪರಿಷ್ಕೃತ ಬಾಡಿಗೆ ಬಾಕಿ ಮೊತ್ತ 17 ಲಕ್ಷ ರೂಪಾಯಿ ಡಿಡಿ ನೀಡಲು ಮೇಲಾಧಿಕಾರಿಗಳು ಸಮ್ಮತಿಸಿದ್ದಾರೆ. ಆದಷ್ಟು ಬೇಗ ಬಾಕಿ ಪಾವತಿ ಮಾಡಲಾಗುವುದು. ಇನ್ನು ಮುಂದೆ ಹೀಗೆ ಆಗದಂತೆ ಕ್ರಮ ವಹಿಸಲಾಗುವುದು.
> ಪರಿಷ್ಕೃತ ಬಾಡಿಗೆ ಕುರಿತಂತೆ ಕೆಲವೇ ದಿನದಲ್ಲಿ ನಗರಪಾಲಿಕೆ ಹಾಗೂ ಬ್ಯಾಂಕ್ ನಡುವೆ ಕರಾರು ಒಪ್ಪಂದ ಪ್ರಕ್ರಿಯೆಗಳು ನಡೆಯಲಿವೆ.
> – **ವೆಂಕಟರಾಜು**, ವ್ಯವಸ್ಥಾಪಕ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಆದರೆ ಬ್ಯಾಂಕ್ ಅಧಿಕಾರಿಗಳು ಹಳೆ ಬಾಡಿಗೆ ಬಿಟ್ಟು, ಅಲ್ಲಿಂದಲೂ ಪರಿಷ್ಕರಣೆಗೊಂಡ ಬಾಡಿಗೆ ಮೊತ್ತ ಪಾವತಿ ಮಾಡಲು ಹಿಂದೇಟು ಹಾಕಿದ್ದರು. ಹಾಗಾಗಿ ನಮಗೇ ಸ್ಥಳಾವಕಾಶದ ಅವಶ್ಯಕತೆ ಇದೆ ಎಂಬ ಕಾರಣ ನೀಡಿ, ಖಾಲಿ ಮಾಡುವಂತೆ ಹಿಂದಿನ ನಗರ ಪಾಲಿಕೆ ಆಯುಕ್ತರು ನೋಟಿಸ್ ಜಾರಿ ಮಾಡಿದ್ದರು.

ಹಿಂದಿನ ಯಾವ ಆಯುಕ್ತರ ಆದೇಶಕ್ಕೂ ಕ್ಯಾರೆ ಎನ್ನದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳು 5,200 ರೂಪಾಯಿ ಬಾಡಿಗೆ ಮಾತ್ರ ಪಾವತಿ ಮಾಡುತ್ತಾ ಬಂದಿದ್ದರು.

ಇದರಿಂದ ಪರಿಷ್ಕರಣೆಗೊಂಡ ಬಾಡಿಗೆ ಬಾಕಿ ಮೊತ್ತ 17 ಲಕ್ಷ ರೂಪಾಯಿ ಆಗಿತ್ತು. ದಿನ ಕಳೆದಂತೆ ಈ ಮೊತ್ತ ಏರುತ್ತಾ ಹೋಗುತ್ತಿದ್ದರೂ ಬ್ಯಾಂಕ್ ಅಧಿಕಾರಿಗಳು ಮಾತ್ರ ಕೇರ್ ಮಾಡದೆ ಇದ್ದರು. ಹಾಗಾಗಿ ನೋಟಿಸ್ ನೀಡಿದ್ದರೂ ಸ್ಪಂದಿಸಿರಲಿಲ್ಲ.

ಈ ಹಿನ್ನೆಲೆಯಲ್ಲಿ ಪಾಲಿಕೆ ಹಾಲಿ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಬ್ಯಾಂಕ್‌ಗೆ ಬೀಗ ಹಾಕುವಂತೆ ಆದೇಶ ನೀಡಿದರು. ಇಂದು ಬೆಳಿಗ್ಗೆ ನಗರಪಾಲಿಕೆ ಅಧಿಕಾರಿಗಳು ದಿಢೀರ್ ಬ್ಯಾಂಕ್ ಸಿಬ್ಬಂದಿ ಹೊರಗೆ ಕಳುಹಿಸಿ ಬ್ಯಾಂಕ್‌ಗೆ ಬೀಗ ಜಡಿದರು.

ನಗರ ಪಾಲಿಕೆ ಅಧಿಕಾರಿಗಳು ದಿಢೀರ್ ಕೈಗೊಂಡ ಕ್ರಮದಿಂದ ಬ್ಯಾಂಕ್ ಸಿಬ್ಬಂದಿ ಗೊಂದಲಕ್ಕೀಡಾದರು. ತಿಂಗಳಾರಂಭದ 2ನೇ ದಿನವಾದ ಕಾರಣ ವೇತನ ಪಡೆಯುವ ನೌಕರರು, ಪಿಂಚಣಿ ಪಡೆಯುವವರು ಸೇರಿದಂತೆ ಇತರರು ಹಣ ಡ್ರಾ ಮಾಡಲು ಸಾಧ್ಯವಾಗದೆ ಪರದಾಡಿದ ದೃಶ್ಯ ಸಾಮಾನ್ಯವಾಗಿತ್ತು.

ಮೇಲಾಧಿಕಾರಿಗಳಿಗೆ ಈ ವಿಚಾರ ತಿಳಿಸಿ ಕೂಡಲೇ ಬಾಡಿಗೆ ಪಾವತಿ ಮಾಡಲಾಗುವುದು. ಸದ್ಯಕ್ಕೆ ಬ್ಯಾಂಕ್ ಬೀಗ ತೆಗೆಸಿ ಎಂದು ಬ್ಯಾಂಕ್ ವ್ಯವಸ್ಥಾಪಕ ವೆಂಕಟರಾಜು ಮನವಿ ಮಾಡಿದರೂ ನಗರಪಾಲಿಕೆ ಅಧಿಕಾರಿಗಳು ಜಗ್ಗಲಿಲ್ಲ. ಬಾಡಿಗೆ ಪಾವತಿ ಮಾಡುವ ತನಕ ಯಾವುದೇ ಕಾರಣಕ್ಕೂ ಬೀಗ ತೆಗೆಯುವುದಿಲ್ಲ ಎಂದು ಪಟ್ಟು ಹಿಡಿದರು. ತರುವಾಯ ಮೇಲಾಧಿಕಾರಿಗಳು ಆಶಾದ್ ಉರ್ ರೆಹಮಾನ್ ಷರೀಫ್ ಜೊತೆ ಮಾತುಕತೆ ನಡೆಸಿ ಕೂಡಲೇ 17 ಲಕ್ಷ ರೂಪಾಯಿ ಡಿಡಿ ನೀಡುವುದಾಗಿ ಭರವಸೆ ನೀಡಿದ್ದರಿಂದ ಮಧ್ಯಾಹ್ನದ ವೇಳೆಗೆ ಬ್ಯಾಂಕ್ ಬೀಗ ತೆಗೆಯಲಾಯಿತು.

57ನೇ ದಿನಕ್ಕೆ ಕಾವೇರಿ ಕ್ರಿಯಾ ಸಮಿತಿ ಹೋರಾಟ



ಮೈಸೂರು, ಜ.2(ಜಿಎ)– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಪ್ರತಿಭಟನೆ ಮಂಗಳವಾರ 57ನೇ ದಿನಕ್ಕೆ ಕಾಲಿಟ್ಟಿದೆ.

ನಗರದ ದೊಡ್ಡ ಗಡಿಯಾರದ ಬಳಿ ಪ್ರತಿಭಟನಾಕಾರರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮೆಲ್ಲಹಳ್ಳಿ ಮಹಾದೇವಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಸರಿಯಾದ ಮಳೆಯಾಗದೆ ಕಾವೇರಿ ಕೊಳ್ಳದ ಜಲಾಶಯಗಳು ಬರಿದಾಗುತ್ತಿವೆ. ಈಗಾಗಲೇ ಕೃಷಿಗೆ ನೀರಿಲ್ಲದೆ ಭತ್ತ ಬೆಳೆಯದ ಕಾರಣ ಅಕ್ಕಿಯ ಬೆಲೆ ಗಗನಕ್ಕೇರಿದೆ. ಬೆಂಗಳೂರು–ಮೈಸೂರು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವ ಶುರುವಾಗಿದೆ. ರಾಜ್ಯ ಸರ್ಕಾರ ಈ ಕೂಡಲೇ ಎಚ್ಚೆತ್ತುಕೊಳ್ಳದಿದ್ದರೆ ಕುಡಿಯುವ ನೀರಿಗೂ ತೊಂದರೆಯಾಗುತ್ತದೆ. ಈ ವಿಚಾರವನ್ನು ಕೇಂದ್ರ ಸರ್ಕಾರ ಹಾಗೂ ಕಾವೇರಿ ನ್ಯಾಯ ಮಂಡಳಿ ಗಮನಕ್ಕೆ ತಂದು ಕೂಡಲೇ ತಮಿಳುನಾಡಿಗೆ ನೀರು ಬಿಡುತ್ತಿರುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಉಪಾಧ್ಯಕ್ಷ ಎಂ.ಜಿ.ಸುರೇಶ್ ಗೌಡ, ರಾಜ್ಯ ರೈತ ಸಂಘದ ವರಕೂಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ಗಾಣಿಗನಕೊಪ್ಪಲು ನಾಗರಾಜು, ಕರ್ನಾಟಕ ಸೇನಾಪಡೆಯ ತೇಜೇಶ್ ಲೋಕೇಶ್ ಗೌಡ, ಹನುಮಂತಯ್ಯ, ಪ್ರಭಾಕರ್, ಕೃಷ್ಣಪ್ಪ, ರಾಜಕುಮಾರ್ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಎಸ್.ಬಾಲಕೃಷ್ಣ, ನೇಹಾ, ದೇವರಾಜ್ ಶುಭಶ್ರೀ, ವಿಷ್ಣು ಆರ್.ಮಂಜುಳಾ, ಪುಷ್ಪವತಿ, ಎನ್.ಮಂಜುಳಾ, ಬಿಜೆಪಿ ಮುಖಂಡರಾದ ಕುಮಾರ್, ಕೃಷ್ಣೇಗೌಡ, ಗಗನ್ ಗೌಡ, ಮಹೇಶ್ ಗೌಡ, ಅಶೋಕ್, ಕೃಷ್ಣ ಸೇರಿದಂತೆ ಹಲವರು ಭಾಗವಹಿಸಿದ್ದರು.

ಜ.5, ಕೇವಲಿನ್ ಚಾರಿಟಬಲ್ ಟ್ರಸ್ಟ್ ಉದ್ಘಾಟನೆ



ಮೈಸೂರು, ಜ.2(ಜಿಎ)–ಮೈಸೂರಿನ ದೇವಯ್ಯನಹುಂಡಿ ಮುಖ್ಯ ರಸ್ತೆಯಲ್ಲಿರುವ ಮಹಾವೀರ ಭವನದಲ್ಲಿ ಕೇವಲಿನ್ ಚಾರಿಟಬಲ್ ಟ್ರಸ್ಟ್ ಸಂಸ್ಥೆಯ ಉದ್ಘಾಟನಾ ಸಮಾರಂಭ ಜ.5ರಂದು 9.30ಕ್ಕೆ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷೆ ಬಿ.ಸೀಮಂತಿನಿ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನಕಗಿರಿ ಜೈನ ಮಠದ ಭುವನ ಕೀರ್ತಿ ಭಟ್ಟಾರಕ ಸ್ವಾಮೀಜಿ ಟ್ರಸ್ಟ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜೀವಧಾರ ರಕ್ತ ನಿಧಿ ಮತ್ತು ಡಯಾಗ್ನೋಸ್ಟಿಕ್ ಸೆಂಟರ್ ವ್ಯವಸ್ಥಾಪಕ ನಿರ್ದೇಶಕ ಎಸ್.ಗಿರೀಶ್, ಮಹಾವೀರ ಭವನದ ಅಧ್ಯಕ್ಷ ಬಿ.ಎಸ್. ಸಂತೋಷ್ ಭಾಗವಹಿಸುವರು ಎಂದರು.

ಬುದ್ಧಿಮಾಂದ್ಯ ಮಕ್ಕಳು ಹಾಗೂ ಅವರ ಪೋಷಕರನ್ನು ಸಶಕ್ತರನ್ನಾಗಿ ಮಾಡುವುದು, ದಿವ್ಯಾಂಗತೆ ಬಗ್ಗೆ ಅರಿವು ಮೂಡಿಸುವುದು, ಕುಟುಂಬಗಳಿಗೆ ಮತ್ತು ಆರೈಕೆದಾರರಿಗೆ ಮಾರ್ಗದರ್ಶನ ಬೆಂಬಲ ಒದಗಿಸುವುದು, ಜಾಗೃತಿ ಅಭಿಯಾನ ನಡೆಸುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಸಮಾರಂಭದಲ್ಲಿ ಬೆಳಿಗ್ಗೆ 10ರಿಂದ 1ರವರೆಗೆ ಉಚಿತ ತಪಾಸಣೆ ಹಾಗೂ ಸಮಾಲೋಚನೆ ನಡೆಯಲಿದೆ ಎಲ್ಲರೂ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ 84315 81823 ಸಂಪರ್ಕಿಸಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಸುನಿಲ್ ಕುಮಾರ್ ಎಂ.ಆರ್.ಕಾರ್ಯದರ್ಶಿ ಪ್ರತಿಭಾ ಮಂಜುನಾಥ್, ಖಜಾಂಚಿ ಲಕ್ಷ್ಮೀಶ್ ಬಾಬು, ಸಹ ಕಾರ್ಯದರ್ಶಿ ಹರ್ಷಿತ್, ಅಜಯ್ ಉಪಸ್ಥಿತರಿದ್ದರು.

ಜ.6, ನವ ಸಂಭ್ರಮ ಸಂಗೀತ ನೃತ್ಯ



ಮೈಸೂರು, ಜ.2(ಜಿಎ)–ಮೈಸೂರಿನ ವಿ.ವಿ.ಕ್ರಿಯೇಷನ್ ವತಿಯಿಂದ ಹೊಸ ವರ್ಷದ ಅಂಗವಾಗಿ ಜಾನಪದ ಕಲಾವಿದರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಜ.6ರಂದು ಸಂಜೆ 4 ಗಂಟೆಗೆ ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಎಂಬಿಸಿಟಿ ಆಡಿಟೋರಿಯಂನಲ್ಲಿ ನವ ಸಂಭ್ರಮ ಸಂಗೀತ ನೃತ್ಯ ಸಂಗಮ ಮನರಂಜನಾತ್ಮಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕ್ರಿಯೇಷನ್‌ನ ಸಂಸ್ಥಾಪಕಿ ವಿಮಲ ವೀರೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಮೈಸೂರು ಬಿಲ್ಡರ್ ಅಸೋಸಿಯೇಷನ್‌ನ ನಾಗರಾಜ್ ಭೈರಿ, ಮಡಿಲು ಸೇವಾ ಟ್ರಸ್ಟ್ ಸಂಸ್ಥಾಪಕ ಲೋಕರಾಜ್ ಅರಸ್, ಗೌತಮ್ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಜಾನಪದ ಪ್ರಕಾರಗಳಾದ ಕಂಸಾಳೆ, ಡೊಳ್ಳು ಕುಣಿತ, ತಮಟೆ, ಜನಪದ ಗಾಯನ ಹಾಗೂ ನೃತ್ಯ, ಬುಡಕಟ್ಟು ಸಮುದಾಯದ ನೃತ್ಯವನ್ನು ಕಲಾವಿದರು ಪ್ರದರ್ಶಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಮ್ಯ ಆನಂದ್, ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಸಂಸತ್ ಭವನದ ಭದ್ರತಾ ಲೋಪ ಪ್ರಕರಣ

ಮೈಸೂರಿನ ಮನೋರಂಜನ್ ಸೇರಿ 6 ಆರೋಪಿಗಳಿಗೆ ಪಾಲಿಗ್ರಾಫ್ ಟೆಸ್ಟ್; ಅರ್ಜಿ ವಿಚಾರಣೆ ಜ.5ಕ್ಕೆ ಮುಂದೂಡಿಕೆ

ಮೈಸೂರು, ಜ.2(ಬಿಎಲ್‌ಯು)– ಸಂಸತ್ ಭವನಕ್ಕೆ ನುಗ್ಗಿ ಲೋಕಸಭೆ ಕಲಾಪ ವೇಳೆ ಕಲರ್ ಸ್ಮೋಕ್ ಸ್ಫೋಟಿಸಿದ ಪ್ರಕರಣದಲ್ಲಿ ಮೈಸೂರಿನ ಮನೋರಂಜನ್ ಸೇರಿದಂತೆ ಆರು ಜನರನ್ನು ಪಾಲಿಗ್ರಾಫ್ (ಸುಳ್ಳು ಪತ್ತೆ) ಟೆಸ್ಟ್‌ಗೆ ಒಳಪಡಿಸಲು ಪೊಲೀಸರು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ದೆಹಲಿಯ ಪಾಟಿಯಾಲ ಹೌಸ್ ಕೋರ್ಟ್ ಜನವರಿ 5ಕ್ಕೆ ಮುಂದೂಡಿದೆ.



ಈ ಪ್ರಕರಣದಲ್ಲಿ ಬಂಧಿತರಾಗಿರುವ ಮೈಸೂರಿನ ಮನೋರಂಜನ್, ಸಾಗರ್ ಶರ್ಮಾ, ಅಮೋಲ್ ಶಿಂಧೆ, ನೀಲಂ ದೇವಿ, ಲಲಿತ್ ಝಾ, ಮಹೇಶ್ ಕುಮಾವತ್ ಅವರನ್ನು ಪೊಲೀಸರು ಡಿಸೆಂಬರ್ 16ರಿಂದ ತೀವ್ರ ವಿಚಾರಣೆ ನಡೆಸುತ್ತಿದ್ದಾರೆ.

ಆದರೆ ಚಾಲಾಕಿ ಆರೋಪಿಗಳು ಬಹಳಷ್ಟು ವಿಚಾರ ಬಾಯ್ಬಿಡದೆ ರಹಸ್ಯ ಕಾಪಾಡುತ್ತಿದ್ದಾರೆ. ಇದರಿಂದ ಪೊಲೀಸರನ್ನು ಕಾಡುತ್ತಿರುವ ಬಹಳಷ್ಟು ಪ್ರಶ್ನೆಗಳಿಗೆ ಉತ್ತರ ಸಿಗದೆ ಕಗ್ಗಂಟಾಗಿದೆ.

ಈ ಹಿನ್ನೆಲೆಯಲ್ಲಿ ಆರು ಆರೋಪಿಗಳನ್ನು ಪಾಲಿಗ್ರಾಫ್ ಟೆಸ್ಟ್‌ಗೊಳಪಡಿಸಲು ದೆಹಲಿ ಪೊಲೀಸರ ವಿಶೇಷ ತಂಡ ದೆಹಲಿಯ ಪಾಟಿಯಾಲ ಹೌಸ್ ಕೋರ್ಟ್‌ಗೆ ಮನವಿ ಮಾಡಿತ್ತು.

ಈ ಬಗ್ಗೆ ವಿಚಾರಣೆ ನಡೆಸಿದ ಪಾಟಿಯಾಲ ಹೌಸ್‌ಕೋರ್ಟ್‌ನ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಹರ್ದೀಪ್ ಕೌರ್ ಜನವರಿ 5ಕ್ಕೆ ವಿಚಾರಣೆ ಮುಂದೂಡಿದ್ದಾರೆ.

ಆರೋಪಿಗಳನ್ನು ಪ್ರತಿನಿಧಿಸಲು ನ್ಯಾಯಾಧೀಶರು ನೇಮಿಸಿರುವ ಕಾನೂನು ನೆರವು ವಕೀಲರು ಇಂದು ಕೋರ್ಟ್‌ಗೆ ಹಾಜರಾಗದ ಹಿನ್ನೆಲೆಯಲ್ಲಿ ನ್ಯಾಯಾಧೀಶರು ವಿಚಾರಣೆಯನ್ನು ಜನವರಿ 5ಕ್ಕೆ ಮುಂದೂಡಿದ್ದಾರೆ.

ಇದೇ ವೇಳೆ ಪ್ರಕರಣದ ಏಕೈಕ ಮಹಿಳಾ ಆರೋಪಿ ನೀಲಂ ಜಾಮೀನು ಅರ್ಜಿ ಕುರಿತಂತೆ ಜನವರಿ 10 ರೊಳಗೆ ಪ್ರತಿಕ್ರಿಯೆ ನೀಡುವಂತೆ ನ್ಯಾಯಾಧೀಶರು ದೆಹಲಿ ಪೊಲೀಸರಿಗೆ ಸೂಚನೆ ನೀಡಿದ್ದಾರೆ.

ಪುರಿ ದೇವಾಲಯದಲ್ಲಿ ವಸ್ತ್ರ ಸಂಹಿತೆ ಜಾರಿ; ಗುಟ್ಕಾ, ಪಾನ್ ನಿಷೇಧ

ಪುರಿ, ಜ.2– ಪುರಿ ಜಗನ್ನಾಥ ದೇವಾಲಯದಲ್ಲಿ ವಸ್ತ್ರ ಸಂಹಿತೆ ಜಾರಿಯಾಗಿದ್ದು, ದೇವಾಲಯ ಪ್ರವೇಶಿಸುವ ಭಕ್ತಾದಿಗಳಿಗೆ ವಸ್ತ್ರ ಸಂಹಿತೆ ಕಡ್ಡಾಯವಾಗಿದೆ. ದೇವಾಲಯದ ಸುತ್ತಮುತ್ತಲ ಪ್ರದೇಶಗಳಲ್ಲಿ ಗುಟ್ಕಾ, ಪಾನ್ ಸೇವಿಸುವುದನ್ನು ಹಾಗೂ ಪ್ಲಾಸ್ಟಿಕ್, ಪಾಲಿಥಿನ್ ಬಳಸುವುದನ್ನು 2024ರ ಹೊಸ ವರ್ಷದ ದಿನದಿಂದ ನಿರ್ಬಂಧ ವಿಧಿಸಲಾಗಿದೆ ದೇಗುಲಕ್ಕೆ ಪ್ರವೇಶಿಸಲು ಭಕ್ತರು ಯೋಗ್ಯವಾದ ಬಟ್ಟೆಗಳನ್ನು ಧರಿಸಬೇಕಾಗುತ್ತದೆ ಎಂದು ಜಗನ್ನಾಥ ದೇವಾಲಯದ ಆಡಳಿತಾಧಿಕಾರಿ ತಿಳಿಸಿದ್ದಾರೆ. ಹಾಫ್ ಪ್ಯಾಂಟ್, ಶಾರ್ಟ್ಸ್, ಟೋರ್ನ್ ಜೀನ್ಸ್, ಸ್ಕರ್ಟ್, ಸ್ಲೀವ್ ಲೆಸ್ ಡ್ರೆಸ್ ಧರಿಸಿದ ಭಕ್ತರಿಗೆ ದೇವಸ್ಥಾನದೊಳಗೆ ಪ್ರವೇಶವಿಲ್ಲ ಎಂದು ಆಡಳಿತ ಮಂಡಳಿ ಹೇಳಿದೆ. ನಿಯಮ ಜಾರಿಗೆ ಬರುವುದರೊಂದಿಗೆ 2024ರ ಮೊದಲ ದಿನದಂದು ದೇವಸ್ಥಾನಕ್ಕೆ ಬರುವ ಪುರುಷ ಭಕ್ತರು ಧೋತಿ ಧರಿಸಿದ್ದರು ಮತ್ತು ಮಹಿಳೆಯರು ಸೀರೆ ಅಥವಾ ಸಲ್ವಾರ್ ಕಮೀಜ್‌ಗಳನ್ನು ಧರಿಸಿ ದೇವರ ದರ್ಶನ ಪಡೆಯಲು ನೆರೆದಿದ್ದರು. ಶ್ರೀ ಜಗನ್ನಾಥ ದೇವಸ್ಥಾನದ ಆಡಳಿತ ಪೊಲೀಸರ ನೆರವಿನೊಂದಿಗೆ ನಿರ್ಬಂಧಗಳನ್ನು ಜಾರಿಗೊಳಿಸಿದೆ. ದೇವಾಲಯದ ಆವರಣದಲ್ಲಿ ಗುಟ್ಕಾ ಮತ್ತು ಪಾನ್ ನಿಷೇಧವನ್ನು ಅದರ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳಲು ಜಾರಿಗೊಳಿಸಲಾಗುತ್ತಿದೆ ಎಂದು ಅಧಿಕಾರಿ ಹೇಳಿದ್ದಾರೆ.



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅವರು ಮಂಗಳವಾರ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ಅಭಿನಂದಿಸಿ, ಹೊಸ ವರ್ಷದ ಶುಭಾಶಯ ಕೋರಿದರು. ಈ ವೇಳೆ ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್.ಚಂದ್ರಶೇಖರ್, ರಮೇಶ್, ರಾಯಪ್ಪ ಇತರರು ಉಪಸ್ಥಿತರಿದ್ದರು.

ಜ.5ರಿಂದ ರಾಮಕೃಷ್ಣ ವಿವೇಕಾನಂದ ಭಾವಪ್ರಚಾರ ಪರಿಷತ್‌ನ ವಾರ್ಷಿಕ ಸಮ್ಮೇಳನ

ಮೈಸೂರು, ಜ.2(ಜಿಎ)–ರಾಮಕೃಷ್ಣ ವಿವೇಕಾನಂದ ಭಾವಪ್ರಚಾರ ಪರಿಷತ್‌ನ 9ನೇ ವಾರ್ಷಿಕ ಸಮ್ಮೇಳನವನ್ನು ಜ.5 ರಿಂದ 7 ರವರೆಗೆ ಮೈಸೂರಿನ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ರಾಮಕೃಷ್ಣ ವಿದ್ಯಾಶಾಲಾ ಸಂಚಾಲಕರಾದ ಯುಕ್ತೇಶಾನಂದಜೀ ಮಹಾರಾಜ್ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.5 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30ರವರೆಗೆ ರಾಮಕೃಷ್ಣನಗರದಲ್ಲಿರುವ ರಾಮಕೃಷ್ಣ ಸೇವಾ ಸಂಘದಲ್ಲಿ ರಾಮಕೃಷ್ಣ ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ವಾರ್ಷಿಕ ಸಭೆ ನಡೆಯಲಿದೆ. ಮಧ್ಯಾಹ್ನ 3ಗಂಟೆಗೆ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಶಾಲೆ ಸಭಾಂಗಣದಲ್ಲಿ ಶೋಭಾಯಾತ್ರೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಆದಿ ಚುಂಚನಗಿರಿ ಸಂಸ್ಥಾನ ಮೈಸೂರು ಶಾಖಾ ಮಠದ ಸೋಮೇಶ್ವರ ಸ್ವಾಮೀಜಿ ಉದ್ಘಾಟಿಸಲಿದ್ದಾರೆ.

ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಮುಕ್ತಿದಾನಂದಜೀ ಮಹಾರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಕೆ.ಹರೀಶ್ ಗೌಡ ಸೇರಿದಂತೆ ಇತರೆ ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಂಜೆ 6.45ಕ್ಕೆ ಭಕ್ತ ಸಮ್ಮೇಳನದ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ತ್ಯಾಗೀಶ್ವರಾನಂದಜೀ ಮಹಾರಾಜ್, ಸ್ವಾಮಿ ಬೋಧ ಸ್ವರೂಪಾನಂದಜೀ ಮಹಾರಾಜ್, ಸ್ವಾಮಿ ಪ್ರಕಾಶಾನಂದಜೀ ಮಹಾರಾಜ್, ಸಚಿವ ಡಾ.ಎಚ್.ಸಿ.ಮಹದೇವಪ್ಪ, ಶಾಸಕ ಜಿ.ಟಿ.ದೇವೇಗೌಡ, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಜ.6 ರಂದು ಬೆಳಿಗ್ಗೆ 8 ರಿಂದ ಮಧ್ಯಾಹ್ನ 1 ರವರೆಗೆ ಯುವ ಸಮ್ಮೇಳನ ಭಾಗ–1, ಮಧ್ಯಾಹ್ನ 2.30 ರಿಂದ ಸಂಜೆ 4 ಗಂಟೆಯವರೆಗೆ ಭಾಗ–2, 4.30 ರಿಂದ 7.5 ರವರೆಗೆ ಭಾಗ–3 ಸಮ್ಮೇಳನ ನಡೆಯಲಿದೆ. ಜ.7ರಂದು ಬೆಳಿಗ್ಗೆ 8.50 ರಿಂದ ಮಧ್ಯಾಹ್ನ 1.30 ಯುವ ಸಮ್ಮೇಳನ ಭಾಗ–4, ಮಧ್ಯಾಹ್ನ 2.30 ರಿಂದ ಸಂಜೆ 4.30 ರವರೆಗೆ ಯುವ ಸಮ್ಮೇಳನ ಭಾಗ–5 ನಡೆಯಲಿದೆ.

ಅಂದು ಸಂಜೆ 5ಕ್ಕೆ ಸಮ್ಮೇಳನದ ಸಮಾರೋಪ ಸಮಾರಂಭ ನಡೆಯಲಿದ್ದು, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಮುಕ್ತಿದಾನಂದಜೀ ಮಹಾರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಚಿವ ಎಚ್.ಕೆ.ಪಾಟೀಲ್, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಸ್.ಎ. ರಾಮದಾಸ್ ಸೇರಿದಂತೆ ಇತರೆ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಪದಾಧಿಕಾರಿಗಳಾದ ಕೆಂಪಿಲಿಂಗರಾಜು, ಪುಟ್ಟಸ್ವಾಮಿ, ಚಂದ್ರಶೇಖರ್, ಕೃಷ್ಣ, ಪ್ರಕಾಶ್ ಉಪಸ್ಥಿತರಿದ್ದರು.

ಕೋಟೆ ತಾಯಿ-ಮಕ್ಕಳ ಆಸ್ಪತ್ರೆಗೆ ಬಂತು ಡಯಾಲಿಸಿಸ್, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್, ಟಿಬಿ ಪರೀಕ್ಷೆ ಯಂತ್ರ

● ಶಾಸಕ ಅನಿಲ್ ಚಿಕ್ಕಮಾದು ಅವರಿಂದ ಚಾಲನೆ ● ತಕ್ಷಣದಿಂದಲೇ ಕಾರ್ಯಾರಂಭ

ಹೆಚ್.ಡಿ.ಕೋಟೆ, ಜ.2– ಪಟ್ಟಣದಲ್ಲಿರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನೂತನವಾಗಿ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರ ಡಯಾಲಿಸಿಸ್ ಮತ್ತು ಟಿಬಿ ಪರೀಕ್ಷೆ ಯಂತ್ರಗಳನ್ನು ಅಳವಡಿಸಲಾಗಿದ್ದು, ಶಾಸಕ ಅನಿಲ್ ಚಿಕ್ಕಮಾದು ಚಾಲನೆ ನೀಡಿದರು. ಈ ಯಂತ್ರಗಳು ತಕ್ಷಣದಿಂದಲೇ ಸಾರ್ವಜನಿಕರ ಸೇವೆಗೆ ಲಭ್ಯವಾಗಿದೆ.

ಬಳಿಕ ಮಾತನಾಡಿದ ಅವರು, ಆಸ್ಪತ್ರೆಯಲ್ಲಿ ಬಡ ಕುಟುಂಬದ ಗರ್ಭಿಣಿ ಮಹಿಳೆಯರಿಗೆ ಅನುಕೂಲ ವಾಗುವ ನಿಟ್ಟಿನಲ್ಲಿ 14 ಲಕ್ಷ ರೂ. ವೆಚ್ಚದ ಸ್ಕ್ಯಾನಿಂಗ್ ಯಂತ್ರವನ್ನು ಅಳವಡಿಸಲಾಗಿದೆ. ಇನ್ನು ಮುಂದೆ ಬಡ ಕುಟುಂಬದ ಗರ್ಭಿಣಿ ಮಹಿಳೆಯರು ಯಾವುದೇ ಖಾಸಗಿ ಆಸ್ಪತ್ರೆಗೂ ಹೋಗದೆ, ಸರ್ಕಾರಿ ಆಸ್ಪತ್ರೆಯಲ್ಲಿಯೇ ಸ್ಕ್ಯಾನಿಂಗ್ ಮಾಡಿಸಿಕೊಳ್ಳುವಂತೆ ಮನವಿ ಮಾಡಿದರು. ಸಾರ್ವಜನಿಕ ಆಸ್ಪತ್ರೆಯಲ್ಲಿ ಸುಮಾರು ಎರಡು ಕೋಟಿಗೂ ಹೆಚ್ಚು ಕಾಮಗಾರಿ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಅದು ಪೂರ್ಣಗೊಂಡು ಸಾರ್ವಜನಿಕರಿಗೆ ಲೋಕಾರ್ಪಣೆ ಮಾಡಲಾಗುವುದು ಎಂದರು.

35 ಲಕ್ಷ ರೂ. ವೆಚ್ಚದ ಲ್ಯಾಬ್ ಕಾಮಗಾರಿ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಉದ್ಘಾಟನೆಗೊಳ್ಳಲಿದೆ. ತಾಲೂಕಿನಲ್ಲಿ ನರ್ಸಿಂಗ್ ಕಾಲೇಜ್ ಸ್ಥಾಪಿಸಲು ನಿರ್ಧರಿಸಿದ್ದು, ಮುಂದಿನ ಬಜೆಟ್‌ನಲ್ಲಿ ಸೇರಿಸಲು ಪ್ರಯತ್ನಿಸಲಾಗುವುದು ಎಂದು ಅವರು ತಿಳಿಸಿದರು.

ಆಸ್ಪತ್ರೆಯಲ್ಲಿ 40ಕ್ಕೂ ಹೆಚ್ಚು ದಾದಿಯರ ಕೊರತೆ ಇದೆ. ಮಕ್ಕಳ ತಜ್ಞರು ವಯೋ ನಿವೃತ್ತಿಯಾಗಿದ್ದು, ಮುಂದಿನ ದಿನಗಳಲ್ಲಿ ಮಕ್ಕಳ ತಜ್ಞರ ನೇಮಕ ಮಾಡಲು ಕ್ರಮ ವಹಿಸುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಗುವುದು ಎಂದರು.



ತಾಲೂಕಿನಲ್ಲಿ 30ಕ್ಕೂ ಹೆಚ್ಚು ಡಯಾಲಿಸಿಸ್ ರೋಗಿಗಳಿದ್ದು, ಇವರ ಡಯಾಲಿಸಿಸ್‌ಗೆ 8 ಲಕ್ಷ ರೂ. ವೆಚ್ಚದ ಯಂತ್ರವನ್ನು ದಾನಿಗಳು ನೀಡಿದ್ದು, ಅದನ್ನು ಉದ್ಘಾಟನೆ ಮಾಡಲಾಗಿದೆ. ಇನ್ನು ಮುಂದೆ ವಾರದ ಐದು ದಿನಗಳ ಕಾಲ ಡಯಾಲಿಸಿಸ್ ಮಾಡಲಾಗುವುದು ಎಂದು ಶಾಸಕರು ವಿವರಿಸಿದರು. ಇದೇ ಸಂದರ್ಭದಲ್ಲಿ ಶಾಸಕರು ರೋಗಿಗಳ ಆರೋಗ್ಯವನ್ನು ವಿಚಾರಿಸಿದರು.

ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಸೋಮಣ್ಣ ಮಾತನಾಡಿ, ವೈದ್ಯರ ಕೊರತೆಯಿಂದಾಗಿ ಗರ್ಭಿಣಿಯರ ಸ್ಕ್ಯಾನಿಂಗ್ ಮಾಡಲಾಗುತ್ತಿರಲಿಲ್ಲ, ಶಾಸಕ ಅನಿಲ್ ಚಿಕ್ಕಮಾದು ಅವರ ಶ್ರಮದಿಂದಾಗಿ ಈಗ ವೈದ್ಯರು ಆಗಮಿಸಿದ್ದು ಸ್ಕ್ಯಾನಿಂಗ್ ಅನ್ನು ಆರಂಭಿಸಲಾಗುತ್ತಿದೆ ಎಂದರು.

> ನಾವು ಬಡ ಕುಟುಂಬದವರಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿಸೋಕೆ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಹಣ ಖರ್ಚಾಗುತ್ತಿತ್ತು. ಇದನ್ನು ಮನಗಂಡು, ಬಡ ಕುಟುಂಬ ಹೆಣ್ಣು ಮಕ್ಕಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರು ಸ್ಕ್ಯಾನಿಂಗ್ ಮಷಿನ್, ಒದಗಿಸಿ ಇಂದು ಚಾಲನೆ ನೀಡಿರುವುದು ನಿಜಕ್ಕೂ ಸಂತೋಷದ ವಿಚಾರ.
> -**ಶಾಂತಮ್ಮ**, ಗರ್ಭಿಣಿ ಮಹಿಳೆ

ಹಿಂದೆ ಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡಿಸಲು ಖಾಸಗಿ ಆಸ್ಪತ್ರೆ ಮತ್ತು ಪೆಥಾಲಜಿಗಳಿಗೆ ಕಳುಹಿಸಬೇಕಾದ ಅನಿವಾರ್ಯತೆ ಇತ್ತು, ಈಗ ನಮ್ಮ ಸರ್ಕಾರಿ ಆಸ್ಪತ್ರೆಯಲ್ಲಿ ಎಲ್ಲಾ ಸೌಲಭ್ಯಗಳು ದೊರಕಲಿದೆ ಎಂದರು. ತಹಸೀಲ್ದಾರ್ ಶ್ರೀನಿವಾಸ್, ತಾಲೂಕು ಆರೋಗ್ಯ ಅಧಿಕಾರಿ ಡಾ:ರವಿಕುಮಾರ್, ಸ್ಕ್ಯಾನಿಂಗ್ ವೈದ್ಯರಾದ ಶ್ರೀನಾಥ್, ತನುಜ, ಪುರಸಭಾ ಮುಖ್ಯ ಅಧಿಕಾರಿ ಸುರೇಶ್, ಪುರಸಭಾ ಸದಸ್ಯರಾದ ನರಸಿಂಹಮೂರ್ತಿ, ಯಶವಂತ್, ಪುಟ್ಟಬಸವ ನಾಯಕ, ಶಾಂತಮ್ಮ, ಮಧುಕುಮಾರ್, ಪ್ರವೀಣ್ ಸಾಗರ್, ಸಾಹಿರಾ ಭಾನು, ಮೈಮುಲ್ ನಿರ್ದೇಶಕ ಈರೇಗೌಡ, ಜಿ.ಪಂ. ಮಾಜಿ ಸದಸ್ಯ ರವಿ, ರಂಗಸ್ವಾಮಿ, ವೈದ್ಯರುಗಳಾದ ಶ್ರೀನಿವಾಸ್ ಪೂರ್ಣಿಮಾ ದಿನಕರ್ ಪ್ರಜ್ವಲ್ ಸಹನ, ಶುಶ್ರೂಷಾ ಜಿಲ್ಲಾ ಸಂಘದ ಅಧ್ಯಕ್ಷ ಪ್ರಶಾಂತ್ ಕುಮಾರ್ ಗಂಗೊಳ್ಳಿ, ಮುಖಂಡಗಳಾದ ಪರಶಿವಮೂರ್ತಿ ಇನ್ನು ಮುಂತಾದವರು ಹಾಜರಿದ್ದರು.

> ತಾಲೂಕಿನಲ್ಲಿ ಅತಿ ಹೆಚ್ಚು ಬಡ ಕುಟುಂಬಗಳೇ ಇರುವ ಹಿನ್ನೆಲೆಯಲ್ಲಿ ಖಾಸಗಿ ಆಸ್ಪತ್ರೆಗೆ ಸ್ಕ್ಯಾನಿಂಗ್‌ಗೆ ದುಬಾರಿ ಹಣ ಕಟ್ಟಲಾಗದೆ ಸಂಕಷ್ಟದಲ್ಲಿ ಸಿಲುಕಿದ್ದರು. ಆದ್ದರಿಂದ ಸರ್ಕಾರದ ವತಿಯಿಂದ 14 ಲಕ್ಷ ರೂ. ವೆಚ್ಚದ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರ, 9 ಲಕ್ಷ ರೂ. ವೆಚ್ಚದ ಕ್ಷಯರೋಗ ಪತ್ತೆ ಹಚ್ಚುವ ಯಂತ್ರ, ದಾನಿಗಳಿಂದ 8 ಲಕ್ಷ ರೂ. ವೆಚ್ಚದ ಡಯಾಲಿಸಿಸ್ ಯಂತ್ರ ಹಾಗೂ ಲಯನ್ಸ್ ಸಂಸ್ಥೆಯಿಂದ ಕಂಪ್ಯೂಟರ್ ನೀಡಲಾಗಿದೆ.
> -**ಅನಿಲ್ ಚಿಕ್ಕಮಾದು**, ಶಾಸಕ

ಹದಿನಾರು ಗ್ರಾಮದ ಗ್ರಾಪಂ ಕ್ಯಾಲೆಂಡರ್ ಬಿಡುಗಡೆ



ಸುತ್ತೂರು, ಜ. 2– ನಂಜನಗೂಡು ತಾಲೂಕು ವರುಣ ಕ್ಷೇತ್ರದ ಹದಿನಾರು ಗ್ರಾಮದ ಗ್ರಾಪಂ ವತಿಯಿಂದ ಹೊರ ತಂದಿರುವ ನೂತನ ವರ್ಷದ ಕ್ಯಾಲೆಂಡರ್‌ನ್ನು ಗ್ರಾಪಂ ಅಧ್ಯಕ್ಷೆ ಸಣ್ಣತಾಯಮ್ಮ ಬಿಡುಗಡೆ ಮಾಡಿದರು.

ಇದೇ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಹದಿನಾರು ಅಭಿಲಾಷ್, ಗ್ರಾಮ ಪಂಚಾಯಿತಿ ಒಕ್ಕೂಟದ ಜಿಲ್ಲಾಧ್ಯಕ್ಷ ನಾಗರಾಜ್ ಮಾತನಾಡಿ, ನಾಡಿನ ಎಲ್ಲ ಜನತೆಗೂ ಹೊಸ ವರ್ಷದ ಶುಭಾಶಯಗಳನ್ನು ಕೋರಿ, ಇದೇ ಮೊದಲ ಬಾರಿಗೆ ಗ್ರಾಪಂ ವತಿಯಿಂದ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಹಾಗೂ ಅಧಿಕಾರಿ ವರ್ಗದವರುಗಳನ್ನು ಸಂಪರ್ಕ ಮಾಡಿ ಉತ್ತಮ ಆಡಳಿತ ನೀಡುವ ಉದ್ದೇಶದಿಂದ ಎಲ್ಲರ ದೂರವಾಣಿ ಹಾಗೂ ಗ್ರಾಪಂ ಆಡಳಿತವನ್ನು ಜನರ ಬಳಿಗೆ ಕೊಂಡೊಯ್ಯುವ ಉದ್ದೇಶದಿಂದ ಈ ಕ್ಯಾಲೆಂಡರ್ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಉಪಾಧ್ಯಕ್ಷ ಗೋವಿಂದ ಶೆಟ್ಟಿ, ಗ್ರಾಪಂ ಮಾಜಿ ಅಧ್ಯಕ್ಷ ಹದಿನಾರು ಅಭಿಲಾಷ್, ಶಿವಯ್ಯ, ಗ್ರಾಪಂ ಎಲ್ಲಾ ಸದಸ್ಯರುಗಳು, ಪಂಚಾಯತಿ ಪಿಡಿಓ ಪ್ರದೀಪ್‌ಕುಮಾರ್, ಸಿಬ್ಬಂದಿ ವರ್ಗದವರು ಮತ್ತು ಗ್ರಾಮಸ್ಥರು ಹಾಜರಿದ್ದರು.

ಗೋಪಾಲಪುರ ಹಾಲು ಉತ್ಪಾದಕರ ಸಂಘ ಜೆಡಿಎಸ್ ತೆಕ್ಕೆಗೆ

9 ಮಂದಿ ಜೆಡಿಎಸ್ ಬೆಂಬಲಿತರು ನಿರ್ದೇಶಕರಾಗಿ ಆಯ್ಕೆ

ಹೆಚ್.ಡಿ.ಕೋಟೆ, ಜ. 2– ಗೋಪಾಲಪುರ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದು, ಡೇರಿ ಆಡಳಿತವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಗೋಪಾಲಪುರ ಹಾಲು ಉತ್ಪಾದಕರ ಸಹಕಾರ ಸಂಘದ 11 ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ 9 ಅಭ್ಯರ್ಥಿಗಳು ಗೆದ್ದು ಬೀಗಿದರೆ, ಕಾಂಗ್ರೆಸ್ ಎರಡು ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಈಶ್ವರ್, ಗೋವಿಂದೇಗೌಡ, ರವಿರಾಜು, ಜಿ.ಎಂ. ವಿಶ್ವನಾಥ್, ಮಾದೇಗೌಡ, ಸಣ್ಣಸ್ವಾಮಿ, ಭೈರೇಗೌಡ, ಸುಮತಿ ಮತ್ತು ಚಂದ್ರಮ್ಮ ಅವರುಗಳು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ. ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಹನುಮಂತು ಮತ್ತು ಮಹೇಶ್ ನಿರ್ದೇಶಕರಾಗಿ ಚುನಾಯಿತರಾಗಿದ್ದಾರೆ.



ವಿಜೇತರನ್ನು ಅಭಿನಂದಿಸುತ್ತಿರುವ ಗ್ರಾಪಂ ಅಧ್ಯಕ್ಷ ಜಿ.ಕೆ.ಬಸವೇಗೌಡ

ನಿರ್ದೇಶಕರ ಆಯ್ಕೆ ಘೋಷಿಸುತ್ತಿದ್ದಂತೆ ಡೇರಿ ಮುಂಭಾಗ ವಿಜಯೋತ್ಸವ ಆಚರಿಸಲಾಯಿತು. ಇದೇ ವೇಳೆ ವಿಜೇತರು ಪರಸ್ಪರ ಅಭಿನಂದಿಸಿಕೊಂಡರು. ಗ್ರಾಮಸ್ಥರು ತಮ್ಮ ಅಭ್ಯರ್ಥಿಗಳ ಆಯ್ಕೆ ಹಿನ್ನೆಲೆಯಲ್ಲಿ ಭಾರಿ ಗಾತ್ರದ ಪುಷ್ಪಮಾಲೆಗಳನ್ನು ತೊಡಿಸಿ, ಸಿಹಿ ತಿನ್ನಿಸಿ ಅಭಿನಂದಿಸಿದರು.

ಜೆಡಿಎಸ್ ಮುಖಂಡರು ಹಾಗೂ ನಾಯಕರು ತಮ್ಮ ತಂಡವನ್ನು ಗೆಲ್ಲಿಸಬೇಕು ಎಂದು ಡೇರಿ ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಗೆಲ್ಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ವಿಜೇತರು ತಮ್ಮ ಗೆಲುವಿಗೆ ಸಹಕರಿಸಿದ ಜೆಡಿಎಸ್ ಮುಖಂಡರು ಹಾಗೂ ಮತ ಹಾಕಿದ ಸದಸ್ಯರುಗಳನ್ನು ಅಭಿನಂದಿಸಿದ್ದಾರೆ.

ಗೃಹಲಕ್ಷ್ಮಿ, ಶಕ್ತಿ ಯೋಜನೆ ಬೇಡ, ಕರೆಂಟ್ ಬಿಲ್ ನಾವೇ ಕಟ್ಟುತ್ತೇವೆ, ಕಾಡುಪ್ರಾಣಿಗಳ ಹಾವಳಿ ತಡೆಯಿರಿ

ಶಾಸಕ ದರ್ಶನ್‌ಗೆ ಕಾಡಂಚಿನ ಗ್ರಾಮಗಳ ಜನರ ಮನವಿ



ಮಲ್ಲುಂಡಿ, ಜ.2– ನಮಗೆ ಗೃಹಲಕ್ಷ್ಮಿ ಯೋಜನೆ, ಶಕ್ತಿ ಯೋಜನೆ ಬೇಡ, ವಿದ್ಯುತ್ ಬಿಲ್ ನಾವೇ ಕಟ್ಟುತ್ತೇವೆ. ನಮಗೆ ಕಾಡುಪ್ರಾಣಿಗಳ ಹಾವಳಿ ತಪ್ಪಿಸಿ ಎಂದು ಕಾಡಂಚಿನ ಗ್ರಾಮಗಳ ನಿವಾಸಿಗಳು ಶಾಸಕ ದರ್ಶನ್ ಧ್ರುವನಾರಾಯಣ್ ಅವರಲ್ಲಿ ಮನವಿ ಮಾಡಿದ ಪ್ರಸಂಗವೊಂದು ಸಂಭವಿಸಿದೆ.

ಸಮೀಪದ ದೇವರಾಯಶೆಟ್ಟಿಪುರ ಗ್ರಾಮ ವ್ಯಾಪ್ತಿಗೆ ಬರುವ ಕಾಡಂಚಿನ ಗ್ರಾಮಗಳಾದ ನಾಗಣಾಪುರ, ಬಳ್ಳೂರಹುಂಡಿ ಗ್ರಾಮಗಳಲ್ಲಿ ಜನಸಂಪರ್ಕ ಸಭೆನಡೆಸಿ ಜನರ ಅಹವಾಲನ್ನು ಆಲಿಸಿದ ವೇಳೆ ನಿವಾಸಿಗಳು ಈ ಬೇಡಿಕೆ ಮುಂದಿಟ್ಟರು. ಆಗ ಶಾಸಕರು ತಮ್ಮ ಜೊತೆಯಲ್ಲಿದ್ದ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಕ್ರಮ ಕೈಗೊಂಡು ಕಾಡುಪ್ರಾಣಿಗಳ ಹಾವಳಿ ತಪ್ಪಿಸುವಂತೆ ಸೂಚಿಸಿದರು.

ಚುನಾವಣೆ ನಂತರ ಪ್ರತಿ ಕ್ಷೇತ್ರದ ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ ಕ್ಷೇತ್ರದ ಜನರ ಕಷ್ಟ ಸುಖ ಆಲಿಸಿ ಅವರ ಸಮಸ್ಯೆಗಳನ್ನು ಬಗಹರಿಸುವ ನಿಟ್ಟಿನಲ್ಲಿ ಶ್ರಮಿಸುವುದಾಗಿ ತಿಳಿಸಿದ್ದೆ. ಅದರಂತೆ ಈಗ ನಡೆದುಕೊಳ್ಳುತ್ತಿರುವೆ ಎಂದರು.

ತಮ್ಮ ಜವಾಬ್ದಾರಿ ಅರಿತು ಹಲವು ಕಾರ್ಯಕ್ರಮದಡಿ ಜನರ ಮನೆ ಬಾಗಿಲಿಗೆ ತೆರಳಿ ಸವಲತ್ತುಗಳನ್ನು ತಲುಪಿಸುವ ಜೊತೆಗೆ ಸಮಸ್ಯೆಗಳನ್ನು ಪರಿಹರಿಸಲು ನಿರ್ಧರಿಸಲಾಗಿದೆ. ಜನರು ಸಮಸ್ಯೆಗಳನ್ನು ಹೊತ್ತು ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ ಮಾರುತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಬಿ.ಸಿ.ರಾಜಣ್ಣ ಸೇರಿದಂತೆ ತಾಲೂಕಿನ ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.



ಮೂಗೂರಿನ ಶ್ರೀ ತ್ರಿಪುರಸುಂದರಿ ಅಮ್ಮನವರ ದೇವಾಲಯದಲ್ಲಿ ಹೊಸ ವರ್ಷ ಹಾಗೂ ಧನುರ್ಮಾಸದ ಅಂಗವಾಗಿ ಮಂಗಳವಾರ ವಿಶೇಷ ಪೂಜೆಯೊಂದಿಗೆ ಅಮ್ಮನವರಿಗೆ ಹೂವಿನ ಸೀರೆ ಅಲಂಕಾರ ಮಾಡಲಾಗಿತ್ತು. ಕನ್ನಡ ಚಳುವಳಿ ಹೋರಾಟಗಾರರಾದ ಮೂಗೂರು ನಂಜುಂಡಸ್ವಾಮಿ ಈ ಸೇವೆ ನೆರವೇರಿಸಿದರು. ನಂತರ ದೇಗುಲದ ಆವರಣದಲ್ಲಿ ಪ್ರಸಾದ ವಿನಿಯೋಗ ನಡೆಯಿತು.

ಪಪಂ ಮಾಜಿ ಅಧ್ಯಕ್ಷ ಆರ್.ಕೆ.ಗೋವಿಲ್ ನಿಧನ



ತಿ.ನರಸೀಪುರ, ಜ.2– ಪಟ್ಟಣ ಪಂಚಾಯ್ತಿ ಹಾಗೂ ಏಕಲವ್ಯ ಇನ್ಸಿಟ್ಯೂಟ್‌ನ ಮಾಜಿ ಅಧ್ಯಕ್ಷ ಆರ್.ಕೆ. ಗೋವಿಲ್ ಮಂಗಳವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದು, ಇಂದು ಪಟ್ಟಣದ ರುದ್ರ ಭೂಮಿಯಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಮೃತ ಆರ್.ಕೆಗೋವಿಲ್ ಪಟ್ಟಣದಲ್ಲಿ ಜನಪ್ರಿಯ ವ್ಯಕ್ತಿಯಾಗಿದ್ದು, ಆರ್‌ಎಸ್‌ಎಸ್ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿ ನಂತರ ಬೇಕರಿ ಉದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಗೋವಿಲ್ ಅವರದ್ದು ವರ್ಣರಂಜಿತವಾದ ಬದುಕಾಗಿತ್ತು. ಬೇಕರಿ ಉದ್ಯಮದಿಂದ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಮಾಡಿದ ಗೋವಿಲ್ ಪಟ್ಟಣ ಪಂಚಾಯ್ತಿ ಸದಸ್ಯರಾಗಿ ನಂತರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು,ನಂತರ ಶಿಕ್ಷಣ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿ ಚಾಮರಾಜನಗರ ಜಿಲ್ಲೆಯ ಉಮ್ಮತ್ತೂರಿನಲ್ಲಿ ಏಕಲವ್ಯ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಎಂಬ ಹೆಸರಿನ ಸಂಸ್ಥೆ ತೆರೆದು ಹೆಸರಾಗಿದ್ದರು. ಸ್ನೇಹಜೀವಿಯಾಗಿದ್ದ ಅವರು ಇತ್ತೀಚೆಗೆ ಅನಾರೋಗ್ಯದಿಂದ ಬಳಲುತ್ತಿದ್ದರು.

ಆರ್.ಕೆ.ಗೋವಿಲ್ ನಿಧನಕ್ಕೆ ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್, ಗುತ್ತಿಗೆದಾರ ಹಾದಿ, ನಿಕಟಪೂರ್ವ ಬಿಜೆಪಿ ಅಧ್ಯಕ್ಷ ತೋಟದಪ್ಪ ಬಸವರಾಜು, ಎಲ್.ಸಿದ್ದರಾಜು ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ಶತಾಯುಷಿ ಮಾದಮ್ಮ



ತಿ.ನರಸೀಪುರ, ಜ.2– ತಾಲೂಕಿನ ಸೋಸಲೆಯ ಕಾಂಗ್ರೆಸ್ಸಿನ ಹಿರಿಯ ಮುಖಂಡ ಮಹಾದೇವಸ್ವಾಮಿ ಅವರ ತಾಯಿ ಶತಾಯುಷಿ ಮಾದಮ್ಮ (102) ಮಂಗಳವಾರ ಸಂಜೆ ತಮ್ಮ ನಿವಾಸದಲ್ಲಿ ನಿಧನ ಹೊಂದಿದ್ದಾರೆ.

ಮಾದಮ್ಮನವರು ಸೋಸಲೆ ಮಹಾದೇವಸ್ವಾಮಿ ಸೇರಿದಂತೆ ಐವರು ಗಂಡು ಮಕ್ಕಳು, ಓರ್ವ ಪುತ್ರಿ ಅಗಲಿದ್ದು, ಇವರ ಅಂತ್ಯಕ್ರಿಯೆಯನ್ನು ಬುಧವಾರ 2 ಗಂಟೆಗೆ ತಾಲೂಕಿನ ವೀರಪ್ಪ ಒಡೆಯರಹುಂಡಿ ಗ್ರಾಮದ ತೋಟದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ, ಕೆಡಿಪಿ ಸದಸ್ಯ ಸುನಿಲ್ ಬೋಸ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಪ್ರಥಮ ದರ್ಜೆ ಗುತ್ತಿಗೆದಾರ ಕಗ್ಗಲಿಪುರ ಕೆ.ಎಂ.ಮಧುಕುಮಾರ್, ವೀರಪ್ಪ, ಒಡೆಯರಹುಂಡಿ ಬಸವರಾಜು ಸಂತಾಪ ಸೂಚಿಸಿದ್ದಾರೆ.

ಕುಪ್ಯಾ ಮಹದೇವಸ್ವಾಮಿ



ತಿ.ನರಸೀಪುರ, ಜ.2– ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಹಿಂದುಳಿದ ವರ್ಗಗಳ ಅಧ್ಯಕ್ಷ ಹಾಗೂ ಕುರುಬ ಸಮುದಾಯದ ಹಿರಿಯ ಮುಖಂಡ ಕುಪ್ಯಾ ಮಹದೇವ ಸ್ವಾಮಿ(52) ನಿಧನರಾಗಿದ್ದಾರೆ.

ಮೃತರು ಪತ್ನಿ ಮತ್ತು ಮೂವರು ಪುತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ಬುಧವಾರ ಮಧ್ಯಾಹ್ನ 12.30 ಗಂಟೆಗೆ ಕುಪ್ಯಾ ಗ್ರಾಮದ ತೋಟದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಟಿಎಪಿಸಿಎಂಎಸ್ ನಿರ್ದೇಶಕ ರಂಗಸಮುದ್ರ ವಾಸುದೇವ ಸಂತಾಪ ಸೂಚಿಸಿದ್ದಾರೆ

ಬಸವನ ವಿಗ್ರಹ ಕದ್ದೊಯ್ದರು, ಪೊಲೀಸರಿಗೆ ದೂರು ಕೊಡುತ್ತಿದ್ದಂತೆ ಪೊದೆಗೆ ಬಿಸಾಕಿ ಹೋದರು

ಮತ್ತೆ ಮೂಲ ಸ್ಥಾನದಲ್ಲಿ ಪ್ರತಿಷ್ಠಾಪನೆಗೊಂಡ ಬಸವನ ಪ್ರತಿಮೆ



ಪಿರಿಯಾಪಟ್ಟಣ, ಜ.2– ದುಷ್ಕರ್ಮಿಗಳು ಕದ್ದೊಯ್ದಿದ್ದ ಬಸವನ ವಿಗ್ರಹವನ್ನು ಪೊಲೀಸರಿಗೆ ದೂರು ನೀಡುತ್ತಿದ್ದಂತೆ ರಾತ್ರೋರಾತ್ರಿ ತಂದು ಪೊದೆಯಲ್ಲಿ ಬಿಸಾಡಿ ಹೋಗಿದ್ದು, ಇಂದು ಪ್ರತಿಮೆಯನ್ನು ಮೂಲ ಸ್ಥಾನದಲ್ಲಿ ಪ್ರತಿಷ್ಠಾಪಿಸಿ ಪೂಜಿಸಲಾಯಿತು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಬಸವೇಶ್ವರನಗರದ ಪಕ್ಕದಲ್ಲಿರುವ ಖಾಲಿ ಜಾಗದಲ್ಲಿ ಬಸವನ ವಿಗ್ರಹವನ್ನು ಈ ಹಿಂದೆ ಹಿರಿಯರು ಪ್ರತಿಷ್ಠಾಪಿಸಿದ್ದರು. ಇತ್ತೀಚೆಗೆ ಕೆಲವು ದಿನಗಳ ಹಿಂದೆ ಯಾರೋ ಬಸವನ ವಿಗ್ರಹವನ್ನು ರಾತ್ರೋರಾತ್ರಿ ಕದ್ದೊಯ್ದಿದ್ದರು. ಈ ಕುರಿತು ಬಸವೇಶ್ವರನಗರದ ನಿವಾಸಿಗಳು ಬೆಟ್ಟದಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಇದಾದ ಎರಡೇ ದಿನಕ್ಕೆ ದುಷ್ಕರ್ಮಿಗಳು ಬಸವೇಶ್ವರ ವಿಗ್ರಹವನ್ನು ಪಕ್ಕದಲ್ಲಿರುವ ಪೊದೆಗಳ ಮಧ್ಯೆ ಹಾಕಿ ಹೋಗಿದ್ದರು. ಇಂದು ಪತ್ತೆಯಾದ ಬಸವನ ವಿಗ್ರಹವನ್ನು ಪೊಲೀಸರ ಸಮ್ಮುಖದಲ್ಲಿ ಮೂಲಸ್ಥಾನದಲ್ಲಿಟ್ಟು ಅಲ್ಲಿ ಒಂದು ಗುಡಿಯನ್ನು ಕಟ್ಟಲು ಗ್ರಾಮಸ್ಥರು ತೀರ್ಮಾನಿಸಿದರು. ಗ್ರಾಮದ ಯಜಮಾನರಾದ ಮಲ್ಲೇಗೌಡ ನಿವೃತ್ತ ಶಿಕ್ಷಕ ಕೃಷ್ಣನಾಯಕ್, ಶಿವಾನಂದ್, ಗುತ್ತಿಗೆದಾರ ಲೋಕೇಶ್, ಮುಖಂಡರಾದ ಯೋಗೇಶ್, ರಾಮು, ಮೈಲಾರಿ, ಚಿಕ್ಕೇಗೌಡ, ರಾಮೇಗೌಡ, ರಮೇಶ್ ಗ್ರಾಮಸ್ಥರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಡೆವಿಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂ)	2 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಟೇರ (ಕ)	4 ಪ್ರದರ್ಶನಗಳು
ಸಂಗಂ	
ಸಲಾರ್ (ಕ) 3 ಪ್ರದರ್ಶನಗಳು ಸಲಾರ್ (ಹಿಂ)	1 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಲಾರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸಲಾರ್– 1 (ತೆ): ಬೆ.9.15ಕ್ಕೆ, ಮ.3.50ಕ್ಕೆ, ರಾ.10.20ಕ್ಕೆ, ಡಂಕಿ (ಹಿಂ): ಮ.12.50ಕ್ಕೆ, ರಾ.7.14ಕ್ಕೆ.
ಸ್ಕ್ರೀನ್ 2	ಸಲಾರ್–1 (ಕ): ಬೆ.9ಕ್ಕೆ, ಸಂ.6.50ಕ್ಕೆ, ಅನಿಮಲ್ (ಹಿಂ): ಮ.12.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.05ಕ್ಕೆ, ನೆರು (ಮ): ರಾ.10.15ಕ್ಕೆ.
ಸ್ಕ್ರೀನ್ 3	ಸಲಾರ್–1 (ತೆ): ಬೆ.7ಕ್ಕೆ, ಡಂಕಿ (ಹಿಂ): ಬೆ.10.30ಕ್ಕೆ, ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಮ.1.45ಕ್ಕೆ, ಸಂ.4.50ಕ್ಕೆ, ರಾ.7.15ಕ್ಕೆ, ಸಲಾರ್ (ಕ): ರಾ.9.55ಕ್ಕೆ.
ಸ್ಕ್ರೀನ್ 4	ಸಲಾರ್–1(ತೆ): ಬೆ.7.15ಕ್ಕೆ, ಮ.12.30ಕ್ಕೆ, ರಾ.7ಕ್ಕೆ, ಡಂಕಿ (ಹಿಂ): ಮ.3.55ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಡಂಕಿ (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಸಲಾರ್ –1 (ತೆ): ಬೆ.8.10ಕ್ಕೆ, ಬೆ.11.45ಕ್ಕೆ, ಮ.3.20ಕ್ಕೆ, ಸಂ.6.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಡಂಕಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಲಾರ್ –1 (ಕ): ರಾ.9.45ಕ್ಕೆ.
ಸ್ಕ್ರೀನ್ 4	ಸಲಾರ್–1 (ತೆ): ಬೆ.8.40ಕ್ಕೆ, ಸಲಾರ್–1 (ಕ): ಮ.12.15ಕ್ಕೆ, ಸಂ.6.35ಕ್ಕೆ, ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಮ.3.50ಕ್ಕೆ, ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸುಗಳು

6ನೇ ದಿನ, ಬುಧವಾರ 3-1-2024

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ನಂದಿ ದುರ್ಗ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಡೀಮೆಡ್ ಟು ಫೈರ್ 2. ನ್ಯಾಚುರಲ್ ಸ್ಪೀಡ್ 3. ಮಾರ್ಗೊನೈಟ್

II. ತಾಜ್ ಮಹಲ್ ಪ್ಲೇಟ್–1100 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಮಾರ್ಚ್ ಟು ವಿಕ್ಟರಿ 2. ಕಾಪರ್ ಸನ್‌ರೈಸ್ 3. ಒಕ್‌ರೆ

III. ಬರ್ಡ್ ಸೆಂಚುರಿ ಪ್ಲೇಟ್ ಡಿ2–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ವರದನ್ 2. ಸಿಯೋಲ್ 3. ಐಕ್ಯಾನ್

IV. ರಾಜೇಂದ್ರ ವಿಲಾಸ್ ಪ್ಲೇಟ್ –1600 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಜನೀರೊ 2. ಅವರ್‌ಲಿ 3. ನ್ಯಾಚುರಲ್ ಟೊರಾನ್‌ಡೊ

V. ಚಾಮುಂಡಿ ಮಿಲಿಯನ್–2000 ಮೀ. 4 ವರ್ಷ (ಟರ್ಮ್ಸ್). ಮ.4.00ಕ್ಕೆ
1. ಕುಶಾಕ್ 2. ಒಯಸೀಸ್ 3. ಡಿ ಗೋಲ್ಡ್‌ಸ್ಟಾರ್

VI. ಸ್ಪಾರ್ಕ್ ಆಫ್ ಲೈಫ್ ಪ್ಲೇಟ್–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1 ಟಾಮ್ ಕ್ರೂಸಿಯರ್ 2. ಬ್ರೇವ್ ಟ್ರೂಪರ್ 3. ಗೋಲ್ಡ್ ಕೈಟ್

VII. ಬರ್ಡ್ ಸೆಂಚುರಿ ಪ್ಲೇಟ್ ಡಿ1–1400 ಮೀ. ರೇಟೆಡ್ 20 ರಿಂದ 45 ಸಂ.5.00ಕ್ಕೆ
1 ಸ್ವಾಗತವ್ 2. ಕೋಡ್ ಆಫ್ ಹಾನರ್ 3. ಕಾನ್‌ಫಿಡೆಂಟ್ ಗೇಮ್

ದಿನದ ಅತ್ಯುತ್ತಮ	: ಕುಶಾಕ್
ಡಬ್ಬಲ್	: ವರದನ್, ಸ್ವಾಗತಮ್
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಸ್	: 1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಜೇನು ಕಡಿದು ರೈತ ಸಾವು



ಸುತ್ತೂರು, ಜ. 2– ನಂಜನಗೂಡು ತಾಲೂಕು ಹನುಮನಪುರ ಗ್ರಾಮದ ನಾಗಪ್ಪ ಎಂಬುವವರು ಹೆಜ್ಜೇನು ದಾಳಿಯಿಂದ ಗಾಯಗೊಂಡಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು.

ಹೊಟ್ಟೆಕಿಚ್ಚಿಗೆ ಹಿಂದೂ ಕಾರ್ಯಕರ್ತನ ಬಂಧನ



ವಿಜಯಪುರ: ಹುಬ್ಬಳ್ಳಿಯಲ್ಲಿ ಪೊಲೀಸರು ಕರಸೇವ ಕಾರ್ಯಕರ್ತ ಶ್ರೀಕಾಂತ್ ಪೂಜಾರಿಯನ್ನು ಬಂಧಿಸಿದ್ದಾರೆ. ಇದು ಸರ್ಕಾರದ ದ್ವೇಷ ವರ್ತನೆಯಲ್ಲದೆ ಬೇರೇನೂ ಅಲ್ಲ. ರಾಮಮಂದಿರದ ಉದ್ಘಾಟನೆಯ ಹೊಟ್ಟೆಕಿಚ್ಚಿಗೆ ಪ್ರತೀಕಾರ ತೀರಿಸಿಕೊಳ್ಳಲಾಗುತ್ತಿದೆ. ಹೊಟ್ಟೆ ಕಿಚ್ಚಿನಿಂದ ಈ ರೀತಿ ಕಾಂಗ್ರೆಸ್ ವರ್ತಿಸುತ್ತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದ್ದಾರೆ.

ಹುಬ್ಬಳ್ಳಿ ವಿಚಾರವಾಗಿ ಕಾನೂನು, ರಾಜಕೀಯ, ಸಾಮಾಜಿಕ ಹೋರಾಟ ಮಾಡುತ್ತೇವೆ. ಡಿಜೆ ಹಳ್ಳಿ ಕೆಜಿ ಹಳ್ಳಿ ಹಾಗೂ ಹುಬ್ಬಳ್ಳಿ ಪೊಲೀಸ್ ಠಾಣೆ ಧ್ವಂಸ ಕೇಸ್‌ನಲ್ಲಿದ್ದವರನ್ನು ಬಿಡಲು ಪತ್ರ ಬರೆಯುತ್ತೀರಿ. ಸಿದ್ದರಾಮಯ್ಯ ಏನು ಮಾಡುತ್ತಿದ್ದೀರಾ, ಐಸಿಸ್ ಸರ್ಕಾರ ಮಾಡಲು ಹೊರಟಿದ್ದೀರಾ ನೀವು. ಮೊಘಲ್ ಸರ್ಕಾರ, ಇಸ್ಲಾಮಿಕ್ ಸರ್ಕಾರ, ಐಸಿಸ್ ಸರ್ಕಾರ ನಡೆಸುತ್ತಿದ್ದೀರಾ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ತೀವ್ರ ವಾಗ್ದಾಳಿ ನಡೆಸಿದ್ದಾರೆ. ವಿಜಯಪುರ ನಗರದ ಸೈನಿಕ ಶಾಲಾ ಆವರಣದಲ್ಲಿರುವ ಹೆಲಿಪ್ಯಾಡ್‌ನಲ್ಲಿ ಇಂದು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ಗೆ ರಾಮಮಂದಿರ ಆಗಬೇಕಾಗಿರಲಿಲ್ಲ. ರಾಮಮಂದಿರದ ಕಲ್ಪನೆಯೂ ಅವರಿಗೆ ಇರಲಿಲ್ಲ. ಕಾಂಗ್ರೆಸ್‌ಗೆ ಹೊಟ್ಟೆ ಕಿಚ್ಚು, ಆತಂಕ ಶುರುವಾಗಿದೆ. ರಾಮ ಮಂದಿರಕ್ಕೆ ಹೋಗಬೇಕೋ ಅಥವಾ ಬೇಡವೋ ಎಂಬ ಗೊಂದಲದಲ್ಲಿ ಕಾಂಗ್ರೆಸ್‌ನವರು ಇದ್ದಾರೆ ಎಂದು ವಾಗ್ದಾಳಿ ಮಾಡಿದರು.

ರಾಮ ಮಂದಿರಕ್ಕೆ ವಿರೋಧ ಮಾಡಿದ್ದರು. ರಾಮ ಬರೀ ಕಲ್ಪಿತ ವ್ಯಕ್ತಿ ಎಂದು ವಾದ ಮಾಡಿದ್ದರು. ರಾಮ ಮಂದಿರವನ್ನು ಪ್ರಧಾನಿ ಮೋದಿಯವರು ಉದ್ಘಾಟನೆ ಮಾಡುವುದರ ಬಗ್ಗೆ ಕಾಂಗ್ರೆಸ್‌ನವರು ಖ್ಯಾತೆ ತೆಗೆಯುತ್ತಿದ್ದಾರೆ. ಇದನ್ನು ಜನರು ಒಪ್ಪದೆ ಇದ್ದಾಗ ಹಳೆ ಕೇಸ್ ಓಪನ್ ಮಾಡಿಸುತ್ತಿದ್ದಾರೆ. ಈಗ ರಾಮಮಂದಿರ ಹಳೆ ಕೇಸ್ ತೆಗೆದು ಅರೆಸ್ಟ್ ಮಾಡಿಸುತ್ತಿದ್ದಾರೆ. ಅರೆಸ್ಟ್ ಮಾಡಿಸುವ ನೀಚ ಕೃತ್ಯಕ್ಕೆ ಕಾಂಗ್ರೆಸ್ ಕೈ ಹಾಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅವರೇನು ಕಾನೂನು ತಜ್ಞರಾ: ಸಿದ್ದರಾಮಯ್ಯ

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆರೋಪಕ್ಕೆ ಸಿಎಂ ಸಿದ್ದರಾಮಯ್ಯ ಕೊಪ್ಪಳದಲ್ಲಿ ಇಂದು ಪ್ರತಿಕ್ರಿಯೆ ನೀಡಿದ್ದಾರೆ. ಅಪರಾಧಿ ಯಾವಾಗಲೂ ಅಪರಾಧಿನೇ. ಕೋರ್ಟ್‌ನಲ್ಲಿ ಖುಲಾಸೆಗೊಳ್ಳುವವರೆಗೂ ಅವರು ಅಪರಾಧಿನೇ. ಸಮಯ ಆದ ತಕ್ಷಣ ಅಪರಾಧ ಹೋಗುವುದಿಲ್ಲ, ಪ್ರಹ್ಲಾದ್ ಜೋಶಿಯವರಿಗೆ ಕಾನೂನು ಗೊತ್ತಿದೆಯೇ ಎಂದು ಕೇಳಿದರು.

ಸಮಯ ಆದ ತಕ್ಷಣ ಕೋರ್ಟ್‌ನಿಂದ ಅಪರಾಧ ಹೋಗುವುದಿಲ್ಲ. ಹಳೆ ಕೇಸುಗಳನ್ನು ಚುಪ್ತ ಮಾಡಿ ಎಂದು ಗೃಹ ಸಚಿವರು ಹೇಳಿದ್ದಾರೆ. ಅದಕ್ಕೋಸ್ಕರ ಹಳೆ ಕೇಸಿನಲ್ಲಿರುವವರನ್ನು ಬಂಧಿಸಿದ್ದಾರೆ. ಅಪರಾಧಿಗಳಿಗೆ ಬೆಂಬಲ ನೀಡುತ್ತಿರುವ ಬಿಜೆಪಿಯವರದ್ದು ನೀಚತನ ಕೃತ್ಯ ಎಂದರು.

ಈ ವಿಚಾರ ಬಗ್ಗೆ ಪೊಲೀಸ್ ನವರ ಜೊತೆ ವಿಚಾರ ಮಾಡಬೇಕು. ಪೊಲೀಸರು ಗೃಹ ಸಚಿವರು ಹೇಳಿದಂತೆ ಮಾಡಿದ್ದಾರೆ. ಪ್ರಹ್ಲಾದ್ ಜೋಶಿಯವರು ಕಾನೂನು ತಜ್ಞರೇ, ಅವರೇ ಕೋರ್ಟ್, ಪ್ರಹ್ಲಾದ್ ಜೋಶಿಯವರು ಹೇಳಿದ್ದು ವೇದವಾಕ್ಯನೇ, ಪ್ರಹ್ಲಾದ್ ಜೋಶಿಯವರು ರಾಜಕೀಯವಾಗಿ ಮಾತನಾಡುತ್ತಾರೆಯೇ ಹೊರತು ಕಾನೂನು ರೀತಿ ಮಾತನಾಡುತ್ತಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಟೀಕಿಸಿದರು.

ದ್ವೇಷದ ರಾಜಕಾರಣ ಮಾಡೋ ಕಾಂಗ್ರೆಸ್ಸಿನ ಅಂತ್ಯಕಾಲ ಆರಂಭವಾಗಿದೆ



ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ. ದ್ವೇಷ, ಸೇಡಿನ ರಾಜಕಾರಣದ ಮೂಲಕ ಕಾಂಗ್ರೆಸ್ ಅಂತ್ಯಕಾಲ ಆರಂಭವಾಗಿದೆ ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ವಾಗ್ದಾಳಿ ನಡೆಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ದೇಶದ ಕೋಟ್ಯಂತರ ಜನರ ರಾಮಮಂದಿರ ನಿರ್ಮಾಣದ ಸಂಕಲ್ಪವನ್ನು ಪ್ರಧಾನಿ ನರೇಂದ್ರ ಮೋದಿಜೀ ಅವರು ಈಡೇರಿಸಿದ್ದಾರೆ. ಒಂದೆಡೆ ರಾಮಮಂದಿರ ಉದ್ಘಾಟನೆಗೆ ದಿನ ನಿಗದಿಯಾಗಿದೆ. ಇನ್ನೊಂದು ಕಡೆ ಕಾಂಗ್ರೆಸ್ ಸರ್ಕಾರವು ಸುಮಾರು 31 ವರ್ಷಗಳಷ್ಟು ಹಳೆಯ ಪ್ರಕರಣಗಳನ್ನು ತೆಗೆದು ಹಿಂದೂಗಳನ್ನು ಬಂಧಿಸುತ್ತಿದೆ. ಇದು ಹಿಂದೂ ವಿರೋಧಿ ಸರ್ಕಾರ ಎಂದು ಟೀಕಿಸಿದರು. ಶ್ರೀರಾಮಚಂದ್ರನೇ ಕಾಲ್ಪನಿಕ ಎನ್ನುವ ಕಾಂಗ್ರೆಸ್ಸಿಗರು ಅಯೋಧ್ಯೆಯಲ್ಲಿ ಮಹರ್ಷಿ ವಾಲ್ಮೀಕಿ ದೇವಾಲಯದ ಬಗ್ಗೆ ಮಾತನಾಡುತ್ತಾರೆ. ಶ್ರೀರಾಮಚಂದ್ರನೇ ಕಾಲ್ಪನಿಕ ಎಂದಾದರೆ ಮಹರ್ಷಿ ವಾಲ್ಮೀಕಿ ಕುರಿತು ಮಾತನಾಡಲು ನಿಮಗೇನು ಹಕ್ಕಿದೆ ಎಂದು ಪ್ರಶ್ನಿಸಿದರು. ಮೋದಿಜೀ ಅವರು ಅಯೋಧ್ಯೆ ವಿಮಾನ ನಿಲ್ದಾಣವನ್ನು ಮಹರ್ಷಿ ವಾಲ್ಮೀಕಿ ವಿಮಾನ ನಿಲ್ದಾಣ ಎಂದು ನಾಮಕರಣ ಮಾಡಿದ್ದಾರೆ ಎಂದು ತಿಳಿಸಿದರು.

ಶ್ರೀರಾಮಮಂದಿರ ನಿರ್ಮಾಣದ ಕುರಿತು ಸಂತಸ ಸೂಚಿಸಿ ದೇಶದ 125 ಕೋಟಿ ಜನರು ಕುಣಿದು ಕುಪ್ಪಳಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಸರ್ಕಾರವು ದ್ವೇಷದ ರಾಜಕಾರಣ ಮಾಡುತ್ತಿದೆ. ಅದನ್ನು ತೀವ್ರವಾಗಿ ಖಂಡಿಸುತ್ತೇವೆ. ಅಲ್ಲದೆ ಇದರ ವಿರುದ್ಧ ದೊಡ್ಡ ಮಟ್ಟದ ಹೋರಾಟ ರೂಪಿಸುವುದಾಗಿ ಎಚ್ಚರಿಸಿದರು.

ನಿಮಗೆ ತಾಕತ್ ಇದ್ದರೆ ಕರಸೇವಕರನ್ನು ಬಂಧಿಸಿ: ಸಿಎಂ ವಿರುದ್ಧ ಕಿಡಿ



ಬೆಂಗಳೂರು: ಶುಭ ಸಂದರ್ಭದಲ್ಲಿ ಸಿದ್ದರಾಮಯ್ಯ ಅಪಶಕುನ ಆರಂಭಿಸಿದ್ದಾರೆ. ರಾವಣ ಮಾತ್ರ ರಾಮ ವಿರೋಧಿ ಅಲ್ಲ. ಸಿದ್ದರಾಮಯ್ಯ ಕೂಡ ರಾಮ ವಿರೋಧಿ. ನಿಮಗೆ ತಾಕತ್ ಇದ್ದರೆ ಕರಸೇವಕರ ಬಂಧನ ಮಾಡಿ, ನಾನು ಪಟ್ಟಿ ಕೊಡುತ್ತೇನೆ ಎಂದು ಮಾಜಿ ಸಚಿವ ಸುನೀಲ್ ಕುಮಾರ್ ಸವಾಲ್ ಹಾಕಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ರಾಮಜನ್ಮಭೂಮಿ ಹೋರಾಟಗಾರರ ಬಂಧನ ವಿಚಾರಕ್ಕೆ ಪ್ರತಿಕ್ರಿಯಿಸಿ, ನಾನೂ ಕರಸೇವಕ, ನಿಮಗೆ ತಾಕತ್ ಇದ್ದರೆ ಕರಸೇವಕರ ಬಂಧನ ಮಾಡಿ. ಇನ್ನೂ ಕಾಲ ಮಿಂಚಿಲ್ಲ, ಬದ್ಧತೆ ಇದ್ರೆ ಹಿಂದುತ್ವದ ಮೇಲೆ ನಂಬಿಕೆ ಇದ್ರೆ ರಾಮಮಂದಿರ ಉದ್ಘಾಟನೆಗೆ ಬನ್ನಿ. ಅಲ್ಪ ಸಂಖ್ಯಾತರಿಗೆ ಹತ್ತು ಸಾವಿರ ಕೋಟಿ ಕೊಡುವ ಬದ್ಧತೆ ರಾಜ್ಯದ ಹಿಂದೂ ದೇವಾಲಯಗಳ ಅಭಿವೃದ್ಧಿ ಕಡೆಗೂ ತೋರಿಸಿ. ರಾಜ್ಯದ ನೂರು ಹಿಂದೂ ದೇವಾಲಯಗಳ ಅಭಿವೃದ್ಧಿಗೆ ಸಿದ್ದರಾಮಯ್ಯ ಆದೇಶ ಹೊರಡಿಸಲಿ ಎಂದರು.

ರಾವಣ ಮಾತ್ರ ರಾಮ ವಿರೋಧಿ ಅಲ್ಲ. ಸಿದ್ದರಾಮಯ್ಯ ಕೂಡ ರಾಮ ವಿರೋಧಿ ಎನ್ನೋದನ್ನು ತೋರಿಸಿದ್ದಾರೆ. ನಿಮ್ಮ ಸರ್ಕಾರಕ್ಕೆ ತಾಕತ್ ಇದ್ದರೆ, ಸಿದ್ದರಾಮಯ್ಯ ನಿಮಗೆ ತಾಕತ್ ಇದ್ದರೆ, ಕರ ಸೇವಕರ ಬಂಧನ ಮಾಡಿ. ನಾನು ಪಟ್ಟಿ ಕೊಡುತ್ತೇನೆ. ನಾನು ಕರ ಸೇವೆಯಲ್ಲಿ ಭಾಗಿಯಾಗಿದ್ದೆ. ತಾಕತ್ತಿದ್ದರೆ ಬಂಧನ ಮಾಡಿ. ಸಿದ್ದರಾಮಯ್ಯ ನಿಮಗೆ ನನ್ನ ಸವಾಲು ಎಂದಿದ್ದಾರೆ.

ಬಂಧನ ಮಾಡಿದಾಕ್ಷಣ ಹಿಂದುತ್ವಕ್ಕೆ ಧಕ್ಕೆ ಮಾಡಲು ಸಾಧ್ಯವಿಲ್ಲ. ರಾಮ ಮಂದಿರ ಉದ್ಘಾಟನೆಗೆ ದೇಶ ಖುಷಿ ಪಡುತ್ತಿದೆ. ಆದರೆ ಸಿದ್ದರಾಮಯ್ಯ ನೀವು ಅಪಶಕುನ ತರಲು ಹೊರಟಿದ್ದೀರಿ. ಬಂಧನದ ಮೂಲಕ ಅಪಶಕುನ ಮಾಡುತ್ತಾ ಇದ್ದೀರಿ ಎಂದು ವಾಗ್ದಾಳಿ ನಡೆಸಿದರು. ಸಿಎಂ ಹಾಗೂ ಕ್ಯಾಬಿನೆಟ್ ಸಚಿವರು ಮನೆಯಲ್ಲಿ ನಂದಾದೀಪ ಬೆಳಗಿಸಲಿ. ಜ.22ರಂದು ಅಯೋಧ್ಯೆ ರಾಮಮಂದಿರ ಉದ್ಘಾಟನೆ ಆಗ್ತಿದೆ. ಈಗಾಗಲೇ ಪ್ರಧಾನಿಗಳು ಮನೆ ಮನೆಗಳಲ್ಲಿ ದೀಪ ಬೆಳಗಿಸುವಂತೆ ಕರೆ ಕೊಟ್ಟಿದ್ದಾರೆ.

10 ಗ್ರಾಂ ಚಿನ್ನದ ಬೆಲೆ 64,090 ರೂ.!



ನವದೆಹಲಿ: ಹೊಸವರ್ಷಕ್ಕೆ ಚಿನ್ನದ ಬೆಲೆಯಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದ್ದು ಗ್ರಾಹಕರ ಕೈ ಸುಡುವಂತಾಗಿದೆ. ಮಂಗಳವಾರ 24 ಕ್ಯಾರೆಟ್ 10 ಗ್ರಾಂ ಚಿನ್ನದ ಬೆಲೆಯಲ್ಲಿ 220 ರೂ. ಆಗಿದ್ದು ಆ ಮೂಲಕ 64,090 ರೂ.ಗೆ ಏರಿಕೆಯಾಗಿದೆ. ಇಂದು ಅಂದರೆ ಮಂಗಳವಾರ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ 22 ಕ್ಯಾರೆಟ್ ಚಿನ್ನದ ಬೆಲೆ 10 ಗ್ರಾಂಗೆ 58,750 ರೂ. ಮತ್ತು 24 ಕ್ಯಾರೆಟ್ ಚಿನ್ನದ ಬೆಲೆ ರೂ. 10 ಗ್ರಾಂಗೆ 64,090 ರೂ.ಗೆ ಏರಿಕೆಯಾಗಿದೆ. ನಿನ್ನೆ 22 ಕ್ಯಾರೆಟ್ ಚಿನ್ನದ ಬೆಲೆ 10 ಗ್ರಾಂಗೆ 58,550 ರೂ.ಮತ್ತು 24 ಕ್ಯಾರೆಟ್ ಚಿನ್ನದ ಬೆಲೆ ರೂ. 10 ಗ್ರಾಂಗೆ 63,870 ರೂ. ಇತ್ತು.


ಚಿನ್ನದ ಶುದ್ಧತೆಯನ್ನು ಗುರುತಿಸುವುದು ಹೇಗೆ: (ಇಂಟರ್‌ನ್ಯಾಷನಲ್ ಆರ್ಗನೈಸೇಶನ್ ಫಾರ್ ಸ್ಟ್ಯಾಂಡರ್ಡೈಸೇಶನ್) ಚಿನ್ನದ ಶುದ್ಧತೆಯನ್ನು ಗುರುತಿಸಲು ಇಂಟರ್‌ನ್ಯಾಷನಲ್ ಆರ್ಗನೈಸೇಶನ್ ಫಾರ್ ಸ್ಟ್ಯಾಂಡರ್ಡೈಸೇಶನ್ ಮೂಲಕ ಹಾಲ್ ಮಾರ್ಕ್‌ಗಳನ್ನು ನೀಡಲಾಗುತ್ತದೆ. 24 ಕ್ಯಾರೆಟ್ ಚಿನ್ನದ ಆಭರಣಗಳ ಮೇಲೆ 999, 23 ಕ್ಯಾರೆಟ್‌ನಲ್ಲಿ 958, 22 ಕ್ಯಾರೆಟ್‌ನಲ್ಲಿ 916, 21 ಕ್ಯಾರೆಟ್‌ನಲ್ಲಿ 875 ಮತ್ತು 18 ಕ್ಯಾರೆಟ್‌ನಲ್ಲಿ 750 ಎಂದು ಬರೆಯಲಾಗಿದೆ. ಹೆಚ್ಚಾಗಿ ಚಿನ್ನವನ್ನು 22 ಕ್ಯಾರೆಟ್‌ನಲ್ಲಿ ಮಾರಾಟ ಮಾಡಲಾಗುತ್ತದೆ. ಆದರೆ ಕೆಲವರು 18 ಕ್ಯಾರೆಟ್‌ಗಳನ್ನು ಸಹ ಬಳಸುತ್ತಾರೆ. ಕ್ಯಾರೆಟ್ 24 ಅನ್ನು ಮೀರುವುದಿಲ್ಲ ಮತ್ತು ಹೆಚ್ಚಿನ ಕ್ಯಾರೆಟ್ ಚಿನ್ನವು ಶುದ್ಧವಾಗಿರುತ್ತದೆ.

22 ಮತ್ತು 24 ಕ್ಯಾರೆಟ್ ಚಿನ್ನದ ನಡುವಿನ ವ್ಯತ್ಯಾಸ: 24 ಕ್ಯಾರೆಟ್ ಚಿನ್ನವು 99.9 ಪ್ರತಿಶತ ಶುದ್ಧವಾಗಿರುತ್ತದೆ ಮತ್ತು 22 ಕ್ಯಾರೆಟ್ ಚಿನ್ನವು ಸರಿಸುಮಾರು 91 ಪ್ರತಿಶತ ಶುದ್ಧವಾಗಿದೆ. 22 ಕ್ಯಾರೆಟ್ ಚಿನ್ನದಲ್ಲಿ ತಾಮ್ರ, ಬೆಳ್ಳಿ, ಸತು ಮುಂತಾದ ಇತರ ಲೋಹಗಳನ್ನು ಶೇ.9 ರಷ್ಟು ಮಿಶ್ರಾ ಮಾಡಿ ಆಭರಣಗಳನ್ನು ತಯಾರಿಸಲಾಗುತ್ತದೆ. 24 ಕ್ಯಾರೆಟ್ ಚಿನ್ನವು ಅತ್ಯಂತ ಶುದ್ಧವಾಗಿದ್ದರೂ, 24 ಕ್ಯಾರೆಟ್ ಚಿನ್ನದಿಂದ ಆಭರಣವನ್ನು ಮಾಡ ಲಾಗುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ.

ಹುಬ್ಬಳ್ಳಿಯಲ್ಲಿ ಕರಸೇವಕರ ಬಂಧನದಲ್ಲಿ ರಾಜಕಾರಣ ಇಲ್ಲ



ಬೆಂಗಳೂರು, ಜ.2(ಕೆಎಂಶಿ)–ಹುಬ್ಬಳ್ಳಿಯಲ್ಲಿ ಕರಸೇವಕರ ಬಂಧನ ವಿಷಯದಲ್ಲಿ ಯಾವುದೇ ದ್ವೇಷದ ರಾಜಕಾರಣ ಮಾಡುವುದಾಗಲೀ, ನಿರಪರಾಧಿಗಳನ್ನು ಬಂಧಿಸುವ ಕೆಲಸವಾಗಲೀ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಪ್ಪು ಮಾಡಿದವರಿಗೆ ಏನು ಮಾಡಬೇಕು, ಸುಮ್ಮನೆ ಬಿಟ್ಟು ಬಿಡಬೇಕೇ? ಹಳೇ ಪ್ರಕರಣಗಳನ್ನು ವಿಲೇವಾರಿ ಮಾಡಲು ಸೂಚಿಸಲಾಗಿದೆ. ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ. ನ್ಯಾಯಾಲಯದ ಸೂಚನೆ ಇದ್ದರೆ ಅದರಂತೆ ಕ್ರಮ ತೆಗೆದು ಕೊಳ್ಳಲಾಗುವುದು ಎಂದರು. ರಾಮಮಂದಿರ ಉದ್ಘಾಟನೆಗೆ ಯಾರಿಗೆ ಆಹ್ವಾನ ಹೋಗಿದೆ, ಬಿಟ್ಟಿದೆ, ಗೊತ್ತಿಲ್ಲ. ಆಹ್ವಾನ ಕೊಟ್ಟವರು ಹೋಗುತ್ತಾರೆ, ಇಲ್ಲದವರು ಇಲ್ಲ. ಅತಿಥಿ ಉಪನ್ಯಾಸಕರು ಖಾಯಂ ಮಾಡಿ ಎಂಬ ಬೇಡಿಕೆ ಇಟ್ಟಿದ್ದಾರೆ. ಖಾಯಂ ಮಾಡುವುದು ಕಷ್ಟದ ಕೆಲಸ. ಪಾದಯಾತ್ರೆ ಬಗ್ಗೆ ಅವ ರೊಂದಿಗೆ ಮಾತನಾಡಿದ್ದರೂ ಪಾದಯಾತ್ರೆ ಮಾಡುತ್ತಿದ್ದಾರೆ. ಬರ ಪರಿಹಾರ ನೀಡುವ ಪ್ರಕ್ರಿಯೆ ಪ್ರಾರಂಭವಾಗಿದ್ದು ಬೆಳೆ ನಷ್ಟಕ್ಕೆ ತಾತ್ಕಾಲಿಕ ಪರಿ ಹಾರವಾಗಿ 2,000 ರೂ.ಗಳನ್ನು ನೀಡಲಾಗುತ್ತಿದೆ, ಆಧಾರ್ ಲಿಂಕ್ ನಂತರ ರೈತರಿಗೆ ಮೊತ್ತ ತಲುಪಲಿದೆ ಎಂದರು.





ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರವರ ಕಛೇರಿ (ವಿದ್ಯುತ್ ವಿಭಾಗ), ಮೈಸೂರು ಮಹಾನಗರ ಪಾಲಿಕೆ, ಮೈಸೂರು–570024.

ಸಂಖ್ಯೆ:ಮೈನಪಾ/ಕಾ.ಇಂ(ವಿ)/ಟಿ.ಎನ್–12/2023–24 ದಿನಾಂಕ: 28.12.2023

ಅಲ್ಪಾವಧಿ ಟೆಂಡರ್ ಪ್ರಕಟಣೆ–12 (ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರುಗಳ ಕೋರಿಕೆ ಮೇರೆಗೆ 2023–24ನೇ ಸಾಲಿನ ಪಾಲಿಕೆ ಅನುದಾನ ಲೆಕ್ಕ ಶೀರ್ಷಿಕೆ ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1.	ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ)	04	15.10	03.01.2024	10.01.2024	11.01.2024

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು(ವಿದ್ಯುತ್ ವಿಭಾಗ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/837/23-24